ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬುದ್ಧನಿಗೆ ನಮನ
ಅಗರ್ತಲಾದಲ್ಲಿ ಭಾನುವಾರ ನಡೆದ ಬೌದ್ಧ ಬಿಕ್ಕುಗಳಿಗೆ ವಸ್ತ್ರದಾನ ಮಾಡುವ 'ಕಠಿಣ ಶಿವರ ದಾನ' ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರು ಬುದ್ಧನ ಮೂರ್ತಿಗೆ ನಮಿಸಿದರು

ನೃತ್ಯ ವೈಭವ
ಬೆಂಗಳೂರಿನಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಆಯೋಜಿಸಿದ್ದ ರಾಷ್ಟ್ರೀಯ ಸಂಗೀತ ನೃತ್ಯ ಮಹೋತ್ಸವದಲ್ಲಿ ಅರ್ಪಣಾ ವಿನೋದ್ ಮೆನನ್ ರವರು ಭರತನಾಟ್ಯ ಪ್ರದರ್ಶನ ನೀಡಿದರು

ಬಿಹಾರ: ಎನ್‌ಡಿಎ ಸೀಟು ಹಂಚಿಕೆ ಅಂತಿಮ 11 | ಮೆಕ್ಕೆಜೋಳ: ದರವಿದ್ದರೂ 'ಫಲ' ಸಿಗದ ಸ್ಥಿತಿ 10



ಆರ್‌ಎಸ್‌ಎಸ್‌ಗೆ ಅಂಕುಶ?

ಸಚಿವ ಪ್ರಿಯಾಂಕ್ ಪತ್ರ • ಪರಿಶೀಲಿಸಿ ತಕ್ಷಣ ಕ್ರಮಕ್ಕೆ ಸಿಎಸ್‌ಗೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಸ್ಥಳಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಿಗೆ ನಿಷೇಧ ಹೇರುವ ಕುರಿತಂತೆ ಪರಿಶೀಲಿಸಿ, ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ಸರ್ಕಾರಿ ಸ್ಥಳಗಳಲ್ಲಿ ಶಾಖೆ, ಸಾಂಘಿಕ್ ಅಥವಾ ಬೈಠಕ್ ಹೆಸರಿನಲ್ಲಿ ಆರ್‌ಎಸ್‌ಎಸ್ ನಡೆಸುವ ಎಲ್ಲ ಬಗೆಯ ಚಟುವಟಿಕೆಗಳಿಗೂ ನಿಷೇಧ ಹೇರಬೇಕೆಂದು ಮುಖ್ಯಮಂತ್ರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅ. 4ರಂದು ಪತ್ರ ಬರೆದಿದ್ದರು. ಪ್ರಿಯಾಂಕ್ ಬರೆದ ಈ ಪತ್ರದ ಮೇಲೆಯೇ ಮುಖ್ಯಮಂತ್ರಿ ಈ ನಿರ್ದೇಶನ ನೀಡಿದ್ದಾರೆ.

ಆರ್‌ಎಸ್‌ಎಸ್ ಸಂಘಟನೆಗೆ ನೂರು ವರ್ಷ ತುಂಬಿದ ಸಂಭ್ರಮಾಚರಣೆ ಸಂದರ್ಭದಲ್ಲೇ ರಾಜ್ಯದಲ್ಲಿ ಅದರ ಚಟುವಟಿಕೆಗೆ ಅಂಕುಶ ಹಾಕುವಂತೆ ಪ್ರಿಯಾಂಕ್ ಬರೆದ ಪತ್ರ ಮತ್ತು ಮುಖ್ಯಮಂತ್ರಿ ನೀಡಿರುವ ಸೂಚನೆ ಬಿಜೆಪಿ ನಾಯಕರನ್ನು ಕೆರಳಿಸಿದೆ.

ಪ್ರಿಯಾಂಕ್ ಬರೆದ ಪತ್ರದಲ್ಲಿ ಏನಿದೆ?: 'ಜನ ಸಮುದಾಯದಲ್ಲಿ ದ್ವೇಷ ಬಿತ್ತುವ ವಿಭಜಕ ಶಕ್ತಿಗಳು ತಲೆ ಎತ್ತಿದಾಗ ಅವುಗಳನ್ನು ನಿಗ್ರಹಿಸುವುಕ್ಕಾಗಿ ಹಾಗೂ ದೇಶದ ಜಾತ್ಯತೀತ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಸಮಗ್ರತೆ, ಸಮಾನತೆ ಮತ್ತು ಏಕತೆಯ ಮೂಲಭೂತ ತತ್ವಗಳನ್ನೊಳಗೊಂಡ ಸಂವಿಧಾನವು ನಮಗೆ ಅಧಿಕಾರವನ್ನು ನೀಡುತ್ತದೆ.'

'ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂಬ ಹೆಸರಿನ ಸಂಘಟನೆಯು ಸರ್ಕಾರಿ ಮತ್ತು ಅನುದಾನಿತ ಶಾಲೆಗಳು ಹಾಗೂ ಸಾರ್ವಜನಿಕ ಮೈದಾನಗಳನ್ನು ಬಳಸಿಕೊಂಡು ಶಾಖೆ ನಡೆಸುತ್ತಾ ಘೋಷಣೆಗಳನ್ನು ಕೂಗುತ್ತಾ ಮಕ್ಕಳು ಮತ್ತು ಯುವ ಸಮುದಾಯದ ಮನಸಿನಲ್ಲಿ ಭಾರತ ಏಕತೆಯ ವಿರುದ್ಧವಾಗಿ ಹಾಗೂ ಸಂವಿಧಾನದ ಆಶಯಗಳ ವಿರುದ್ಧವಾಗಿ ನಕಾರಾತ್ಮಕ ಆಲೋಚನೆಗಳನ್ನು ತುಂಬುತ್ತಿದೆ'.

'ಪೊಲೀಸ್ ಅನುಮತಿ ಪಡೆಯದೆ ದೊಣ್ಣೆಗಳನ್ನು ಹಿಡಿದು ಆಕ್ರಮಣಕಾರಿ ಪ್ರದರ್ಶನ ನಡೆಸುವ ಮೂಲಕ ಮುಗ್ಧ ಮಕ್ಕಳು ಹಾಗೂ ಯುವಜನರ ಮನಸಿನ ಮೇಲೆ ದುಷ್ಪರಿಣಾಮ ಬೀರಲಾಗುತ್ತಿದೆ. ನಾಡಿನ ಮಕ್ಕಳು, ಯುವ ಸಮುದಾಯ, ಸಾರ್ವಜನಿಕರು ಮತ್ತು ಸಮಾಜದ ಸ್ವಾಸ್ಥ್ಯದ ಹಿತದೃಷ್ಟಿಯಿಂದ ಸರ್ಕಾರಿ ಶಾಲೆಗಳು ಹಾಗೂ ಸರ್ಕಾರದ ಅನುದಾನಿತ ಶಾಲೆಗಳು ಮತ್ತು ಮೈದಾನಗಳು, ಉದ್ಯಾನವನಗಳು, ಮುಜರಾಯಿ ಇಲಾಖೆಯ ದೇವಸ್ಥಾನಗಳು, ಪುರಾತತ್ವ ಇಲಾಖೆಯ ಸ್ಥಳಗಳು ಸೇರಿದಂತೆ ಯಾವುದೇ ಸರ್ಕಾರಿ ಸ್ಥಳದಲ್ಲಿ ಆರ್‌ಎಸ್‌ಎಸ್ ಸಂಘಟನೆಯು ಶಾಖೆ, ಸಾಂಘಿಕ್ ಅಥವಾ ಬೈಠಕ್ ಹೆಸರಲ್ಲಿ ನಡೆಸುವ ಎಲ್ಲ ಬಗೆಯ ಚಟುವಟಿಕೆಗೆ ನಿಷೇಧ ಹೇರಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

6

'ಅಧಿಕಾರ ಇದ್ದಿದ್ದರೆ ಆರ್‌ಎಸ್‌ಎಸ್ ನಿಷೇಧಿಸುತ್ತಿದ್ದೆ'

'ಆರ್‌ಎಸ್‌ಎಸ್‌ಗೂ ತಾಲಿಬಾನ್‌ಗೂ ಏನೂ ವ್ಯತ್ಯಾಸ ಇಲ್ಲ. ನನ್ನ ಕೈಯಲ್ಲಿ ಅಧಿಕಾರ ಇದ್ದಿದ್ದರೆ ಆರ್‌ಎಸ್‌ಎಸ್ ಅನ್ನು ನಿಷೇಧ ಮಾಡುತ್ತಿದ್ದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮುಖ್ಯಮಂತ್ರಿಗೆ ಪತ್ರ ಬರೆದಿರುವ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ನನ್ನ ಇತಿಮಿತಿಯಲ್ಲಿ ನನಗೆ ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಸಾಧ್ಯವಿಲ್ಲ. ಹೀಗಾಗಿ ಪತ್ರ ಬರೆದಿದ್ದೇನೆ' ಎಂದರು.

'ಸರ್ಕಾರಿ ಶಾಲೆಯಲ್ಲಿ ಆರ್‌ಎಸ್‌ಎಸ್ ಬೈಠಕ್ ಆಗಬಾರದು. ನಮ್ಮದು ಬಸವ ತತ್ವದ ಮೇಲೆ ನಡೆಯುವ ಸರ್ಕಾರ' ಎಂದೂ ಹೇಳಿದರು.

'ಆರ್‌ಎಸ್‌ಎಸ್ ಬಗ್ಗೆ ಡಿ.ಕೆ. ಶಿವಕುಮಾರ್ ಅವರು ಸದನದಲ್ಲಿ ವ್ಯಂಗ್ಯ ಮಾಡಿದ್ದನ್ನು ಬೇರೆಯದೇ ರೀತಿಯಲ್ಲಿ ತಿರುಚಲಾಯಿತು. ಬೇರೆ ಸಂಘಟನೆಯ ಇತಿಹಾಸ ತಿಳಿಯುವುದು ತಪ್ಪಲ್ಲ' ಎಂದ ಪ್ರಿಯಾಂಕ್, 'ಸಂವಿಧಾನ ಬೇಡ, ಮನುಸ್ಮೃತಿ ಬೇಕು ಎಂದವರು ಯಾರು? ಸಾವರ್ಕರ್ ಅವರಿಗೆ ವೀರ ಬಿರುದು ಕೊಟ್ಟವರು ಯಾರು' ಎಂದೂ ಪ್ರಶ್ನಿಸಿದರು.

'ಧರ್ಮ ರಕ್ಷಣೆ, ಗೋ ರಕ್ಷಣೆ ಹೆಸರಲ್ಲಿ ಆರ್‌ಎಸ್‌ಎಸ್‌ನವರಿಂದ ವಿಷಬೀಜ ಬಿತ್ತುವ ಕೆಲಸ ಆಗುತ್ತಿದೆ. ಈ ತತ್ವ, ಸಿದ್ಧಾಂತ ಬಡವರಿಗೆ, ಹಿಂದುಳಿದವರಿಗೆ ಮಾತ್ರ ಏಕೆ? ಇತ್ತೀಚೆಗೆ ದೊಡ್ಡ ನಾಯಕರು ಗಣವೇಷ (ಆರ್‌ಎಸ್‌ಎಸ್ ಸಮವಸ್ತ್ರ) ಹಾಕುತ್ತಿದ್ದಾರೆ. ಈ ಹಿಂದೆ ಹೀಗೆ ಗಣವೇಷ ಹಾಕುತ್ತಿರಲಿಲ್ಲ. ಈ ನಾಯಕರ ಮಕ್ಕಳು ಎಲ್ಲಿದ್ದಾರೆ? ಅವರು ಯಾಕೆ ಗಣವೇಷ ಹಾಕುವುದಿಲ್ಲ? ಅವರ ಮಕ್ಕಳಿಗೆ ಯಾಕೆ ತ್ರಿಶೂಲ ದೀಕ್ಷೆ ಕೊಡುವುದಿಲ್ಲ? ಹೆಚ್ಚು ಮಕ್ಕಳು ಹುಟ್ಟಿಸಬೇಕು ಎಂದವರು ಯಾಕೆ ಬ್ರಹ್ಮಚಾರಿಗಳಾಗಿದ್ದಾರೆ' ಎಂದೂ ಕೇಳಿದರು.

'ಆರ್‌ಎಸ್‌ಎಸ್‌ನವರು ತಾಲಿಬಾನಿಗಳು'

'ಆರ್‌ಎಸ್‌ಎಸ್‌ನವರು ಭಾರತದ ತಾಲಿಬಾನಿಗಳು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಆರ್‌ಎಸ್‌ಎಸ್ ಚಟುವಟಿಕೆ ನಿಷೇಧಿಸುವ ವಿಚಾರವಾಗಿ ಕೇಳಿದ ಪ್ರಶ್ನೆಗೆ ಅವರು, 'ಸರ್ಕಾರಿ ಜಾಗದಲ್ಲಿ ಯಾವುದೇ ಕಾರ್ಯಕ್ರಮ ಮಾಡಬೇಕಾದರೆ ಸರ್ಕಾರದಿಂದ ಅನುಮತಿ ಪಡೆಯಬೇಕು. ಆದರೆ, ಆರ್‌ಎಸ್‌ಎಸ್ ನೋಂದಣಿಯೇ ಆಗಿಲ್ಲ' ಎಂದರು.

6

ತಾಕತ್ತಿದ್ದರೆ ನಿಷೇಧಿಸಿ ಆರ್.ಅಶೋಕ



'ನಿಮಗೆ ತಾಕತ್ತಿದ್ದರೆ ಆರ್‌ಎಸ್‌ಎಸ್ ಮತ್ತು ಸಂಘದ ಚಟುವಟಿಕೆ ನಿಷೇಧ ಮಾಡಿ ತೋರಿಸಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸವಾಲು ಹಾಕಿದ್ದಾರೆ.

'ಸಂಘ ಮತ್ತು ಸಂಘದ ಚಟುವಟಿಕೆಗಳನ್ನು ನಿಷೇಧ ಮಾಡುವುದು ಅಸಾಧ್ಯ. ನೀವು ನಂಬಿರುವ ಸಿದ್ಧಾಂತದ ಬಗ್ಗೆ ನಿಜಕ್ಕೂ ಬದ್ಧತೆ ಇದ್ದರೆ ನಿಷೇಧ ಮಾಡಿ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

6

5 ದಿನದ 'ಪುಸ್ತಕ ಮೇಳ'ಕ್ಕೆ ₹4.50 ಕೋಟಿ ವೆಚ್ಚ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿಧಾನಸಭೆ ಸಚಿವಾಲಯದ ವತಿಯಿಂದ ಫೆ. 27ರಿಂದ ಮಾರ್ಚ್ 3ರವರೆಗೆ ವಿಧಾನಸೌಧದ ಆವರಣದಲ್ಲಿ ಐದು ದಿನ ಆಯೋಜಿಸಲಾಗಿದ್ದ 'ಪುಸ್ತಕ ಮೇಳ- 2025'ಕ್ಕೆ ₹4.50 ಕೋಟಿಗೂ ಹೆಚ್ಚು ವೆಚ್ಚವಾಗಿದೆ.

ಮಾಹಿತಿ ಹಕ್ಕಿನಡಿ ಪಡೆದ ದಾಖಲೆಗಳಿಂದ ಈ ವಿಷಯ ಬಹಿರಂಗವಾಗಿದೆ. ಈ ಮೇಳದ ವೆಚ್ಚಕ್ಕೆ ಪ್ರಯಾಣ ವೆಚ್ಚಗಳಡಿ ಲಭ್ಯ ಇರುವ ಅನುದಾನದಲ್ಲಿ ₹4.50 ಕೋಟಿಯನ್ನು ಸಾಮಾನ್ಯ ವೆಚ್ಚಗಳಡಿ ಮರು ಹೊಂದಾಣಿಕೆ ಮಾಡುವಂತೆ ವಿಧಾನ ಸಭೆ ಸಚಿವಾಲಯವು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಅದಕ್ಕೆ ಸ್ಪಂದಿಸಿದ್ದ ಇಲಾಖೆ, ₹1 ಕೋಟಿ ಮಾತ್ರ ಮರು ಹೊಂದಾಣಿಕೆ ಮಾಡಲು ಫೆ. 25ರಂದು ಮಂಜೂರಾತಿ ನೀಡಿತ್ತು.

ನಂತರ, ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಿದ್ದ ಸಚಿವಾಲಯವು, ₹3.50 ಕೋಟಿ ಮರು ಹೊಂದಾಣಿಕೆಗೆ ಕೋರಿತ್ತು. ಮಾರ್ಚ್ 5ರಂದು ಕೋರಿಕೆಯಷ್ಟು ಹಣ ಬಳಸಿಕೊಳ್ಳಲು ಆರ್ಥಿಕ ಇಲಾಖೆ ಅನುಮೋದಿಸಿದೆ.

ಮೇಳದಲ್ಲಿ ಮೈಸೂರು ವಿಶ್ವವಿದ್ಯಾಲಯ ಹಾಗೂ ಕನ್ನಡ ವಿಶ್ವವಿದ್ಯಾಲಯಗಳ ಪ್ರಸಾರಾಂಗ, ಕನ್ನಡ ಸಾಹಿತ್ಯ ಪರಿಷತ್, ವಿವಿಧ ಅಕಾಡೆಮಿಗಳು ಸೇರಿದಂತೆ 160 ಮಳಿಗೆಗಳಿಗೆ ವ್ಯವಸ್ಥೆ ಮಾಡಲಾಗಿತ್ತು.

7

ಏಳು ರೇಷ್ಮೆ ಶಲ್ಯಕ್ಕೆ ₹88,668



ಪುಸ್ತಕ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಸನ್ಮಾನಿಸಲು ಏಳು ರೇಷ್ಮೆ ಶಲ್ಯಗಳನ್ನು ಗರಿಷ್ಠ ಪ್ರಮಾಣದ ರಿಯಾಯಿತಿ ನೀಡಿ ಒದಗಿಸುವಂತೆ ವಿಧಾನಸಭೆ ಸಚಿವಾಲಯವು ರೇಷ್ಮೆ ಉದ್ಯಮಗಳ ನಿಗಮಕ್ಕೆ ಮನವಿ ಮಾಡಿತ್ತು. ನಿಗಮವು 2.25 ಮೀಟರ್ ಉದ್ದದ ಪ್ರತಿ ಶಲ್ಯಕ್ಕೆ ತಲಾ ₹13,935 ದರದಲ್ಲಿ ಶೇ 10ರಷ್ಟು ರಿಯಾಯಿತಿ ನೀಡಿತ್ತು. ಅದಕ್ಕೆ ತೆರಿಗೆ ಸೇರಿ ತಲಾ ₹13,168ರಂತೆ ಒಟ್ಟು ₹92,180 ಮೊತ್ತದ ಬಿಲ್ ಅನ್ನು ಸಚಿವಾಲಯಕ್ಕೆ ಸಲ್ಲಿಸಿದೆ. ಸರ್ಕಾರವು ₹3,512 ಕಡಿತ ಮಾಡಿ ₹88,668 ಪಾವತಿಸಿದೆ.

ಯಾವುದಕ್ಕೆ ಎಷ್ಟು ವೆಚ್ಚ? (₹ ಗಳಲ್ಲಿ)

ಅತಿಥಿಗಳ ವಿಮಾನಯಾನದ ಖರ್ಚು	87,429
ಅತಿಥಿಗಳ ವಾಸ್ತವ್ಯ, ಊಟೋಪಚಾರ	41,943
ಗುರುತಿನ ಚೀಟಿ, ಟ್ಯಾಗ್, ಪ್ಲಾಸ್ಟಿಕ್ ಪೌಚ್	83,190
ದೀಪಾಲಂಕಾರ	21,34,258
ಜಾಹೀರಾತು ವೆಚ್ಚ	31,59,417
ಬಿಲ್ ಬೋರ್ಡ್, ಅಂಡರ್ ಪಾಸ್ ಮತ್ತು ಎಲ್‌ಇಡಿ	14,49,333
ಟಿವಿ, ವಿಡಿಯೊ, ಎಫ್.ಎಂ ರೇಡಿಯೊ	46,87,923
ಲಾಫಿಂಗ್ ವಾಟರ್ ಪ್ರೊಡಕ್ಷನ್ ಪ್ರೈ.ಲಿ.	1,56,16,663
ಗಣ್ಯರಿಗೆ ಪೇಟ, ಶಾಲು, ಹಾರ	1,34,033
ರೇಷ್ಮೆ ಶಲ್ಯ	88,668
ಕಥಕ್ ನೃತ್ಯ ಪ್ರದರ್ಶನ	98,000
ಸ್ಯಾಕ್ಸೋಫೋನ್ ಕಾರ್ಯಕ್ರಮ ಸಂಭಾವನೆ	98,000
ವಾದ್ಯ ಸಂಗೀತ, ಸುಗಮ ಸಂಗೀತ, ಜನಪದ ನೃತ್ಯ	3,75,000

ಪಾಕ್- ಅಫ್ಗನ್ ಸಂಘರ್ಷ

ಇಸ್ಲಾಮಾಬಾದ್/ ಪೆಶಾವರ (ಪಿಟಿಐ/ ಎಎಫ್‌ಪಿ): ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಪಡೆಗಳು ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೆ ಭಾರಿ ಸಂಘರ್ಷ ನಡೆಸಿದ್ದು, ಗಡಿಯುದ್ದಕ್ಕೂ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಅಫ್ಗನ್ ಪಡೆಗಳು ನಡೆಸಿದ 'ಅಪ್ರಚೋದಿತ' ದಾಳಿಗೆ ಪ್ರತಿಕ್ರಿಯೆಯಾಗಿ ಪಾಕಿಸ್ತಾನವು ಅಫ್ಗನ್‌ನ 19 ಗಡಿ ಭದ್ರತಾ ಠಾಣೆಗಳು ಮತ್ತು 'ಭಯೋತ್ಪಾದಕರ ಅಡಗುತಾಣ'ಗಳನ್ನು ವಶಪಡಿಸಿಕೊಂಡಿದೆ ಎಂದು ಪಾಕ್ ಸೇನೆಯ ಮೂಲಗಳು ಭಾನುವಾರ ತಿಳಿಸಿವೆ. ಸಾವು–ನೋವಿನ ಬಗ್ಗೆ ಎರಡೂ ಕಡೆಯವರು ಭಿನ್ನ ಹೇಳಿಕೆ ನೀಡಿದ್ದಾರೆ.

ತಾನು ನಡೆಸಿದ ಪ್ರತೀಕಾರದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ 58 ಸೈನಿಕರು ಮೃತಪಟ್ಟಿದ್ದು, 30 ಮಂದಿ ಗಾಯಗೊಂಡಿದ್ದಾರೆ ಎಂದು ಅಫ್ಗಾನಿಸ್ತಾನ ಹೇಳಿಕೊಂಡಿದೆ. ತನ್ನ 9 ಯೋಧರು ಹುತಾತ್ಮರಾಗಿರುವುದಾಗಿಯೂ ತಿಳಿಸಿದೆ.

ಆದರೆ, ಸಂಘರ್ಷದಲ್ಲಿ ತನ್ನ 23 ಯೋಧರು ಮೃತಪಟ್ಟಿರುವುದಾಗಿ ಪಾಕಿಸ್ತಾನ ಹೇಳಿದೆ.

10

'ಗ್ಯಾರಂಟಿ'ಗಳಿಂದ ಅಭಿವೃದ್ಧಿಗೆ ಹಿನ್ನಡೆ: ದೇಶಪಾಂಡೆ

ಪ್ರಜಾವಾಣಿ ವಾರ್ತೆ

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): 'ನಾನು ಮುಖ್ಯಮಂತ್ರಿ ಆಗಿದ್ದರೆ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರಲಿಲ್ಲ' ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ಆರ್.ವಿ ದೇಶಪಾಂಡೆ

'ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಹೊರೆ ಆಗಿದೆ. ಜನರಿಗೆ ಅನುಕೂಲವಾಗಿರುವುದು ಒಂದೆಡೆ ಆದರೆ, ಇನ್ನೊಂದೆಡೆ ಸರ್ಕಾರ ನಡೆಸಲು ಕಷ್ಟವಾಗಿದೆ' ಎಂದು ಭಾನುವಾರ ಹೇಳಿದರು.

'ಮಹಿಳೆಯರು ಎಲ್ಲ ಸೌಲಭ್ಯಗಳನ್ನೂ ಪಡೆಯುತ್ತಿದ್ದಾರೆ. ಪುರುಷರಿಗೆ ಯಾವುದೇ ಯೋಜನೆ ಇಲ್ಲ. ಸರ್ಕಾರದ ಈ ಯೋಜನೆಗಳನ್ನು ಜನರಿಗೆ ತಲುಪಿಸಲು ಅನೇಕ ಸಮಿತಿಗಳನ್ನು ರಚಿಸಲಾಗಿದೆ. ಅವುಗಳನ್ನು ನಿಭಾಯಿಸುವುದೇ ಆಗಿದೆ. ಹೀಗಾಗಿ ರಾಜ್ಯದಲ್ಲಿ ಅಭಿವೃದ್ಧಿಯ ವೇಗ ತಗ್ಗಿದೆ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ

ಕ್ರೇನ್ ಟವರ್ ಬಿದ್ದು ಐವರಿಗೆ ಗಾಯ

ನಮ್ಮ ಮೆಟ್ರೊ ಕಾಮಗಾರಿಗೆ ಬಳಕೆ

• ಇಬ್ಬರ ಸ್ಥಿತಿ ಗಂಭೀರ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮೆಟ್ರೊ ಕಾಮಗಾರಿಗೆ ಬಳಸುವ ಬೃಹತ್ ಗಾತ್ರದ ಕ್ರೇನ್‌ನ ಟವರ್ ತುಂಡಾಗಿ ಕಾರ್ಮಿಕರ ಶೆಡ್‌ಗಳ ಮೇಲೆ ಬಿದ್ದ ಪರಿಣಾಮ ಐವರು ಕಾರ್ಮಿಕರು ಗಾಯಗೊಂಡಿದ್ದು, ನಾಲ್ಕು ಮನೆಗಳಿಗೆ ಹಾನಿಯಾಗಿರುವ ಘಟನೆ ಆವಲಹಳ್ಳಿಯ ಮೇಡಹಳ್ಳಿಯಲ್ಲಿ ಭಾನುವಾರ ನಡೆದಿದೆ.

ಘಟನೆಯಲ್ಲಿ ಬಿಹಾರದ ಲಾಲೂ (30), ಕುರ್ಬನ್ (19), ಇಲಿಯಾಜ್ (38), ಸಮೀಮ್ (28) ಮತ್ತು ಶಾಮದೇವ್ (56) ಗಾಯಗೊಂಡಿದ್ದು, ಶ್ರೀಸತ್ಯಸಾಯಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಈ ಪೈಕಿ ಲಾಲೂ ಮತ್ತು ಕುರ್ಬನ್ ತಲೆಗೆ ತೀವ್ರ ಪೆಟ್ಟು ಬಿದ್ದಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಕಾರ್ಮಿಕರು ವಾಸವಾಗಿದ್ದ ಶೆಡ್‌ಗಳು ಹಾನಿಗೀಡಾಗಿವೆ. ಬೆಳಿಗ್ಗೆ 11.30ರ ಸುಮಾರಿಗೆ ಮೇಡಹಳ್ಳಿ ಮುಖ್ಯರಸ್ತೆಯಲ್ಲಿ ದುರ್ಘಟನೆ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮೆಡಹಳ್ಳಿ ಬಳಿ ಮೆಟ್ರೊ ಕಾಮಗಾರಿ ನಡೆಯುತ್ತಿದ್ದು, ಎಎಸ್ ಕ್ರೇನ್ ಸರ್ವೀಸ್‌ನಿಂದ ಭಾರೀ ಗಾತ್ರದ ವಸ್ತುಗಳನ್ನು ಮೇಲಕ್ಕೆ ಎತ್ತುವುದು, ಇಳಿಸುವುದು ಮಾಡಲಾಗುತ್ತಿದೆ. ಆದರೆ, ಜನವಸತಿ ಪ್ರದೇಶದಲ್ಲಿ ಅನುಮತಿ ಇಲ್ಲದೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಈ ಹಿಂದೆ ಸಾಕಷ್ಟು ಬಾರಿ ಸ್ಥಳೀಯರು ಪೊಲೀಸರು, ಬಿಬಿಎಂಪಿಗೆ ದೂರು ನೀಡಿದ್ದರು. ಆದರೂ ಕ್ರಮಕೈಗೊಂಡಿಲ್ಲ.

ಜನ ವಸತಿ ಪ್ರದೇಶ ಸಮೀಪದ ಖಾಲಿ ಜಾಗದಲ್ಲಿ ಕ್ರೇನ್‌ಗಳನ್ನು ನಿಲುಗಡೆ ಮಾಡಲಾಗಿದ್ದು, ಭಾನುವಾರ ಬೆಳಿಗ್ಗೆ ಈ ಜಾಗದಲ್ಲಿ ಕ್ರೇನ್‌ಗಳನ್ನು ದುರಸ್ತಿ ಮಾಡಿ, ಪ್ರಾಯೋಗಿಕವಾಗಿ ಕೆಲ ವಸ್ತುಗಳನ್ನು ಎತ್ತುವುದು ಮಾಡಲಾಗುತ್ತಿತ್ತು. ಈ ವೇಳೆ ಕ್ರೇನ್ ಟವರ್ ತುಂಡಾಗಿ ಕಾರ್ಮಿಕರು ವಾಸವಿದ್ದ ಶೆಡ್‌ಗಳ ಮೇಲೆ ಬಿದ್ದಿದೆ.

ಕ್ರೇನ್‌ಗಳು ಚಂದ್ರಶೇಖರ್ ಎಂಬುವರಿಗೆ ಸೇರಿದ್ದು ಎಂದು ಪೊಲೀಸರು ಮಾಹಿತಿ ನೀಡಿದರು. ಈ ಸಂಬಂಧ ಆವಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖ್ಯಾಂಶಗಳು

- ಮೇಡಹಳ್ಳಿ ಬಳಿ ಮೆಟ್ರೊ ರೈಲು ಕಾಮಗಾರಿ
- ಭಾರಿ ಗಾತ್ರದ ವಸ್ತು ಮೇಲೆತ್ತುತ್ತಿದ್ದ ಕ್ರೇನ್
- ಅನುಮತಿ ಇಲ್ಲದೆ ಬಳಕೆ: ನಾಗರಿಕರಿಂದ ಹಲವು ಬಾರಿ ದೂರು

ಮೆಟ್ರೊ ಕಾಮಗಾರಿಗೆ ಬಳಸುತ್ತಿರುವ ಬೃಹತ್ ಗಾತ್ರದ ಕ್ರೇನ್‌ನ ಟವರ್ ತುಂಡಾಗಿ ಕಾರ್ಮಿಕರ ಶೆಡ್‌ಗಳ ಮೇಲೆ ಬಿದ್ದಿದೆ

‘ಜಿಬಿಜಿ ಕಾಯ್ದೆ ನಗರ ಆಡಳಿತಕ್ಕೆ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯು ನಗರ ಆಡಳಿತಕ್ಕೆ ಮಾದರಿ ಆಗಿದೆ’ ಎಂದು ಶಿವಾಜಿ ನಗರ ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಮತ್ತು ಜನಾಗ್ರಹ ಶನಿವಾರ ಆಯೋಜಿಸಿದ್ದ ‘ಗ್ರೇಟರ್ ಬೆಂಗಳೂರು ಆಡಳಿತ (ಜಿಬಿಜಿ) ಕಾಯ್ದೆ ಬೆಂಗಳೂರಿಗೆ ಫಲ ನೀಡಬಹುದೇ?’ ಎಂಬ ಸಂವಾದದಲ್ಲಿ ಅವರು ಮಾತನಾಡಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ‘ಜಿಬಿಜಿ ಮಸೂದೆಯು ಬೆಂಗಳೂರಿನ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಇದು ಕೆಲವರ ಕೈಯಲ್ಲಿ ಮಾತ್ರ ಅಧಿಕಾರ ಕೇಂದ್ರೀಕರಿಸುತ್ತದೆ’ ಎಂದು ಅಭಿಪ್ರಾಯಪಟ್ಟರು.

ಬ್ರ್ಯಾಂಡ್ ಬೆಂಗಳೂರು ಸಮಿತಿಯ ಸದಸ್ಯರಾದ ವಿ. ರವಿಚಂದರ್ ಮಾತನಾಡಿ, ‘ಜಿಬಿಜಿ ಕಾಯ್ದೆಯು ಭಾರತದಲ್ಲಿ ಮೆಗಾಸಿಟಿಗಳಿಗೆ ಒಂದು ದಿಟ್ಟ ಪ್ರಯೋಗವಾಗಿದೆ. ಈ ಕಾಯ್ದೆಯನ್ನು ಹೇಗೆ ಅನುಷ್ಠಾನ ಮಾಡಲಾಗುತ್ತದೆ ಹಾಗೂ ನಾಗರಿಕರು ಈ ಕಾನೂನಿನ ನಿಯಮವನ್ನು ಹೇಗೆ ಪಾಲಿಸುತ್ತಾರೆ ಎಂಬುದರ ಮೇಲೆ ಇದರ ಯಶಸ್ಸು ಅವಲಂಬಿತವಾಗಿದೆ’ ಎಂದರು.

ಜನಾಗ್ರಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್ ಸಂವಾದವನ್ನು ನಿರ್ವಹಿಸಿದರು. ಜನಾಗ್ರಹ ಮತ್ತು ಜನ ಅರ್ಬನ್ ಸ್ಪೇಸ್ ಫೌಂಡೇಷನ್‌ನ ಪಾಲಿಸಿ ವಿಭಾಗದ ಸಹಾಯಕ ನಿರ್ದೇಶಕರಾದ ವಿ.ಆರ್. ವಚನ ಉಪಸ್ಥಿತರಿದ್ದರು.

ಮರಕ್ಕೆ ಬೈಕ್ ಡಿಕ್ಕಿ : ಸವಾರ ಸಾವು

ಬೆಂಗಳೂರು: ರಸ್ತೆ ಬದಿಯ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ಆರ್.ಟಿ.ನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕಾಕ್ಸ್‌ಟೌನ್‌ನ ಐದನೇ ಕ್ರಾಸ್ ನಿವಾಸಿ ಕ್ರಿಸ್ಟೋಫರ್ ವಿಜಯ (50) ಮೃತ ವ್ಯಕ್ತಿ. ಶನಿವಾರ ರಾತ್ರಿ ಮೇಖ್ರಿ ಸರ್ಕಲ್ ಕಡೆಯಿಂದ ಜಯಮಹಲ್ ಮುಖ್ಯ ರಸ್ತೆ ಮಾರ್ಗವಾಗಿ ಟಿ.ವಿ ಟವರ್ ಬಳಿ ಬೈಕ್‌ನಲ್ಲಿ ಚಲಿಸುತ್ತಿದ್ದ ವೇಳೆ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿದ್ದಾರೆ. ಇದರಿಂದಾಗಿ ತೀವ್ರವಾಗಿ ಗಾಯಗೊಂಡರು.

ಸಾರ್ವಜನಿಕರ ಸಹಾಯದಿಂದ ಆಂಬುಲೆನ್ಸ್ ಮೂಲಕ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರೀಕ್ಷಿಸಿದ ವೈದ್ಯರು ಮಾರ್ಗಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಆರ್.ಟಿ.ನಗರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅತಿ ವೇಗ ಮತ್ತು ಅಜಾಗರೂಕತೆ ಕಾರಣ ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಸುದ್ದಿ 2 ನಿಮಿಷ

ಕಿದ್ವಾಯಿ: 450 ಹಾಸಿಗೆಯ ಬ್ಲಾಕ್ ನಿರ್ಮಾಣ: ಶರಣಪ್ರಕಾಶ ಪಾಟೀಲ

ಬೆಂಗಳೂರು: ‘ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸೇವೆ ವಿಸ್ತರಿಸುವ ಉದ್ದೇಶದಿಂದ ಶೀಘ್ರದಲ್ಲೇ ಹೊಸ ಬ್ಲಾಕ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಹೆಚ್ಚುವರಿಯಾಗಿ 450 ಹಾಸಿಗೆ ಲಭ್ಯವಾಗಲಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.

ಸಂಸ್ಥೆಯ ಪರಿಶೀಲನಾ ಸಭೆ ನಡೆಸಿದ ಅವರು, ಹೊಸ ಯೋಜನೆ ಸಂಬಂಧ ಆದಷ್ಟು ಬೇಗ ನೀಲನಕ್ಷೆಯನ್ನು ಸಲ್ಲಿಸುವಂತೆ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದರು. ‘ಪ್ರಸ್ತುತ ಕಿದ್ವಾಯಿಯಲ್ಲಿ 720 ಹಾಸಿಗೆಗಳಿವೆ. ಆದರೆ, ರೋಗಿಗಳ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಿದೆ. ಹಾಸಿಗೆ ಕೊರತೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಹೊಸ ಬ್ಲಾಕ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಇದರಿಂದ ಖಾಸಗಿ ಕ್ಯಾನ್ಸರ್ ಆಸ್ಪತ್ರೆಗಳಿಗೆ ರೋಗಿಗಳು ಹೋಗುವುದು ತಪ್ಪುತ್ತದೆ. ಆರ್ಥಿಕ ದುರ್ಬಲ ವರ್ಗದವರಿಗೆ ಸಾರ್ವಜನಿಕ ಆರೋಗ್ಯ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ’ ಎಂದರು.

ದಾಖಲಿಸಿಕೊಳ್ಳಿ: ‘ರೋಗ ನಿರ್ಣಯಕ್ಕಾಗಿ ಬರುವವರಿಗೆ ಅಂತಿಮ ವರದಿಗಳು ದೊರೆಯುವವರೆಗೆ ಆಸ್ಪತ್ರೆಯ ವಾರ್ಡ್‌ಗಳಲ್ಲಿ ಒಳರೋಗಿಗಳಾಗಿ ದಾಖಲಿಸಿಕೊಳ್ಳಬೇಕು’ ಎಂದು ಸಚಿವರು ಇದೇ ವೇಳೆ ಸಂಸ್ಥೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ‘ಬೆಂಗಳೂರಿನ ರೋಗಿಗಳು ಹೆಚ್ಚಿನ ತೊಂದರೆಗಳನ್ನು ಎದುರಿಸದಿದ್ದರೂ, ಉತ್ತರ ಕರ್ನಾಟಕದವರಿಗೆ ಈ ರೀತಿಯ ಆಶ್ರಯದ ಅಗತ್ಯವಿದೆ’ ಎಂದು ಹೇಳಿದರು.

ಸ್ತನ ಕ್ಯಾನ್ಸರ್: ಆರಂಭಿಕ ಪತ್ತೆ ಬಗ್ಗೆ ಬೈಕಥಾನ್‌ನಲ್ಲಿ ಜಾಗೃತಿ

ಬೆಂಗಳೂರು: ಸ್ತನ ಕ್ಯಾನ್ಸರ್ ಜಾಗೃತಿ ಮಾಸಾಚರಣೆಯ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಬ್ರೇಕ್ ಫಾರ್ ಬ್ರೆಸ್ಟ್ ಕ್ಯಾನ್ಸರ್’ ಬೈಕಥಾನ್‌ನಲ್ಲಿ ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮತ್ತು ತಡೆಗಟ್ಟುವಿಕೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ಬೈಕಥಾನ್‌ನಲ್ಲಿ 300ಕ್ಕೂ ಅಧಿಕ ಮಹಿಳಾ ಬೈಕರ್‌ಗಳು ಪಾಲ್ಗೊಂಡಿದ್ದರು. ಈ ಅಭಿಯಾನದ ಭಾಗವಾಗಿ ಪಾಲ್ಗೊಂಡಿದ್ದ ಎಲ್ಲ ಮಹಿಳಾ ಬೈಕರ್‌ಗಳಿಗೆ ಉಚಿತ ಸ್ತನ ಪರೀಕ್ಷೆ ಮತ್ತು ಮ್ಯಾಮೋಗ್ರಾಮ್ ಸೌಲಭ್ಯವನ್ನು ಕಲ್ಪಿಸಲಾಗಿತ್ತು.

ಮೆಡಿಕಲ್ ಅಂಕಾಲಜಿ ವಿಭಾಗದ ಸಲಹೆಗಾರ್ತಿ ಡಾ. ಸ್ಮಿತಾ ಸಲ್ಡಾನಾ, ‘ಜಗತ್ತಿನಲ್ಲಿ ಪ್ರತಿ 60 ಸೆಕೆಂಡ್‌ಗೆ ನಾಲ್ವರು ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಸ್ವಯಂ ಪರೀಕ್ಷೆ, ಸಕಾಲಿಕ ತಪಾಸಣೆ, ಆರೋಗ್ಯಕರ ಜೀವನ ಶೈಲಿಯಿಂದ ಸ್ತನ ಕ್ಯಾನ್ಸರ್ ಅಪಾಯ ಕಡಿಮೆ’ ಎಂದು ಹೇಳಿದರು.

ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಕರ್ನಾಟಕ ವಿಭಾಗದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಮನೀಷಾ ಕುಮಾರ್, ‘ಆರಂಭಿಕ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾದರೆ ಜೀವ ಉಳಿಸಬಹುದು’ ಎಂದರು.

ಕೊತ್ತನೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ದೊರೆತಿದ್ದ ಅಸ್ಥಿಪಂಜರ

ಹಲ್ಲು ಸೆಟ್‌ನಿಂದ ವ್ಯಕ್ತಿಯ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರಿನ ನಿರ್ಮಾಣ ಹಂತದ ಕಟ್ಟಡದಲ್ಲಿ ಪತ್ತೆಯಾದ ಅಸ್ಥಿಪಂಜರ ಪ್ರಕರಣದ ತನಿಖೆ ನಡೆಸಿದ ಕೊತ್ತನೂರು ಠಾಣೆ ಪೊಲೀಸರು, ಘಟನಾ ಸ್ಥಳದಲ್ಲಿ ಸಿಕ್ಕ ಹಲ್ಲು ಸೆಟ್‌ನಿಂದ ಮೃತ ವ್ಯಕ್ತಿಯ ಗುರುತು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಎರಡು ವರ್ಷದ ಹಿಂದೆ ನಾಪತ್ತೆಯಾಗಿದ್ದ ಆವಲಹಳ್ಳಿಯ 69 ವರ್ಷದ ಸೋಮಯ್ಯ ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಕೊತ್ತನೂರಿನ ಸಮೃದ್ಧಿ ಅಪಾರ್ಟ್‌ಮೆಂಟ್ ಸಮೀಪ ಹತ್ತು ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿರುವ ಕಟ್ಟಡದಲ್ಲಿ ಅಕ್ಟೋಬರ್ 4ರಂದು ಅಸ್ಥಿಪಂಜರ ಪತ್ತೆಯಾಗಿತ್ತು.

ಪೊಲೀಸರು ಅಸ್ಥಿಪಂಜರ ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ತನಿಖೆ ವೇಳೆ ಅಸ್ಥಿಪಂಜರ ಸಿಕ್ಕ ಸ್ಥಳದಲ್ಲಿ ಹಲ್ಲು ಸೆಟ್‌ವೊಂದು ಪತ್ತೆ ಯಾಗಿದ್ದು, 2020-21ನೇ ಸಾಲಿನಲ್ಲಿ ಅಂಬೇಡ್ಕರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ವ್ಯಕ್ತಿಯದು ಎಂಬುದು ದಾಖಲೆಗಳಿಂದ ದೃಢಪಟ್ಟಿತ್ತು. ಇದರ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಿದ್ದರು.

ನಾಪತ್ತೆ ಪ್ರಕರಣಗಳ ಪರಿಶೀಲನೆ ವೇಳೆ 2023ನೇ ಸಾಲಿನಲ್ಲಿ ಸೋಮಯ್ಯ ಎಂಬುವವರು ನಾಪತ್ತೆಯಾಗಿರುವ ಬಗ್ಗೆ ಅವರ ಪುತ್ರ ಕಿರಣ್ ಕುಮಾರ್ ಆವಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಹಲ್ಲಿನ ಸೆಟ್

ಅಸ್ಥಿಪಂಜರ ಪತ್ತೆಯಾದ ಸ್ಥಳದಲ್ಲಿ ಸ್ಟೈಲ್ ಯೂನಿಯನ್ ಬ್ರಾಂಡ್ ಟಿ ಶರ್ಟ್ ಮತ್ತು ಪ್ಯಾರಾಗಾನ್ ಚಪ್ಪಲಿ ಸಹ ಸಿಕ್ಕಿದ್ದವು. ಸೋಮಯ್ಯ ನಾಪತ್ತೆ ವೇಳೆ ಧರಿಸಿದ್ದ ಉಡುಪುಗಳು ಇದೇ ಮಾದರಿಯಾಗಿದ್ದವು. ಈ ಬಗ್ಗೆ ಅನುಮಾನಗೊಂಡು ದೂರುದಾರ ಕಿರಣ್ ಕುಮಾರ್ ಅವರನ್ನು ಕರೆಸಿ ವಸ್ತುಗಳನ್ನು ತೋರಿಸಿದಾಗ, ತಂದೆ ಸೋಮಯ್ಯ ಅವರದೇ ಎಂದು ಖಚಿತ ಪಡಿಸಿದರು. ಬಳಿಕ ಪೊಲೀಸರು ಸೋಮಯ್ಯ ಅವರ ಅಸ್ಥಿಪಂಜರವನ್ನು ಪುತ್ರ ಕಿರಣ್ ಕುಮಾರ್‌ಗೆ ಒಪ್ಪಿಸಿದ್ದಾರೆ.

ಸೋಮಯ್ಯ ಅವರು ನಿರ್ಮಾಣ ಹಂತದ ಕಟ್ಟಡದೊಳಗೆ ಏಕೆ ಬಂದರು? ಹೇಗೆ ಮೃತಪಟ್ಟರು ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುವತಿಗೆ ನಿಂದಿಸಿದ್ದ ಆಟೊ ಚಾಲಕನ ಬಂಧನ

ಬೆಂಗಳೂರು: ಆ್ಯಪ್‌ನಲ್ಲಿ ಆಟೊ ಬುಕ್ ಮಾಡಿ ಬಳಿಕ ರದ್ದು ಮಾಡಿದ್ದಕ್ಕೆ ಅಸಮಾಧಾನಗೊಂಡು ಯುವತಿಯನ್ನು ಹಿಂಬಾಲಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪದಡಿ ಆಟೊ ಚಾಲಕನನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈಶಾನ್ಯ ಭಾರತದ ಯುವತಿ ನೀಡಿದ ದೂರಿನ ಮೇರೆಗೆ ಆಟೊ ಚಾಲಕ ಪವನ್ (21) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ನಗರದ ಕ್ಯಾಲಸೇನಹಳ್ಳಿಯ ಹನುಮಂತಪ್ಪ ಬಡಾವಣೆಯಲ್ಲಿ ತಂಗಿಯೊಂದಿಗೆ ವಾಸವಾಗಿದ್ದು, ಕಾಲ್ ಸೆಂಟರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಅಕ್ಟೋಬರ್ 2ರಂದು ಕ್ಯಾಲಸೇನಹಳ್ಳಿಯಿಂದ ಬಾಣಸವಾಡಿಗೆ ತೆರಳಲು ಮೊಬೈಲ್ ಆ್ಯಪ್‌ನಲ್ಲಿ ಆಟೊ ಬುಕ್ ಮಾಡಿಕೊಂಡಿದ್ದೆ. ಆದರೆ, ಆ್ಯಪ್‌ನಲ್ಲಿ ಪಿಕಪ್ ಪಾಯಿಂಟ್ ತೋರಿಸಲಿರಲಿಲ್ಲ. ಐದು ನಿಮಿಷ ಕಾದರೂ ಆಟೊ ಬರಲಿಲ್ಲ. ಹಾಗಾಗಿ ಬುಕ್ಕಿಂಗ್ ರದ್ದು ಮಾಡಿ ಬೇರೆ ಆಟೊದಲ್ಲಿ ಹೊರಟೆ’ ಎಂದು ದೂರಿನಲ್ಲಿ ಯುವತಿ ತಿಳಿಸಿದ್ದಾರೆ.

‘ಕೆಲ ಹೊತ್ತಿನ ಬಳಿಕ ರದ್ದು ಮಾಡಿದ್ದ ಆಟೊ ಚಾಲಕ ಪವನ್ ನಾನು ಪ್ರಯಾಣಿಸುತ್ತಿದ್ದ ಮತ್ತೊಂದು ಆಟೊವನ್ನು ಹಿಂಬಾಲಿಸಿ ಅಡ್ಡಗಟ್ಟಿದ್ದ. ಏಕಾಏಕಿ ಬಂದು ಯಾಕೆ ಕ್ಯಾನ್ಸಲ್ ಮಾಡಿದ್ದೆ ಎಂದು ಪ್ರಶ್ನಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದ. ಈ ವೇಳೆ, ಮೊಬೈಲ್‌ನಲ್ಲಿ ಆತ ವಿಡಿಯೊ ಮಾಡಿಕೊಂಡಿದ್ದ’ ಎಂದು ಯುವತಿ ಆರೋಪಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡುತ್ತಿದ್ದಂತೆ ಯುವತಿಯು ಕೊತ್ತನೂರು ಪೊಲೀಸರಿಗೆ ದೂರು ನೀಡಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನಲ್ಲಿ ವಾಸಿಸುತ್ತಿರುವ ಉಡುಪಿ, ದಕ್ಷಿಣ ಕನ್ನಡ ಹಾಗೂ ಕಾಸರಗೋಡಿನವರು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ದಕ್ಷಿಣ ಕನ್ನಡಿಗರ ಸಂಘ ಕೋರಿದೆ.

2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಗಳಿಸಿದವರು ಅಂಕಪಟ್ಟಿಯ ಪ್ರತಿಯನ್ನು ಅ.16ರ ಒಳಗೆ ಕೆ.ಸಿ. ಬಲ್ಲಾಳ, ಅಧ್ಯಕ್ಷ, ದಕ್ಷಿಣ ಕನ್ನಡಿಗರ ಸಂಘ, 196, 5ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು–560003 ಇಲ್ಲಿಗೆ ಸಲ್ಲಿಸುವಂತೆ ಕೋರಲಾಗಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ.

ಯೋಜನಾ ಕಛೇರಿ, ಬೆಂಗಳೂರು (ಉ) : ‘ಸಂಪರ್ಕ ಸೌಧ”, ಮೂರನೇ ಮಹಡಿ, ನಂ.8, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು 560010. ಫೋನ್. ನಂ:080–22024000, ಫ್ಯಾಕ್ಸ್:080–22024000, ಇ–ಮೇಲ್:ee1krdcl@gmail.com

ಸಂಖ್ಯೆ :ಕರಅನಿನಿ/ಕಾ.ಇ/ಯೋ.ಕ/ಬೆಂ(ಉ)/ಪ್ರಕಟಣೆ/2025–26/198 ದಿನಾಂಕ:10/10/2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿರುವ ಅಧಿಸೂಚನೆ ಸಂಖ್ಯೆ: ಲೋಇ/ಇ–129/ಇಎಪಿ/2025 ಬೆಂಗಳೂರು ದಿನಾಂಕ: 17–04–2025 ರನ್ವಯ ಕರ್ನಾಟಕ ರಾಜ್ಯದಲ್ಲಿ ಗುಬ್ಬಿ – ಸಿಎಸ್ ಪುರ – ಬೀರಗೊಂಡನಹಳ್ಳಿ ವರಗೆ ರಾಜ್ಯ ಹೆದ್ದಾರಿ–84 ರಲ್ಲಿ 49.03 ಕಿ.ಮೀ ಉದ್ದದ ರಸ್ತೆಯಲ್ಲಿ ಜಿ.ಹೊಸಹಳ್ಳಿ ಗ್ರಾಮದ ಬಳಿಯ ಟೋಲ್ ಪ್ಲಾಜಾದಲ್ಲಿ ಬಳಕೆದಾರರ ಶುಲ್ಕವನ್ನು ಗುತ್ತಿಗೆದಾರರ ಮೂಲಕ ಸಂಗ್ರಹಿಸಲು ಅಧಿಸೂಚನೆಯಾಗಿರುತ್ತದೆ. ಗುತ್ತಿಗೆದಾರರಾದ ಶ್ರೀ. ಗಿರೀಶ್ ರಾಜನ್ ಖಾಂಡ್ರೆ, ಮೆ॥ ಕೆ.ಕೆ.ಎಂಟರ್‌ಪ್ರೈಸ್ಸ್, ಯಾದವನಗರ, ಜೈಸಿಂಗ್‌ಪುರ ರವರೊಂದಿಗೆ ದಿನಾಂಕ; 17–04–2025 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ದಿನಾಂಕ: 13–10–2025 ರಂದು ಬೆಳಗ್ಗೆ 08:00 ಗಂಟೆ** ಇಂದ ಗುತ್ತಿಗೆದಾರರು ಈ ರಸ್ತೆಯ ಭಾಗದಲ್ಲಿ ಕೆಳಗೆ ಸೂಚಿಸಿರುವ ವಿವಿಧ ಮಾದರಿ ವಾಹನಗಳಿಗೆ ನಿಗಧಿತ ದರಗಳ ಪ್ರಕಾರ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಗುಬ್ಬಿ – ಸಿಎಸ್ ಪುರ – ಬೀರಗೊಂಡನಹಳ್ಳಿ

ಕ್ರಮ ಸಂಖ್ಯೆ	ವಾಹನ ಮಾದರಿ	ಏಕ ಪ್ರಯಾಣ (ರೂ.)	ಪುನರಾಗಮನ (ರೂ.)	ಮಾಸಿಕ ದರ (ರೂ.)
1.	ಕಾರು, ವ್ಯಾನು, ಜೀಪು ಅಥವಾ ಲಘು ವಾಹನ	35	50	1155
2.	ಲಘು ವಾಣಿಜ್ಯ ವಾಹನ, ಲಘು ಗೂಡ್ಸ್ ವಾಹನ ಅಥವಾ ಮಿನಿ ಬಸ್	55	85	1865
3.	ಬಸ್ ಅಥವಾ ವಾಣಿಜ್ಯ ವಾಹನ (ಎರಡು ಆಕ್ಸಲ್)	115	175	3915
4.	ಬಸ್ ಅಥವಾ ವಾಣಿಜ್ಯ ವಾಹನ (ಮೂರು ಆಕ್ಸಲ್),	120	180	3985
5.	ಭಾರಿ ನಿರ್ಮಾಣ ಯಂತ್ರೋಪಕರಣ (HCM) ಅಥವಾ ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟ್ (EME) ಅಥವಾ ಮಲ್ಟಿ ಆಕ್ಸಲ್ ವಾಹನ (MAV) (ನಾಲ್ಕು ರಿಂದ ಆರು ಆಕ್ಸಲ್)	185	275	6135
6.	ಭಾರಿ ಗಾತ್ರದ ವಾಹನಗಳು (ಏಳು ಅಥವಾ ಹೆಚ್ಚಿನ ಆಕ್ಸಲ್‌ಗಳು)	225	335	7470

ಸ್ಥಳೀಯ ವಾಣಿಜ್ಯೇತರ ವಾಹನಕ್ಕೆ 2025–26 ನೇ ಸಾಲಿಗೆ ಮಾಸಿಕ ಪಾಸಿನ ದರ ರೂ.230/– ಇದ್ದು, ನಿಬಂಧನೆಯ ಪ್ರಕಾರ ಪ್ರತಿ ವರ್ಷ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.

ಕಾರ್ಯಪಾಲಕ ಇಂಜಿನಿಯರ್,
ಕೆ.ಆರ್.ಡಿ.ಸಿ.ಎಲ್, ಯೋಜನಾ ಕಛೇರಿ,
ಬೆಂಗಳರು (ಉತ್ತರ), ಬೆಂಗಳೂರು.

ವಾಯುವಿಹಾರಕ್ಕೆ ತೆರಳಿದ್ದಾಗ ಮಾಂಗಲ್ಯ ಸರ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಬಳಿ ವಾಯು ವಿಹಾರ ಮಾಡುತ್ತಿದ್ದ ಮಹಿಳೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಯನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗೊಲ್ಲಹಳ್ಳಿಯ ನಿವಾಸಿ ನಿತಿನ್ (27) ಎಂಬಾತನನ್ನು ಬಂಧಿಸಿ, ₹9 ಲಕ್ಷ ಮೌಲ್ಯದ 86 ಗ್ರಾಂ ತೂಕದ ಮಾಂಗಲ್ಯ ಸರವನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೆಪ್ಟೆಂಬರ್ 12ರಂದು ಮಾರುಗೊಂಡನಹಳ್ಳಿಯ ಕೆರೆ ಬಳಿ ವಾಯುವಿಹಾರ ಮಾಡುತ್ತಿದ್ದ ಮಹಿಳೆಯೊಬ್ಬರ ಸರ ಕಳವು ಮಾಡಿದ್ದ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದರು.

ಖಚಿತ ಮಾಹಿತಿ ಮೇಲೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಬಳಿಕ ಹಾಸನ ಆಭರಣ ಅಂಗಡಿಯಲ್ಲಿ ಅಡವಿಟ್ಟಿದ್ದ ಕಳವು ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ವಿಮಾನ ನಿಲ್ದಾಣದಲ್ಲಿ ಎನ್‌ಸಿಬಿ ಕಾರ್ಯಾಚರಣೆ: ಮೂವರ ಬಂಧನ

₹50 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಎಲ್) ಕಾರ್ಯಾಚರಣೆ ನಡೆಸಿರುವ ಮಾದಕ ವಸ್ತು ನಿಗ್ರಹ ಘಟಕ (ಎನ್‌ಸಿಬಿ) ಅಧಿಕಾರಿಗಳು ಸುಮಾರು ₹50 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಪ್ರಕರಣ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

ಥಾಯ್ಲೆಂಡ್‌ನಿಂದ ಬೆಂಗಳೂರಿಗೆ ಹೈಡ್ರೋಪೋನಿಕ್ ಗಾಂಜಾ ಕಳ್ಳಸಾಗಣೆ ಆಗುತ್ತಿರುವ ಬಗ್ಗೆ ಗುಪ್ತಚರ ಮಾಹಿತಿ ಬಂದಿತ್ತು. ಈ ಸುಳಿವಿನ ಜಾಡು ಹಿಡಿದು ಕಾರ್ಯಾಚರಣೆ ನಡೆಸಿದಾಗ ಕೊಲಂಬೊದಿಂದ ಮೂವರು ವಿಮಾನದಲ್ಲಿ ಅಕ್ಟೋಬರ್ 9ರಂದು ಬೆಂಗಳೂರಿಗೆ ಹೈಡ್ರೋಪೋನಿಕ್ ಗಾಂಜಾ ಹಾಗೂ ಸೈಲೋಸಿಬಿನ್ ಅಣಬೆ ತೆಗೆದುಕೊಂಡು ಬರುತ್ತಿರುವುದು ಗೊತ್ತಾಗಿತ್ತು. ಆ ಮೂವರನ್ನು ವಿಮಾನ ನಿಲ್ದಾಣದಲ್ಲಿ ತಪಾಸಣೆ ಮಾಡಿದಾಗ ಹೈಡ್ರೋಪೋನಿಕ್ ಗಾಂಜಾ ಹಾಗೂ ಸೈಲೋಸಿಬಿನ್ ಅಣಬೆ ಪತ್ತೆಯಾಯಿತು ಎಂದು ಎನ್‌ಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರಲ್ಲಿ ಒಬ್ಬಾತ ಶ್ರೀಲಂಕಾ ಪ್ರಜೆ. ಆರೋಪಿಗಳಿಂದ 45 ಕೆ.ಜಿ. ಹೈಡ್ರೋಪೋನಿಕ್ಗಾಂಜಾ ಮತ್ತು 6 ಕೆ.ಜಿ. ಸೈಲೋಸಿಬಿನ್ ಅಣಬೆ ವಶಪಡಿಸಿಕೊಳ್ಳಲಾಗಿದೆ. ಈ ಮಾದಕ ವಸ್ತುಗಳ ಮೌಲ್ಯ ಸುಮಾರು ₹50 ಕೋಟಿ ಎಂದು ಅಂದಾಜಿಸಲಾಗಿದೆ.

ಹೈಡ್ರೋಪೋನಿಕ್ ಗಾಂಜಾ ಮತ್ತು ಸೈಲೋಸಿಬಿನ್ ಅಣಬೆಗಳನ್ನು ಫುಡ್ ಟಿನ್‌ಗಳಲ್ಲಿ ತುಂಬಿಸಿ ಸೀಲ್ ಮಾಡಲಾಗಿತ್ತು. ಮಾದಕ ವಸ್ತು ಕಳ್ಳಸಾಗಣೆಯ ಸೂತ್ರಧಾರಿಗಳ ಪತ್ತೆ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾದಕ ವಸ್ತು ನಿಗ್ರಹ ಘಟಕದ (ಎನ್‌ಸಿಬಿ) ಅಧಿಕಾರಿಗಳು ಸುಮಾರು ₹50 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸ್ನೇಹಿತನ ಮೂತ್ರಪಿಂಡ ಚಿಕಿತ್ಸೆಗಾಗಿ ಹಣ ನೀಡಿದ್ದ ವ್ಯಕ್ತಿ

ಸಾಲ ವಾಪಸ್ ಕೇಳಿದ್ದಕ್ಕೆ ಅಪಹರಿಸಿ ಹಲ್ಲೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ಸ್ನೇಹಿತನ ಚಿಕಿತ್ಸೆಗಾಗಿ ಕೊಟ್ಟಿದ್ದ ಹಣ ವಾಪಸ್ ಕೇಳಿದ ವ್ಯಕ್ತಿಯನ್ನು ಅಪಹರಿಸಿ ಹಲ್ಲೆ ನಡೆಸಿರುವ ಘಟನೆ ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೋರಮಂಗಲ ನಿವಾಸಿ ಸಗಾಯ್ ರಾಜ್ ಅವರು ನೀಡಿದ ದೂರಿನ ಮೇರೆಗೆ ದೂರುದಾರನ ಸ್ನೇಹಿತ ಆನಂದ್ ಕುಮಾರ್, ಅವರ ಪುತ್ರ ಆಶೀಶ್, ಪುತ್ರಿ ಐಶ್ವರ್ಯ, ಪತ್ನಿ ಜ್ಯೋತಿ, ಸಂಬಂಧಿ ಅಕ್ಷಯ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘2024ರ ಜುಲೈನಲ್ಲಿ ತಮ್ಮ ತಂದೆಗೆ ಮೂತ್ರಪಿಂಡ ಸಮಸ್ಯೆಯಾಗಿದೆ ಎಂದು ಆಶೀಶ್ ₹ 50 ಸಾವಿರ ತೆಗೆದುಕೊಂಡಿದ್ದ. ನಂತರ ಹಂತ ಹಂತವಾಗಿ ₹3 ಲಕ್ಷ ಅನ್ನು ಐಶ್ವರ್ಯ ಖಾತೆಗೆ ಹಾಕಲಾಗಿತ್ತು. ಕೆಲ ದಿನಗಳ ನಂತರ ಹಣ ವಾಪಸ್ ಕೇಳಿದಾಗ, ಅಷ್ಟೊಂದು ಹಣ ನೀಡಲು ಆಗುವುದಿಲ್ಲ. ಮನೆಯನ್ನು ಮಾರಾಟ ಮಾಡುವುದಾಗಿ ಕುಟುಂಬಸ್ಥರು ಹೇಳಿದ್ದರು. ಹೀಗಾಗಿ ಸಗಾಯರಾಜ್ ಆ ಮನೆಯನ್ನು ಮಂಜುನಾಥ ಎಂಬುವರಿಗೆ ₹2.30 ಕೋಟಿಗೆ ಖರೀದಿಸುವ ಮಾತುಕತೆ ನಡೆಸಿದ್ದರು. ಅದರಂತೆ ಮುಂಗಡವಾಗಿ ₹1.84 ಕೋಟಿ ನೀಡಿದ್ದರು. ಬಾಕಿ ಹಣ ನೋಂದಣಿ ಮಾಡಿದ ನಂತರ ನೀಡುವ ಒಪ್ಪಂದ ಮಾಡಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆಲ ದಿನಗಳ ನಂತರ ಮನೆ ದಾಖಲೆ ಪರಿಶೀಲನೆ ವೇಳೆ ಮನೆಯನ್ನು ಬ್ಯಾಂಕ್‌ನಲ್ಲಿ ಅಡಮಾನ ಇಟ್ಟಿರುವ ಬಗ್ಗೆ ಕೇಸ್ ನಡೆಯುತ್ತಿರುವುದು ಗೊತ್ತಾಗಿದೆ. ಅದರಿಂದ ಸಗಾಯ್ ರಾಜ್ ಮನೆ ಖರೀದಿ ವ್ಯವಹಾರ ಬೇಡ ಹಣ ವಾಪಸ್ ನೀಡುವಂತೆ ಕೇಳಿದ್ದ. ಅದಕ್ಕೆ ಆನಂದ್ ಕುಮಾರ್ ಅವರ ಕುಟುಂಬಸ್ಥರು ಮೂರು ತಿಂಗಳ ಕಾಲಾವಕಾಶ ಪಡೆದಿದ್ದರು. ಈ ಮಧ್ಯೆ ಫೆಬ್ರುವರಿ 12ರಂದು ಕೋರಮಂಗಲದ ಮಂಗಳ ಕಲ್ಯಾಣ ಮಂಟಪದ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದ ಸಗಾಯರಾಜ್ ಅವರನ್ನು ಕಾರಿನಲ್ಲಿ ಬಂದ ಆರು ಜನ ಮುಸುಕುಧಾರಿಗಳು ಅಪಹರಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಕೈ ಕಾಲು ಕಟ್ಟಿ ಹಲ್ಲೆ ನಡೆಸಿದ್ದಾರೆ. ಸಿಗರೇಟ್‌ನಿಂದ ಸುಟ್ಟು ಚಿತ್ರಹಿಂಸೆ ನೀಡಿದ್ದಾರೆ’ ಎಂದು ಹೇಳಿದರು.

‘ರಾತ್ರಿಯಿಡೀ ಕಾರಿನಲ್ಲಿ ಸುತ್ತಾಡಿಸಿ ಮರು ದಿನ ಬೆಳಗಿನ ಜಾವ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯ ವೃತ್ತದ ಬಳಿ ಕರೆದುಕೊಂಡು ಬಂದಾಗ ಸಗಾಯರಾಜ್ ಕಾರಿನಲ್ಲಿ ಜೋರಾಗಿ ಕೂಗಿದ್ದಾರೆ. ಸ್ಥಳೀಯರು ಅವರನ್ನು ರಕ್ಷಿಸಿದ್ದಾರೆ. ಅಷ್ಟರಲ್ಲಿ ದುಷ್ಕರ್ಮಿಗಳು ಪರಾರಿಯಾಗಿದ್ದರು ಎಂದು ಸಗಾಯಾರಾಜ್ ದೂರಿನಲ್ಲಿ ಆರೋಪಿಸಿದ್ದಾರೆ.

ಘಟನೆ ನಡೆದು ಏಳು ತಿಂಗಳ ಬಳಿಕ ದೂರು ನೀಡಲಾಗಿದೆ. ಘಟನೆ ಸತ್ಯಾಸತ್ಯತೆ ಪರಿಶೀಲಿಸಲು ಎಲ್ಲಾ ಆಯಾಮದಿಂದ ತನಿಖೆ ನಡೆಸಲಾಗುತ್ತಿದೆ. ಪ್ರಾಥಮಿಕ ತನಿಖೆಯಲ್ಲಿ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಉಚಿತ ಸಾಮೂಹಿಕ ವಿವಾಹ

ರಾಜರಾಜೇಶ್ವರಿ ನಗರ: ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್ ವತಿಯಿಂದ ಅಂಧರು, ಅಂಗವಿಕಲರು, ಶ್ರವಣ ದೋಷವುಳ್ಳವರ ಅಂತರ್ಜಾತಿ ವಿವಾಹವನ್ನು ಅಕ್ಟೋಬರ್ 19 ರಂದು ಹಮ್ಮಿಕೊಳ್ಳಲಾಗಿದೆ.

ವಧುವಿಗೆ ತಾಳಿ, ಕಾಲುಂಗುರ, ಮೂರು ಜೊತೆ ಸೀರೆ, ರವಿಕೆ, ವರನಿಗೆ ಮೂರು ಜೊತೆ ಶರ್ಟ್, ಪಂಚೆ, ಶಲ್ಯ, ಪೋಷಕರು ಮತ್ತು ಬಂಧುಗಳಿಗೆ ಊಟದ ವ್ಯವಸ್ಥೆ ಇದೆ. ಜೋಡಿಗಳಿಗೆ ಮೂರು ತಿಂಗಳಿಗೆ ಆಗುವಷ್ಟು ದವಸ ಧಾನ್ಯಗಳನ್ನು ನೀಡಲಾಗುವುದು ಎಂದು ಟ್ರಸ್ಟ್ ನ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ ತಿಳಿಸಿದ್ದಾರೆ. ಮಾಹಿತಿಗೆ ಮೊ. 9620110550 ಸಂಪರ್ಕಿಸಿ.

ಅಪರ್ಣಾ ವಸ್ತಾರೆ ನೆನಪಿನ ಕಮ್ಮಟ

ಬೆಂಗಳೂರು: ನಿರೂಪಕಿ ಅಪರ್ಣ ವಸ್ತಾರೆ ಅವರ ನೆನಪಿನಲ್ಲಿ ಅ.17ರ ಬೆಳಿಗ್ಗೆ 10ರಿಂದ ನಗರದ ಉದಯಭಾನು ಕಲಾಸಂಘದಲ್ಲಿ ಕನ್ನಡ ನುಡಿ ಗಾರುಡಿ ಕಮ್ಮಟ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳಿಗೆ ಭಾಷಣ ಕಲೆ, ಕಾರ್ಯಕ್ರಮ ನಿರೂಪಣೆ, ಪ್ರಸ್ತುತಿ, ಧ್ವನಿ ಸಂಸ್ಕಾರ, ಆಂಗಿಕ-ವಾಚಿಕಗಳ ಪ್ರಾಥಮಿಕ ಪರಿಚಯ ಮತ್ತು ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ ಎಂದು ಸಂಘದ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ತಿಳಿಸಿದ್ದಾರೆ.

080-26601831/26609343ಕ್ಕೆ ಕರೆ ಮಾಡಬಹುದು ಇಲ್ಲವೇ 98441 92952/ 9980034493ಕ್ಕೆ ವಾಟ್ಸ್ ಆ್ಯಪ್ ಮಾಡಿ ಹೆಸರು ನೊಂದಾಯಿಸಿಕೊಳ್ಳಬಹುದು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

REAL ESTATE SELLING

House

K R Puram

KALKERE CHANNASANDRA Newly built BBMP Ekhata 30x40 G+1 house for sale at 1.5Cr Contact -9606638021

BUSINESS

Business to Business

Business

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

PROPERTY CORNER

COMMERCIAL SPACE FOR RENT
Ground Floor - 1200 Sqft for Godown
1st Floor- 2400 Sqft,
2nd Floor- 2400 Sqft,
Suitable for Office Space, Banks and Call Centers.(Lift facility)
Location:
Kengeri Outer Ring Road, Jagajyothi Layout, Nagdevanahalli, Bengaluru - 56
Contact:
9844050968, 9611329777

Finance

URGENT LOAN AVAIL @ 3.5% PER ANNUM PERSONAL, BUSINESS, EDUCATION TAKE OVER ALL TYPES LOAN SHIVGANGA FINANCE. CALL/ WHATSAPP:: 8826494700

TOURS & TRAVEL

Travel

SRILANKA TOUR, WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157

PERSONAL

Change of Name

I, SABERA Begum (D/o Mohammed Haneef), R/o Gulbarga (Kalaburagi), Karnataka, was wrongly named “Sabaira Begum.” My correct name is “Sabera Begum.” – Sabera Begum

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಚಿಟಿಕೆ ಸುದ್ದಿ

‘ಆರ್.ಆರ್. ನಗರ: ರಸ್ತೆ ಗುಂಡಿ ಮುಚ್ಚಿಸಿ’

ರಾಜರಾಜೇಶ್ವರಿನಗರ: ‘ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ರಸ್ತೆ ದುರಸ್ತಿ ಮಾಡಲು ವಿಫಲವಾಗಿರುವ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಅವರು ಬೆಂಗಳೂರು ಪಶ್ಚಿಮ ನಗರಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ಅವರಿಗೆ ದೂರು ನೀಡಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಕೆಟ್ಟ ಹೆಸರು ತರಲು ರಸ್ತೆ ಗುಂಡಿ ಮುಚ್ಚದಂತೆ ಸ್ಥಳೀಯ ಶಾಸಕ ಮುನಿರತ್ನ ಅವರು ಅಧಿಕಾರಿಗಳ ಮೇಲೆ ಒತ್ತಡ ತರುತ್ತಿದ್ದಾರೆ’ ಎಂದು ದೂರಿದ್ದಾರೆ.

‘ರಾಜಕೀಯದಿಂದಾಗಿ ಜನ ತೊಂದರೆ ಅನುಭವಿಸುತ್ತಿದ್ದು, ಸುಗಮ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ. ಇದನ್ನು ತಪ್ಪಿಸಲು ಕೂಡಲೇ ರಸ್ತೆ ಕಾಮಗಾರಿ ಆರಂಭಿಸಬೇಕು‘ ಎಂದು ಒತ್ತಾಯಿಸಿದ್ದಾರೆ.

11.95 ಲಕ್ಷ ಮನೆಗಳ ಸಮೀಕ್ಷೆ ಪೂರ್ಣ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 11.95 ಲಕ್ಷ ಮನೆಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಭಾನುವಾರ 1,35,732 ಮನೆಗಳ ಸಮೀಕ್ಷೆಯಾಗಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಸಮೀಕ್ಷಕರು ಮನೆಗಳಿಗೆ ಬಂದಾಗ ನಾಗರಿಕರು ಸಮೀಕ್ಷೆಯಲ್ಲಿ ಭಾಗವಹಿಸಿ, ಸಹಕಾರ ನೀಡಬೇಕು ಎಂದು ಕೋರಿದ್ದಾರೆ. ಸ್ವತಃ ಆನ್‌ಲೈನ್ (https://kscbcselfdeclaration.karnataka.gov.in) ಮೂಲಕವೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದು ಎಂದು ಹೇಳಿದ್ದಾರೆ.

ಸಮೀಕ್ಷೆಯ ವಿವರ

ನಗರ ಪಾಲಿಕೆ	ಮನೆಗಳು
ಕೇಂದ್ರ	1,53,839
ಪೂರ್ವ	1,75,480
ಉತ್ತರ	2,92,239
ದಕ್ಷಿಣ	2,11,308
ಪಶ್ಚಿಮ	3,62,851

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಲ್ಲೇಶ್ವರದ ಮಹಿಳಾ ಪ್ರಾದೇಶಿಕ ಕೇಂದ್ರದಲ್ಲಿ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಪದವಿಯ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಬಿ.ಎ., ಬಿ.ಕಾಂ., ಬಿ.ಬಿ.ಎ., ಬಿ.ಎಸ್ಸಿ., ಎಂ.ಎ., ಎಂ.ಸಿ.ಜೆ., ಎಂ.ಕಾಂ., ಎಂ.ಎಸ್ಸಿ, ವಿವಿಧ ಸ್ನಾತಕೋತ್ತರ ಸರ್ಟಿಫಿಕೇಟ್ ಪ್ರೋಗ್ರಾಂ, ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಇದೆ. ಆಸಕ್ತರು ಅಕ್ಟೋಬರ್ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ www.ksoumysuru.ac.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

‘ನಗರದಲ್ಲಿ ಮಾಲಿನ್ಯ ತಡೆಗೆ ಸಿಗದ ಸ್ಪಂದನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿನ ಪರಿಸರ ಮಾಲಿನ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಭೆ ನಡೆಸುವುದಾಗಿ ಹೇಳಿದ್ದ ಅರಣ್ಯ, ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಇದುವರೆಗೂ ಸ್ಪಂದಿಸಿಲ್ಲ. ಇದೇ ವಿಚಾರದಲ್ಲಿ ವಿಧಾನಸಭೆ ಸ್ಪೀಕರ್ ನೀಡಿದ ಸೂಚನೆಗೂ ಬೆಲೆ ಇಲ್ಲವೇ’ ಎಂದು ಶಾಸಕ ಎಸ್.ಸುರೇಶ್‌ಕುಮಾರ್ ಪ್ರಶ್ನಿಸಿದ್ದಾರೆ.

ಸುರೇಶ್ ಕುಮಾರ್

‘ಮಾಲಿನ್ಯ ಸಮಸ್ಯೆ ತೀವ್ರವಾಗುತ್ತಿರುವುದು ಹಾಗೂ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಆಗಸ್ಟ್‌ನಲ್ಲಿ ನಡೆದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದ್ದೆ. ಆಗ ಸಚಿವರು ಇದಕ್ಕೆ ಉತ್ತರಿಸಲು 15 ದಿನಗಳ ಕಾಲಾವಕಾಶ ಕೇಳಿದ್ದರು. ಆಗ, ನಾನು ಉತ್ತರ ನೀಡುವಾಗ ಅಧಿಕಾರಿಗಳೊಂದಿಗೆ ಸಭೆ ಕರೆಯಿರಿ ಎಂದು ಹೇಳಿದ್ದೆ. ಇದಕ್ಕೆ ಸಮ್ಮತಿಸಿದ್ದರು. ಆದರೆ, ಇದುವರೆಗೂ ಸಭೆ ಕರೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಸೆಪ್ಟೆಂಬರ್‌ನಲ್ಲಿ ನನ್ನ ಕ್ಷೇತ್ರದಲ್ಲಿ ಎರಡು ಬಾರಿ ಕಾರ್ಯಕ್ರಮ ನಡೆದಾಗ ಈ ಬಗ್ಗೆ ಸಚಿವರಿಗೆ ನೆನಪು ಮಾಡಿದ್ದೆ. ಪ್ರಶ್ನೆ ಕೇಳಿ 50 ದಿನವಾದರೂ ಲಿಖಿತ ಉತ್ತರವಾಗಲಿ, ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲು ಸಭೆಯನ್ನಾಗಲಿ ಸಚಿವರು ಏರ್ಪಡಿಸಿಲ್ಲ’ ಎಂದು ಸುರೇಶ್ ಕುಮಾರ್ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

‘ಸದನದಲ್ಲಿ ಪ್ರಶ್ನೆಗಳಿಗೆ ನಿಗದಿತ ದಿನದಂದು ಉತ್ತರ ಕೊಡಲು ಸಾಧ್ಯವಾಗದಿದ್ದರೆ ತಿಂಗಳ ಒಳಗೆ ಉತ್ತರ ನೀಡಲೇಬೇಕು ಎಂದು ಸಚಿವರು ಮತ್ತು ಇಲಾಖಾ ಮುಖ್ಯಸ್ಥರಿಗೆ ವಿಧಾನ ಸಭೆ ಸಭಾಧ್ಯಕ್ಷರು ಕಟ್ಟುನಿಟ್ಟಾಗಿ ಸೂಚಿಸಿದ್ದರು. ಸಭಾಧ್ಯಕ್ಷರ ಆದೇಶಕ್ಕೂ ಬೆಲೆ ಇಲ್ಲ. ಸದಸ್ಯರ ಕಳಕಳಿಗೂ ಸ್ಪಂದನೆ ಇಲ್ಲದ ಆಡಳಿತ ವ್ಯವಸ್ಥೆ ರಾಜ್ಯದಲ್ಲಿದೆ’ ಎಂದಿದ್ದಾರೆ.

ಡಿಕೆಶಿ – ಮುನಿರತ್ನ ‘ನಡಿಗೆ’ ಜಟಾಪಟಿ

ಜನಪ್ರತಿನಿಧಿಗಳನ್ನು ಕರೆದಿಲ್ಲ ಎಂದ ಶಾಸಕ • ಅಹವಾಲು ಸ್ವೀಕಾರವಷ್ಟೇ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತಿಕೆರೆಯ ಜಯಪ್ರಕಾಶ್ ನಾರಾಯಣ ಉದ್ಯಾನದಲ್ಲಿ ಭಾನುವಾರ ನಡೆದ ‘ಬೆಂಗಳೂರು ನಡಿಗೆ’ ಕಾರ್ಯಕ್ರಮ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಆರ್.ಆರ್. ನಗರ ಶಾಸಕ ಮುನಿರತ್ನ ನಡುವೆ ವಾಗ್ವಾದಕ್ಕೆ, ಪ್ರಹಸನಗಳಿಗೆ ಕಾರಣವಾಯಿತು.

ಕಾರ್ಯಕ್ರಮಕ್ಕೆ ಆರ್‌ಎಸ್‌ಎಸ್ ಟೋಪಿ ಧರಿಸಿ ಬಂದಿದ್ದ ಮುನಿರತ್ನ ಅವರು ಪ್ರೇಕ್ಷಕರ ಸಾಲಿನಲ್ಲಿ ಹಾಜರಿದ್ದರು. ವೇದಿಕೆಯಲ್ಲಿದ್ದ ಡಿ.ಕೆ. ಶಿವಕುಮಾರ್ ಅವರು ‘ಏಯ್ ಎಂಎಲ್‌ಎ ಅವರೇ ಬನ್ರಿ ಈ ಕಡೆ... ರೀ ಕರಿಟೋಪಿ ಎಂಎಲ್‌ಎ ಈ ಕಡೆ ಬಾರಪ್ಪ. ಹೊಸದಾಗಿ ಕರಿಟೋಪಿ ಹಾಕ್ಕೊಂಡಿದ್ದಾರೆ’ ಎಂದು ಕರೆದರು.

ವೇದಿಕೆಯ ಮೇಲೆ ಬಂದ ಮುನಿರತ್ನ ಅವರು ‘ಒಂದೇ ನಿಮಿಷ ಮೈಕ್ ಕೊಡಿ’ ಎಂದು ಮೈಕ್ ತೆಗೆದುಕೊಂಡು, ‘ಈ ಕಾರ್ಯಕ್ರಮಕ್ಕೆ ನನಗೆ ಆಹ್ವಾನವಿಲ್ಲ. ಆದರೂ ಈ ನಗರದ ಪ್ರಜೆಯಾಗಿ ಬಂದು ನಿಮ್ಮ (ಜನರ) ಜೊತೆ ನಾನು ಕುಳಿತು ಕೊಳ್ಳುತ್ತೇನೆ’ ಎಂದು ಹೇಳಿ ವೇದಿಕೆಯಿಂದ ಇಳಿಯಲು ಮುಂದಾದರು. ಮತ್ತೆ ವಾಪಸಾದ ಅವರು ಮಾತು ಮುಂದುವರಿಸಿದರು.

‘ಇದು ಸರ್ಕಾರದ ಕಾರ್ಯಕ್ರಮ. ಆದರೆ, ಸಂಸದರೂ ಇಲ್ಲ, ಶಾಸಕರೂ ಇಲ್ಲ. ಅವರ ಫೋಟೊ ಕೂಡಾ ಇಲ್ಲ. ಇದು ಸಾರ್ವಜನಿಕರ ಕುಂದು ಕೊರತೆಯ ಸಭೆಯೇ ಎಂಬುದು ಗೊತ್ತಿಲ್ಲ. ಇದು ಕಾಂಗ್ರೆಸ್ ಕಾರ್ಯಕ್ರಮ. ಇದು ಸಾರ್ವಜನಿಕ ಕಾರ್ಯಕ್ರಮ ಹೇಗಾಗುತ್ತದೆ’ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುನಿರತ್ನ ನಡುವೆ ವಾಗ್ವಾದ ನಡೆಯಿತು. ಆ ನಂತರ ಮುನಿರತ್ನ ಅವರು ಆರ್‌ಎಸ್‌ಎಸ್ ಟೋಪಿ ಹಾಕಿಕೊಂಡು, ಗಾಂಧೀಜಿಯ ಫೋಟೊ ಹಿಡಿದುಕೊಂಡು ವೇದಿಕೆಯ ಎದುರು ಕುಳಿತು ಮೌನ ಪ್ರತಿಭಟನೆ ನಡೆಸಿದರು.

ಗಾಂಧೀಜಿ ಫೋಟೊ ಹಿಡಿದು ಪ್ರತಿಭಟನೆ ಮಾಡಿದ ಮುನಿರತ್ನ

ಅವರನ್ನು ಪೊಲೀಸರು ಕರೆದೊಯ್ಯಲು ಪ್ರಯತ್ನಿಸಿದಾಗ ನೂಕುನುಗ್ಗಲು ಉಂಟಾಯಿತು.

ಬಳಿಕ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಇಲ್ಲಿನ ಶಾಸಕರ ವರ್ತನೆ ನೋಡಿದಾಗ ಎಂಥ ಪರಿಸ್ಥಿತಿಯಲ್ಲಿ ನೀವಿದ್ದೀರಿ ಎಂಬುದು ಅರ್ಥವಾಗುತ್ತದೆ. ಮುನಿರತ್ನ ಅವರಿಗೆ ತಾಳ್ಮೆಯಿಲ್ಲ. ಅವರು ಕಾರ್ಯಕ್ರಮವನ್ನು ಹಾಳು ಮಾಡಬೇಕು ಎಂದೇ ಬಂದರೋ ಏನೋ. ಇದಕ್ಕೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ, ನೀವೂ ತಲೆಕೆಡಿಸಿಕೊಳ್ಳಬೇಡಿ. ಇಂತಹವರನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ನಿಮ್ಮ ಮನಸ್ಸಿಗೆ ಬಹಳ ನೋವಾಗುತ್ತಿದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಇದಕ್ಕೆಲ್ಲ ಸೂಕ್ತ ಸಮಯದಲ್ಲಿ ಉತ್ತರ ನೀಡಿ’ ಎಂದು ಹೇಳಿದರು.

ಆರ್‌ಎಸ್‌ಎಸ್‌ಗೆ ಅವಮಾನ ಮಾಡಿದ ಶಾಸಕ: ಡಿಸಿಎಂ

‘ಆರ್‌ಎಸ್‌ಎಸ್‌ಗೆ ಅದರದ್ದೇ ಆದ ಇತಿಹಾಸವಿದೆ. ಆ ಸಂಸ್ಥೆಯ ಟೋಪಿ, ಸಮವಸ್ತ್ರ ಧರಿಸಿಕೊಂಡು ಈ ಕಾರ್ಯಕ್ರಮಕ್ಕೆ ಬರುವ ಅವಶ್ಯಕತೆ ಏನಿತ್ತು? ಇದು ನನಗಲ್ಲ, ಆರ್‌ಎಸ್‌ಎಸ್‌ಗೆ ಮಾಡಿದ ಅವಮಾನ’ ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

‘ಇದು ಯಾವುದೇ ಶಿಲಾನ್ಯಾಸ ಕಾರ್ಯಕ್ರಮವಲ್ಲ. ಎಲ್ಲ ಸಾರ್ವಜನಿಕರಿಗೂ ಮುಕ್ತ ಆಹ್ವಾನವಿದ್ದ ಕಾರ್ಯಕ್ರಮ. ಜನರ ಸಮಸ್ಯೆಗಳನ್ನು ಅರಿಯುವ ಕಾರ್ಯಕ್ರಮ. ಜನಪ್ರತಿನಿಧಿಗೆ ಏನು ಗೌರವ ನೀಡಬೇಕೊ ಅದನ್ನು ನೀಡುತ್ತೇವೆ’ ಎಂದು ತಿಳಿಸಿದರು.

‘ಶಾಸಕರನ್ನು ನಾಗರಿಕರೇ ಹೊಡೆದು ಓಡಿಸುತ್ತಿದ್ದರು. ಅವರ ವರ್ತನೆಯಿಂದ ಜನಕ್ಕೆ ಅಷ್ಟು ರೋಷ ಬಂದಿತ್ತು’ ಎಂದರು. ಡಿ.ಕೆ.ಸುರೇಶ್ ಸೋಲಿನ ನಂತರ ಸುಳ್ಳು ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ ಎನ್ನುವ ಆರೋಪದ ಬಗ್ಗೆ ‘ಅದಕ್ಕೆಲ್ಲ ತನಿಖೆ ನಡೆಸಲು ಸಂಸ್ಥೆಗಳಿವೆ. ಅಲ್ಲಿಗೆ ಹೋಗಿ ದೂರು ನೀಡಲಿ’ ಎಂದು ಸಲಹೆ ನೀಡಿದರು.

ಮಾಟದಿಂದಾಗಿ ಸಿದ್ದರಾಮಯ್ಯ ಮಂಕು: ಮುನಿರತ್ನ ಆರೋಪ

‘ಸಿದ್ದರಾಮಯ್ಯರ ಆಡಳಿತ, ನಿರ್ಧಾರಗಳು ಹೇಗಿತ್ತು ಗೊತ್ತಾ? ಅವರ ವಿರುದ್ಧ ಮಾಟ ಮಂತ್ರ ಮಾಡಿ ಡಬ್ಬದಲ್ಲಿ ಹಾಕಿ ವಶೀಕರಣ ಮಾಡಿದ್ದಾರೆ. ಹಾಗಾಗಿ ಅವರು ಮಂಕಾಗಿದ್ದಾರೆ’ ಎಂದು ಶಾಸಕ ಮುನಿರತ್ನ ಅವರು ಡಿ.ಕೆ. ಸಹೋದರರ ಮೇಲೆ ಆರೋಪಿಸಿದ್ದಾರೆ.

‘ರಸ್ತೆಯಲ್ಲಿ ಗುಂಡಿ ಬಿದ್ದರೂ ಕೇಳುತ್ತಿಲ್ಲ. ಬೆಂಗಳೂರಿನಿಂದ ಹೊರಗೆ ಹೋಗುತ್ತಿಲ್ಲ. ಯಾರು ಸತ್ತರೂ ಕೇಳುತ್ತಿಲ್ಲ. ಇದಕ್ಕೆಲ್ಲ ಮಾಟಮಂತ್ರವೇ ಕಾರಣ’ ಎಂದರು.

‘ಹನಿಟ್ರ್ಯಾಪ್ ಮಾಡಿ ಹಾಳು ಮಾಡುವುದು. ಇಲ್ಲವೇ ಕೇರಳಕ್ಕೆ ಹೋಗಿ ಮಂತ್ರವಾದಿಗಳನ್ನು ಹಿಡಿದು ಕೋಣವೋ, ಕಾಡು ಹಂದಿಯನ್ನೋ ಬಲಿಕೊಡುವುದು ನಡೆದಿದೆ. ಎಚ್.ಡಿ. ಕುಮಾರಸ್ವಾಮಿಗೂ ಇದನ್ನೇ ಮಾಡಿದ್ದಾರೆ. ಅದಕ್ಕಾಗಿಯೇ ಅವರ ಆರೋಗ್ಯ ಸರಿ ಇಲ್ಲ’ ಎಂದು ಆರೋಪಿಸಿದರು.

ಮತದಾರರಿಗೆ ಮಾಡಿದ ಅಪಮಾನ: ವಿಜಯೇಂದ್ರ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾಡಿದ ಅಪಮಾನವು ಮುನಿರತ್ನ ಅವರಿಗೆ ಮಾಡಿದ ಅಪಮಾನವಲ್ಲ. ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಮಾಡಿದ ಅಪಮಾನ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಂಬರುವ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಕರಿಟೋಪಿಯ ಬೆಲೆ ಏನೆಂದು ತೋರಿಸುತ್ತೇವೆ. ಒಬ್ಬ ಉಪಮುಖ್ಯಮಂತ್ರಿ, ಜವಾಬ್ದಾರಿಯುತ ಸಚಿವರಾಗಿ ಸಾರ್ವಜನಿಕ ಸ್ಥಳದಲ್ಲಿ ಹಾಗೂ ಒಬ್ಬ ಜನಪ್ರತಿನಿಧಿಯ ಬಗ್ಗೆ ಹೇಗೆ ನಡೆದುಕೊಳ್ಳಬೇಕು ಎಂಬ ಕನಿಷ್ಠ ಸೌಜನ್ಯವೂ ಶಿವಕುಮಾರ್ ಅವರಿಗೆ ಇಲ್ಲ’ ಎಂದು ಆಕ್ಷೇಪಿಸಿದರು.

‘ಅಧಿಕಾರ ಎಂಬುದು ಶಾಶ್ವತ ಅಲ್ಲ; ಡಿ.ಕೆ.ಶಿವಕುಮಾರ್ ಅವರ ನಡವಳಿಕೆ, ಮಾತಿನ ಧಾಟಿ, ಒಬ್ಬ ಚುನಾಯಿತ ಪ್ರತಿನಿಧಿಗೆ ಮಾಡಿದ ಅಪಮಾನದ ವಿರುದ್ಧ ಸಾರ್ವಜನಿಕರು ಮಾತನಾಡುತ್ತಿದ್ದಾರೆ’ ಎಂದು ನುಡಿದರು.

ಸಭ್ಯತೆಯ ಪಾಠ ಮರೆತ ಡಿಕೆಶಿ: ‘ಡಿ.ಕೆ.ಶಿವಕುಮಾರ್ ಅವರು ಸಾರ್ವಜನಿಕವಾಗಿ ಶಾಸಕ ಮುನಿರತ್ನ ಅವರನ್ನು ಸಭ್ಯತೆಯಿಂದ ನಡೆಸಿಕೊಂಡಿಲ್ಲ. ಮುನಿರತ್ನ ಅವರನ್ನು ಕರೆದಿರುವ ರೀತಿಯೂ ಸರಿಯಾಗಿಲ್ಲ. ಅವರು ಸಭ್ಯತೆಯ ಪಾಠವನ್ನು ಮರೆತಿದ್ದಾರೆ’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಟೀಕಿಸಿದರು.

‘ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವಾಗಿದ್ದರೆ ನಮ್ಮ ಆಕ್ಷೇಪಣೆ ಇಲ್ಲ. ಪಕ್ಷದ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಭಾಗವಹಿಸುವುದಿಲ್ಲ. ಅಲ್ಲಿ ನಡೆದದ್ದು ಸರ್ಕಾರದ ಕಾರ್ಯಕ್ರಮವೇ ಪಕ್ಷದ ಕಾರ್ಯಕ್ರಮವೇ’ ಎಂದು ರವಿ ಪ್ರಶ್ನಿಸಿದರು.

‘ಸರ್ಕಾರಿ ಕಾರ್ಯಕ್ರಮವಾಗಿದ್ದರೆ ಅದರಲ್ಲಿ ಭಾಗವಹಿಸುವುದು ಶಾಸಕರಾದ ಮುನಿರತ್ನ ಅವರ ಹಕ್ಕು. ಸರ್ಕಾರದ ಕಾರ್ಯಕ್ರಮಕ್ಕೆ ಆಮಂತ್ರಿಸಿಲ್ಲವಾದರೆ ಅದು ಅಪರಾಧ ಮತ್ತು ಹಕ್ಕುಚ್ಯುತಿ ಆಗುತ್ತದೆ. ಯಾರು ಪ್ರಜಾ ಪ್ರಭುತ್ವದ ಮೌಲ್ಯವನ್ನು ಅಳವಡಿಸಿಕೊಂಡಿದ್ದಾರೋ ಅವರಿಗೆ ಜನಪ್ರತಿನಿಧಿಯ ಭಾವನೆಗಳು ಅರ್ಥವಾಗುತ್ತವೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜೆ.ಪಿ ಉದ್ಯಾನದಲ್ಲಿ ಭಾನುವಾರ ಜನರ ಅಹವಾಲು ಆಲಿಸಿದರು

‘ಜಯಪ್ರಕಾಶ ನಾರಾಯಣ ಪುತ್ಥಳಿ ಮರುಸ್ಥಾಪನೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆ.ಪಿ ಉದ್ಯಾನದಲ್ಲಿ ಜಯಪ್ರಕಾಶ ನಾರಾಯಣ ಅವರ ಪುತ್ಥಳಿ ಮರು ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

‘ಬೆಂಗಳೂರು ನಡಿಗೆ’ ಕಾರ್ಯಕ್ರಮದ ಪ್ರಯುಕ್ತ ನಗರದ ಜೆ.ಪಿ ಉದ್ಯಾನದಲ್ಲಿ ಸಾರ್ವಜನಿಕರ ಜೊತೆ ಭಾನುವಾರ ಹೆಜ್ಜೆ ಹಾಕಿ, ಜನರ ಅಹವಾಲು ಸ್ವೀಕರಿಸಿ ಮಾತನಾಡಿದರು.

‘ಉದ್ಯಾನದ ಸೌಂದರ್ಯೀಕರಣ, ಈಜುಕೊಳ, ಯೋಗಶಾಲೆ, ಜಿಮ್ ಹಾಗೂ ಮಕ್ಕಳ ಆಟದ ಮೈದಾನ, ಮಕ್ಕಳ ರೈಲುಗಳ ಸಮಸ್ಯೆ ಬಗೆಹರಿಸಲಾಗುವುದು’ ಎಂದು ಹೇಳಿದರು.

ಪಾಲಿಕೆ ಆಯುಕ್ತರು ಹಾಗೂ ಜೆ.ಪಿ. ಪಾರ್ಕ್ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳಿಂದ ಉದ್ಯಾನದಲ್ಲಿನ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದರು. ಪ್ರತಿದಿನ ಎಲ್ಲ ಶೌಚಾಲಯಗಳಿಗೆ ಬೀಗ ಹಾಕುತ್ತಿರುವ ಬಗ್ಗೆ ಸಾರ್ವಜನಿಕರು ದೂರಿದರು. ಪ್ರತ್ಯೇಕ ವಿಶ್ರಾಂತಿ ಕುಟೀರ ಬೇಕು ಎಂದು ಮಹಿಳಾ ನಡಿಗೆದಾರರು ಬೇಡಿಕೆ ಇಟ್ಟರು.

ಸಹಾಯವಾಣಿಗೆ ಕರೆ ಮಾಡಿ: ‘ಉದ್ಯಾನದ ಅಧ್ವಾನಗಳನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಅದರ ವಿಡಿಯೊ ಚಿತ್ರೀಕರಣ ಕೂಡ ಮಾಡಿಸಿದ್ದೇನೆ. ಜಿಬಿಎ ವ್ಯಾಪ್ತಿಯಲ್ಲಿ ಯಾವುದೇ ಸಮಸ್ಯೆಗಳು ಕಂಡುಬಂದರೆ 1533 ಸಹಾಯವಾಣಿಗೆ ಕರೆ ಮಾಡಿ ನಿಮ್ಮ ಅಹವಾಲನ್ನು ಸಲ್ಲಿಸಬಹುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ರಾಜಕುಮಾರ್ ರಸ್ತೆಯಲ್ಲಿನ ಕಸದ ಸಮಸ್ಯೆ, ಮಂಗನಪಾಳ್ಯದ ಬಳಿ ಕೆಳ ಸೇತುವೆ ನಿರ್ಮಾಣ, ಗಂಗಮ್ಮ ಸರ್ಕಲ್ ಬಳಿಯ ಸಮಸ್ಯೆಗಳು ಸೇರಿದಂತೆ ಎಲ್ಲರ ಅಹವಾಲುಗಳಿಗೆ ಅಧಿಕಾರಿಗಳು ನಿಮ್ಮ ಬಳಿ ಬಂದು ಪರಿಹಾರ ಒದಗಿಸುತ್ತಾರೆ’ ಎಂದರು.

ಜೆ.ಪಿ.ಪಾರ್ಕ್ ವ್ಯಾಪ್ತಿಯಲ್ಲಿ ಸುಮಾರು 44 ಕಾಮಗಾರಿಗಳು ಮಂಜೂರಾಗಿ ಶೇ 80 ರಷ್ಟು ಹಣ ಬಿಡುಗಡೆಯಾಗಿದ್ದರೂ ಯಾವುದೇ ಕಾಮಗಾರಿಗಳು ನಡೆದಿಲ್ಲ ಎಂದು ಆರ್‌ಟಿಐ ಕಾರ್ಯಕರ್ತ ವಿನ್ಸೆಂಟ್ ಬರ್ನಾಡ್ ದೂರಿದಾಗ, ‘ಈ ಬಗ್ಗೆ ತನಿಖೆ ಮಾಡುವಂತೆ ಸೂಚಿಸುತ್ತೇನೆ’ ಎಂದರು.

ರಾಕ್‌ಲೈನ್ ಮಾಲ್ ಬಳಿ ರಸ್ತೆಗುಂಡಿ ಹಾಗೂ ದಾಸರಹಳ್ಳಿ ಪಾಲಿಕೆ ಕಚೇರಿಯಲ್ಲಿ ಅಧಿಕಾರಿಗಳ ಕೊರತೆ ಬಗ್ಗೆ ದಾಸರಹಳ್ಳಿ ನಗರಸಭೆ ಮಾಜಿ ಅಧ್ಯಕ್ಷ ಕೆ.ಸಿ. ಅಶೋಕ್ ಗಮನ ಸೆಳೆದರು.

ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಹಲ್ಲೆ ಆರೋಪ: ದೂರು, ಪ್ರತಿದೂರು ದಾಖಲು

ಮರದ ಕೊಂಬೆ ವಿಚಾರಕ್ಕೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದಲ್ಲಿ ಮರದ ಕೊಂಬೆಗಳನ್ನು ಕಡಿದ ವಿಚಾರಕ್ಕೆ ಬಿಬಿಎಂಪಿ ಮಾಜಿ ಸದಸ್ಯರ ಪುತ್ರ ಹಾಗೂ ಸಾಮಾಜಿಕ ಕಾರ್ಯಕರ್ತರ ನಡುವೆ ಜಟಾಪಟಿ ನಡೆದಿದ್ದು, ದೂರು ಹಾಗೂ ಪ್ರತಿದೂರು ದಾಖಲಾಗಿದೆ.

ಜಯನಗರ ಆರನೇ ಬ್ಲಾಕ್‌ನ 20ನೇ ಡಿ ಮುಖ್ಯರಸ್ತೆಯಲ್ಲಿ ಬೆಳೆದಿದ್ದ ಬಾದಾಮಿ ಮರದಲ್ಲಿ ಹುಳುಗಳು ಹೆಚ್ಚಿ ಸ್ಥಳೀಯರಿಗೆ ಸಮಸ್ಯೆಯಾಗಿತ್ತು. ಹೀಗಾಗಿ, ಸ್ಥಳೀಯರ ಮನವಿಗೆ ಸ್ಪಂದಿಸಿ ಸಾಮಾಜಿಕ ಕಾರ್ಯಕರ್ತ ಗಣೇಶ್ ಸಿಂಗ್ ಎಂಬುವರು ಅರಣ್ಯ ಇಲಾಖೆ ಸಿಬ್ಬಂದಿಯಿಂದ ಅಕ್ಟೋಬರ್ 9ರಂದು ಮರದ ಕೊಂಬೆಗಳನ್ನು ಕಡಿಸಿದ್ದರು.

ಆಗ ಸ್ಥಳಕ್ಕೆ ಹೋಗಿದ್ದ ಬಿಬಿಎಂಪಿ ಮಾಜಿ ಸದಸ್ಯರ ಪುತ್ರ ಸತೀಶ್‌ರೆಡ್ಡಿ, ಮರದ ಕೊಂಬೆಗಳನ್ನು ಕಡಿದ ವಿಚಾರಕ್ಕೆ ಆಕ್ಷೇಪ ವ್ಯಕ್ತಪಡಿಸಿ ಗಣೇಶ್‌ಸಿಂಗ್ ಜತೆ ವಾಗ್ವಾದ ನಡೆಸಿದ್ದರು. ಬಳಿಕ ಜಗಳವಾಡಿ, ಕೈ ಮಿಲಾಯಿಸಿದ್ದಾರೆ. ಆಗ ಸತೀಶ್‌ರೆಡ್ಡಿ ಮತ್ತು ಅವರ ಮಗ ಚಿತ್ರರತ್ ಒಟ್ಟಾಗಿ ಗಣೇಶ್‌ಸಿಂಗ್‌ಗೆ ಹೆಲ್ಮೆಟ್ ಹಾಗೂ ದೊಣ್ಣೆಯಿಂದ ಹೊಡೆದಿದ್ದಾರೆ. ಇದಕ್ಕೆ ಪ್ರತಿಯಾಗಿ ಗಣೇಶ್‌ಸಿಂಗ್ ಮತ್ತು ಅವರ ಕಡೆಯ ಚಂದ್ರ, ಅಯ್ಯಪ್ಪ ಎಂಬುವರು ಸತೀಶ್‌ರೆಡ್ಡಿಗೆ ಅವಾಚ್ಯವಾಗಿ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಜಯನಗರ ಠಾಣೆ ಪೊಲೀಸರು ಹೇಳಿದ್ದಾರೆ.

ಘಟನೆ ಸಂಬಂಧ ಗಣೇಶ್‌ಸಿಂಗ್ ಮತ್ತು ಸತೀಶ್ ದೂರು-ಪ್ರತಿದೂರು ಕೊಟ್ಟಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮನೆಯ ಮುಂದಿನ ಮರ ಕತ್ತರಿಸುತ್ತಿರುವುದನ್ನು ಪ್ರಶ್ನಿಸಿದ ವ್ಯಕ್ತಿಯ ಮೇಲೆ ಹೆಲ್ಮೆಟ್‌ನಿಂದ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದಂತೆ ಗಣೇಶ್ ಸಿಂಗ್, ಚಂದ್ರ ಮತ್ತು ಅಯ್ಯಪ್ಪ ಎಂಬುವರ ವಿರುದ್ಧ ದಾಖಲಾಗಿದೆ.

‘ಸೆಪ್ಟೆಂಬರ್ 9ರಂದು ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ನನ್ನ ಮನೆಯ ಬಳಿ ಇರುವ ಮರವನ್ನು ಕತ್ತರಿಸುತ್ತಿದ್ದರು. ಇದನ್ನು ಪ್ರಶ್ನಿಸಿದಕ್ಕೆ ಸ್ಥಳದಲ್ಲಿದ್ದ ವ್ಯಕ್ತಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಆ ವೇಳೆ ಗಣೇಶ ಎಂಬಾತ ಬಂದು, ತಾನು ಎನ್.ಆರ್.ರಮೇಶ್ ಕಡೆಯ ವ್ಯಕ್ತಿ ಎನ್ನುತ್ತಾ ಏಕಾಏಕಿ ಹೆಲ್ಮೆಟ್‌ನಿಂದ ಹಲ್ಲೆ ಮಾಡಿದ್ದಾನೆ’ ಎಂದು ಸತೀಶ್ ರೆಡ್ಡಿ ದೂರಿನಲ್ಲಿ ತಿಳಿಸಿದ್ದಾರೆ.

‘ಮಗ ಚಿತ್ರರತ್ ಬಂದು ನನ್ನನ್ನು ಕಾಪಾಡಿದ್ದಾನೆ. ಚಂದ್ರ, ಅಯ್ಯಪ್ಪ ಅವರು ನನ್ನ ಮೇಲೆ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಘಟನೆ ಬಳಿಕ ಸಾಮಾಜಿಕ ಕಾರ್ಯಕರ್ತ ಗಣೇಶ್ ಸಹ ಪ್ರತಿ ದೂರು ನೀಡಿದ್ದಾರೆ.

‘ಸಾವಿತ್ರಿ ಮತ್ತು ಉಮಾ ಮಹೇಶ್ವರಿ ಮನೆಯ ಮುಂಭಾಗದ ಬಾದಾಮಿ ಮರದ ಅಪಾಯಕಾರಿ ಕೊಂಬೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಗಮನಕ್ಕೆ ತಂದು ತೆರವು ಮಾಡಲಾಗುತ್ತಿತ್ತು. ಈ ವೇಳೆ ನಗರ ಪಾಲಿಕ ಮಾಜಿ ಸದಸ್ಯರೊಬ್ಬರ ಮಗ ಸತೀಶ್‌ರೆಡ್ಡಿ ಸ್ಥಳಕ್ಕೆ ಬಂದು, ಕೆಲಸಕ್ಕೆ ಅಡ್ಡಿ ಪಡಿಸಿ, ನಿಂದಿಸಿದ್ದಾರೆ. ಸತೀಶ್ ಮತ್ತು ಅವರ ಮಗ ಹೆಲ್ಮೆಟ್ ಹಾಗೂ ದೊಣ್ಣೆಯಿಂದ ನನ್ನ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಮೊಗಳ್ಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಗಳ್ಳಿ ಗಣೇಶ್ ಅವರ ‘ನಾನೆಂಬುದ ಕಿಂಚಿತ್ತು’ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಗಬೇಕು’ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಭಾನುವಾರ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಆಯೋಜಿಸಿದ್ದ ಬೌದ್ಧ ಚಿಂತಕ ಬುದ್ಧಘೋಷ್ ದೇವೇಂದ್ರ ಹೆಗ್ಗಡೆ ಹಾಗೂ ಸಾಹಿತಿ ಮೊಗಳ್ಳಿ ಗಣೇಶ್ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಮೊಗಳ್ಳಿ ಅಪರೂಪದ ಪ್ರತಿಭೆ. ಅವರ ಬುಗುರಿ, ಭತ್ತ, ನನ್ನ ಅಜ್ಜನಿಗೆ ಒಂದು ಆಸೆ ಇತ್ತು ಸೇರಿದಂತೆ ಹಲವಾರು ಕತೆಗಳು ನಮ್ಮ ಮನಸಿನಲ್ಲಿ ಉಳಿದುಕೊಳ್ಳುತ್ತವೆ. ಅವರಿಗೆ ಸೂಕ್ತ ಪ್ರಶಸ್ತಿ, ಸ್ಥಾನಮಾನ ಸಿಗಲಿಲ್ಲ. ಶ್ರೇಷ್ಠತೆಯ ವ್ಯಸನದಿಂದ, ಜನರಿಂದ ದೂರ ಆಗಿದ್ದರು. ದಲಿತರಿಗೆ ಕೀರ್ತಿ ಮತ್ತು ಹಣ ಯಾವ ರೀತಿಯಾಗಿ ನಿರ್ವಹಣೆ ಮಾಡಬೇಕೆಂಬುದು ಗೊತ್ತಿಲ್ಲ. ಮೊಗಳ್ಳಿ ಸೇರಿದಂತೆ ನಮ್ಮೆಲ್ಲರಲ್ಲೂ ಈ ಮನೋಭಾವನೆ ಇದೆ’ ಎಂದು ತಿಳಿಸಿದರು.

‘ದೇವೇಂದ್ರ ಹೆಗ್ಗಡೆ ಅವರು ಬೌದ್ಧ ಚಳವಳಿಗೆ ಹೊಸ ರೂಪ ನೀಡಿದ್ದಾರೆ. ಶಹಾಪುರದಲ್ಲಿ ಬುದ್ಧ ವಿಹಾರವನ್ನು ನಿರ್ಮಿಸಿದ್ದಾರೆ. ದಲಿತರು ಬೌದ್ಧ ಧರ್ಮ ಸ್ವೀಕರಿಸಿದರೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಎಂಬ ಭಯ ಹೋಗಲಾಡಿಸಲು ಜಾಗೃತಿ ಮೂಡಿಸುತ್ತಿದ್ದರು’ ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಹೇಗೆ ಇರಬೇಕು ಎಂಬುದನ್ನು ದೇವೇಂದ್ರ ಹೆಗ್ಗಡೆ ಅವರನ್ನು ನೋಡಿ ಕಲಿತುಕೊಳ್ಳಬೇಕು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಮೊಗಳ್ಳಿ ಗಣೇಶ್ ಅವರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗುವುದು’ ಎಂದರು.

ಪತ್ರಕರ್ತರಾದ ಇಂದೂಧರ ಹೊನ್ನಾಪುರ, ನಂಜುಂಡೇಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಇಂದಿರಾ ಕೃಷ್ಣಪ್ಪ, ವಿ. ನಾಗರಾಜ್, ಹುಲಿಕುಂಟೆ ಮೂರ್ತಿ ಉಪಸ್ಥಿತರಿದ್ದರು.

ಯಶಸ್ಸಿಗೆ ಇರುವ ಮುಖ್ಯವಾದ ಕೀಲಿಕೈ ಎಂದರೆ ಆತ್ಮವಿಶ್ವಾಸ. ಈ ಆತ್ಮವಿಶ್ವಾಸವನ್ನು ಹೊಂದಲು ಅಗತ್ಯವಾದ ಪ್ರಮುಖ ಕೀಲಿಕೈ ಎಂದರೆ ಸಿದ್ಧತೆ.
–ಆರ್ಥರ್ ಆ್ಯಷ್



ಸಾಧಕ ವಿದ್ಯಾರ್ಥಿಗಳಿಗೆ ವಿದೇಶ ಪ್ರವಾಸದ ಭಾಗ್ಯ

• ಎ.ಎಂ.ಸುರೇಶ

‘ಮುಂದೊಂದು ದಿನ ಬ್ರಿಟನ್‌ನ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಬೇಕು ಎಂದು ಕನಸು ಕಾಣುತ್ತಿದ್ದೇವೆ. ಅಲ್ಲಿನ ಶಿಕ್ಷಣ ಪದ್ಧತಿ ನೋಡಿದ ಮೇಲೆ ಉನ್ನತ ವ್ಯಾಸಂಗಕ್ಕೆ ಅಲ್ಲಿಗೇ ಹೋಗಬೇಕು ಎಂಬ ಆಸೆ ನಮ್ಮಲ್ಲಿ ಬಂದಿದೆ’– ‘ವಿದೇಶಿ ವಿನಿಮಯ’ ಕಾರ್ಯಕ್ರಮದಡಿ ಒಂದು ವಾರ ಬ್ರಿಟನ್ ಪ್ರವಾಸ ಕೈಗೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆ ಕಮ್ಮಾಜೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳಾದ ಕೀರ್ತನ್ ಮತ್ತು ಕಿರಣ್‌ಕುಮಾರ್ ಅವರ ಮಾತುಗಳಿವು.

ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದಿರುವ ಇವರಿಬ್ಬರ ಜೊತೆಗೆ, ಅಶ್ವಿನಿ ಹಾಗೂ ಸವಿತಾ ಮಹದೇವಪ್ಪ ತಪಾಲ್ (ಬೆಳಗಾವಿ ಜಿಲ್ಲೆ ನಿಡಸೋಶಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ) ಅವರನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಸೆಪ್ಟೆಂಬರ್‌ನಲ್ಲಿ ಈ ಪ್ರವಾಸಕ್ಕೆ ಕರೆದೊಯ್ಯಲಾಗಿತ್ತು.

ಇವರೊಂದಿಗೆ ತುಮಕೂರು ಜಿಲ್ಲೆಯ ಭುವನಹಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರಾದ ಜಿ.ಎನ್.ರೂಪಾ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ನಾಗರಾಜ ಟಿ. ಪೂಜಾರ ಸಹ ತೆರಳಿದ್ದರು.

‘ಬ್ರಿಟನ್‌ನಲ್ಲಿ ಥಿಯರಿಗಿಂತ ಪ್ರಾಯೋಗಿಕವಾಗಿ ಕಲಿಯುವ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳೇ ತರಗತಿಯಲ್ಲಿ ವಿವರಣೆ ನೀಡಬೇಕು. ಇದರಿಂದ ಮಕ್ಕಳು ಎಷ್ಟು ಅರ್ಥ ಮಾಡಿಕೊಂಡಿದ್ದಾರೆ ಎಂಬುದು ಶಿಕ್ಷಕರಿಗೆ ಗೊತ್ತಾಗುತ್ತದೆ. ಈ ಪದ್ಧತಿ ನನಗೆ ಇಷ್ಟವಾಯಿತು’ ಎನ್ನುತ್ತಾರೆ ಕೀರ್ತನ್.

‘ಅಲ್ಲಿ ಸರ್ಕಾರಿ ಶಾಲೆಗಳಿಗೂ ಖಾಸಗಿ ಶಾಲೆಗಳಿಗೂ ಅಂತಹ ವ್ಯತ್ಯಾಸ ಇರುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಪಠ್ಯಕ್ರಮ ಸ್ವಲ್ಪ ಜಾಸ್ತಿ ಇರುತ್ತದೆ ಅಷ್ಟೆ’ ಎನ್ನುತ್ತಾರೆ ಕಿರಣ್‌ಕುಮಾರ್.

ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ತಂಡ ಲಂಡನ್‌ನ ಕಲಾ ಗ್ಯಾಲರಿಯ ಮುಂದೆ

‘ಅಲ್ಲಿಗೆ ಹೋಗಿ ನೋಡಿದ ಮೇಲೆ, ಧೈರ್ಯದಿಂದ ಮಾತನಾಡಬೇಕು, ಯಾರನ್ನೂ ಅವಲಂಬಿಸಬಾರದು ಎಂಬುದು ಅರಿವಿಗೆ ಬಂದಿದೆ. ತಂತ್ರಜ್ಞಾನ ಆಧಾರಿತ ಕಲಿಕೆ ಬ್ರಿಟನ್‌ನಲ್ಲಿ ಇದೆ. ಅಲ್ಲಿನ ವಿಶ್ವವಿದ್ಯಾಲಯಗಳನ್ನು ನೋಡಿ ಖುಷಿಯಾಯಿತು’ ಎನ್ನುತ್ತಾರೆ ಗದಗ ಜಿಲ್ಲೆ ಮಲ್ಲಸಮುದ್ರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಅಶ್ವಿನಿ ಹನುಮಂತಪ್ಪ ಲಮಾಣಿ.

‘ಬೆಂಗಳೂರಿಗೂ ಬರಲು ಸಾಧ್ಯವಿಲ್ಲದಂತಹ ನಾಲ್ವರು ವಿದ್ಯಾರ್ಥಿಗಳಿಗೆ ಮೊದಲ ಬಾರಿ ವಿದೇಶ ಪ್ರವಾಸದ ಅವಕಾಶ ಒದಗಿಬಂದಿತ್ತು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ಅಂಬೇಡ್ಕರ್ ಅವರು ಲಂಡನ್‌ನಲ್ಲಿ ಓದುವಾಗ ವಾಸ ಮಾಡುತ್ತಿದ್ದ ಮನೆ (ಈಗ ಮ್ಯೂಸಿಯಂ ಆಗಿದೆ), ಬ್ರಿಟನ್ ಪಾರ್ಲಿಮೆಂಟ್, ರಾಣಿಯ ಅರಮನೆ ಎಲ್ಲವನ್ನೂ ನೋಡಿದ ಮೇಲೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿದೆ’ ಎನ್ನುತ್ತಾರೆ ರೂಪಾ.

> **ಶಾಲೆಗಳು ಉನ್ನತ ಶೈಕ್ಷಣಿಕ ಗುರಿಗಳನ್ನು ಹೊಂದಲು, ಉತ್ತಮ ಫಲಿತಾಂಶ ಪಡೆಯುವ ದಿಸೆಯಲ್ಲಿ ಪ್ರೋತ್ಸಾಹಿಸಲು ಈ ಯೋಜನೆ ನೆರವಾಗಲಿದೆ. ಅಲ್ಲದೆ ಜಾಗತಿಕ ಶಿಕ್ಷಣ, ಶೈಕ್ಷಣಿಕ ವ್ಯವಸ್ಥೆ ಮತ್ತು ಸಂಪನ್ಮೂಲಗಳ ಬಗ್ಗೆ ತಿಳಿಯಲು ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ. ಶಿಕ್ಷಣದಲ್ಲಿ ಬ್ರಿಟನ್ ಬಹಳ ಮುಂದೆ ಇದೆ. ನಮ್ಮಲ್ಲೂ ಬದಲಾವಣೆ ಆಗಬೇಕು.**
> **ಜಿ.ಎನ್.ರೂಪಾ,** ಪ್ರಾಂಶುಪಾಲೆ

ಸ್ಕಾಟ್ಲೆಂಡ್ ರಾಜಧಾನಿ ಎಡಿನ್‌ಬರೊ, ಅಲ್ಲಿನ ಸಂಸತ್, ಶಾಲಾ–ಕಾಲೇಜುಗಳಲ್ಲಿನ ಶಿಕ್ಷಣ, ಪರೀಕ್ಷಾ ಪದ್ಧತಿ, ಅರ್ಥಶಾಸ್ತ್ರದ ಪಿತಾಮಹ ಆ್ಯಡಂ ಸ್ಮಿತ್ ವಾಸಿಸುತ್ತಿದ್ದ ಮನೆ, ರಾಜರ ಆಳ್ವಿಕೆ, ಎಡಿನ್‌ಬರೊ ಕೋಟೆಯಂತಹವುಗಳ ಬಗ್ಗೆ ತಿಳಿಯಲು ಅನುಕೂಲವಾಯಿತು. ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ವ್ಯಾಸಂಗ ಮಾಡಿದ್ದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ, ಅಲ್ಲಿನ ಗ್ರಂಥಾಲಯ, ಸಭಾಂಗಣವನ್ನು ನೋಡಿ ವಿದ್ಯಾರ್ಥಿಗಳು ಖುಷಿಪಟ್ಟರು. ‘ಪ್ರಬುದ್ಧ’ ಯೋಜನೆಯಡಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ವಿದ್ಯಾರ್ಥಿಗಳೊಂದಿಗೆ ಸಂವಾದವನ್ನೂ ನಡೆಸಲಾಯಿತು. ಇದರಿಂದ ನಮ್ಮ ವಿದ್ಯಾರ್ಥಿಗಳು ಹಲವಾರು ವಿಷಯಗಳನ್ನು ತಿಳಿದುಕೊಂಡರು. ಇದು ಹೆಮ್ಮೆಯ ವಿಷಯ ಎಂಬುದು ರೂಪಾ ಅವರ ಅನಿಸಿಕೆ. ❖

ಆಯ್ಕೆ ಹೇಗೆ?

ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 2024ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು, ಪ್ರಸ್ತುತ ವಸತಿ ಕಾಲೇಜಿನಲ್ಲೇ ಪಿಯುಸಿ ಓದುತ್ತಿರಬೇಕು ಎಂಬ ಷರತ್ತಿನೊಂದಿಗೆ ನಾಲ್ವರು ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಆಯ್ಕೆ ಮಾಡಲಾಗಿತ್ತು. ಇವರಲ್ಲಿ ಇಬ್ಬರು ಬಾಲಕರು, ಇಬ್ಬರು ಬಾಲಕಿಯರು. ಇವರೆಲ್ಲ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರ ಹಿಂದುಳಿದ ವರ್ಗಕ್ಕೆ ಸೇರಿದವರು. ಇದಲ್ಲದೆ ಮೂರು ವರ್ಷಗಳಿಂದ ಅತ್ಯುತ್ತಮ ಫಲಿತಾಂಶ ಬರಲು ಶ್ರಮಿಸಿದ ಒಬ್ಬ ಮಹಿಳಾ ಪ್ರಾಂಶುಪಾಲರಿಗೆ ಪ್ರವಾಸಕ್ಕೆ ಹೋಗಲು ಅವಕಾಶ ಕಲ್ಪಿಸಲಾಗಿತ್ತು. ಬೇರೆಯವರಿಗೆ ಇದು ಪ್ರೇರಣೆಯಾಗಲಿದೆ ಎಂಬುದು ಈ ಆಯ್ಕೆ ಮತ್ತು ಪ್ರವಾಸದ ಮುಖ್ಯ ಉದ್ದೇಶ.

ಅಂಬೇಡ್ಕರ್ ಅವರ ಶೈಕ್ಷಣಿಕ ಪಯಣ ಮತ್ತು ಅವರ ಚಿಂತನೆಯನ್ನು ರೂಪಿಸಿದ ಸಂಸ್ಥೆಗಳ ಬಗ್ಗೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ತಿಳಿಯಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಮೊದಲ ಬಾರಿಗೆ ಈ ಪ್ರವಾಸ ಆಯೋಜಿಸಲಾಗಿತ್ತು. ಇನ್ನು ಮುಂದೆ ಪ್ರತಿವರ್ಷ ಈ ಕಾರ್ಯಕ್ರಮ ಆಯೋಜಿಸುವ ಉದ್ದೇಶವನ್ನು ಸಮಾಜ ಕಲ್ಯಾಣ ಇಲಾಖೆ ಹೊಂದಿದೆ.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಥಸಂಚಲನದಲ್ಲಿ ಪಾಲ್ಗೊಂಡಿದ್ದ ವಿಜಯಪುರ ಸೈನಿಕ ಶಾಲೆ ವಿದ್ಯಾರ್ಥಿಗಳ ಸಂಗ್ರಹ ಚಿತ್ರ.

ಸೈನಿಕ ಶಾಲೆ ಶಿಸ್ತಿನ ನೆಲೆ

• ಸುಧೀರ್ ಕುಮಾರ್ ಎಚ್.ಕೆ.

ಭಾರತೀಯ ಸಶಸ್ತ್ರ ಪಡೆಗಳಲ್ಲಿ ನಿಮ್ಮ ಮಕ್ಕಳು ಸೇವೆ ಸಲ್ಲಿಸಬೇಕೆ? ನಾಯಕತ್ವ ಗುಣ, ಶಿಸ್ತು, ದೈಹಿಕ ದೃಢತೆ ಅವರ ದಿನಚರಿಯ ಭಾಗವಾಗುವುದು ನಿಮ್ಮ ಬಯಕೆಯೇ? ಹಾಗಿದ್ದರೆ ಸೈನಿಕ ಶಾಲೆ ಅವರಿಗೆ ಸೂಕ್ತವಾಗಬಹುದು.

ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಮತ್ತು ಇತರ ಮಿಲಿಟರಿ ಸಂಬಂಧಿತ ಸಂಸ್ಥೆಗಳ ಪ್ರವೇಶಕ್ಕಾಗಿ ಅಗತ್ಯ ಕೌಶಲ ಮತ್ತು ಜ್ಞಾನ ಒದಗಿಸುವ ಸೈನಿಕ ಶಾಲೆಗಳು, ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುತ್ತವೆ.

ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸೈನಿಕ ಶಾಲೆಗಳ ಸೊಸೈಟಿಯು ಇವುಗಳನ್ನು ಸ್ಥಾಪಿಸಿ ನಿರ್ವಹಿಸುತ್ತದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲೂ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸುವ ಅಖಿಲ ಭಾರತ ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆ (ಎಐಎಸ್‌ಎಸ್‌ಇಇ) ಮೂಲಕ ವಿದ್ಯಾರ್ಥಿಗಳ ಆಯ್ಕೆ ನಡೆಯುತ್ತದೆ. ಇಲ್ಲಿ ದೊರೆಯುವ ಶಿಕ್ಷಣವು ಸೈನ್ಯ ಮಾತ್ರವಲ್ಲದೆ ಐಎಎಸ್, ಐಪಿಎಸ್‌ನಂತಹ ಸೇವೆಗಳಿಗೂ ಉತ್ತಮ ಬುನಾದಿ ಒದಗಿಸುತ್ತದೆ.

ಪ್ರವೇಶ ಪ್ರಕ್ರಿಯೆ ಹಂತ

ಅರ್ಜಿ ಸಲ್ಲಿಕೆ: ಪ್ರತಿ ವರ್ಷ ಡಿಸೆಂಬರ್ ಆಸುಪಾಸಿನಲ್ಲಿ ಎನ್‌ಟಿಎ ವೆಬ್‌ಸೈಟ್– aissee.nta.nic.in ಮೂಲಕ ಪ್ರವೇಶ ಪರೀಕ್ಷೆಯ ಅರ್ಜಿ ಭರ್ತಿ ಮಾಡಬೇಕು. ಈ ಬಾರಿ ನವೆಂಬರ್‌ನಿಂದ ಪರೀಕ್ಷಾ ನೋಂದಣಿ ಆರಂಭಗೊಳ್ಳುವ ಸಾಧ್ಯತೆಯಿದ್ದು, 2026ರ ಜನವರಿಯಲ್ಲಿ ಪರೀಕ್ಷೆ ನಡೆಯಬಹುದು ಎಂದು ತಾತ್ಕಾಲಿಕ ವೇಳಾಪಟ್ಟಿ ತಿಳಿಸುತ್ತಿದೆ.

ಅರ್ಹತೆ: 6 ಮತ್ತು 9ನೇ ತರಗತಿಗಳಿಂದ ಪ್ರವೇಶಾವಕಾಶ ಲಭ್ಯವಿರುತ್ತದೆ. 6ನೇ ತರಗತಿಗೆ ಪ್ರವೇಶ ಬಯಸುವವರು 10ರಿಂದ 12 ವರ್ಷದವರಾಗಿದ್ದು, 5ನೇ ತರಗತಿಯಲ್ಲಿ ಓದುತ್ತಿರಬೇಕು. 9ನೇ ತರಗತಿಗೆ ಅರ್ಜಿ ಸಲ್ಲಿಸುವವರು 13ರಿಂದ 15 ವರ್ಷದವರಾಗಿದ್ದು, ಎನ್‌ಟಿಎ ರೂಪಿಸಿರುವ ಅಗತ್ಯ ಮಾನದಂಡಗಳನ್ನು ಹೊಂದಿರಬೇಕು.

ಪರೀಕ್ಷೆಯು ಗಣಿತ, ಸಾಮಾನ್ಯ ಜ್ಞಾನ ಮತ್ತು ಭಾಷೆಯ ವಿಷಯಗಳನ್ನು ಒಳಗೊಂಡಿರುತ್ತದೆ.

ವೈದ್ಯಕೀಯ ಪರೀಕ್ಷೆ: ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತದೆ. ಇದು ದೃಷ್ಟಿ, ಶ್ರವಣ, ಎತ್ತರ ಮತ್ತು ತೂಕದ ಮೌಲ್ಯಮಾಪನ ಒಳಗೊಂಡಿರುತ್ತದೆ.

ಇ–ಕೌನ್ಸೆಲಿಂಗ್: ಪರೀಕ್ಷೆಯ ಫಲಿತಾಂಶ ಮತ್ತು ವೈದ್ಯಕೀಯ ಪರೀಕ್ಷೆ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಮೀಸಲಾತಿಯೂ ಲಭ್ಯವಿದ್ದು, ತವರು ರಾಜ್ಯದ ನಿವಾಸಿಗಳಿಗೆ ಶೇ 67, ಇತರ ರಾಜ್ಯದ ಅಭ್ಯರ್ಥಿಗಳಿಗೆ ಶೇ 33ರಷ್ಟು ಸೀಟುಗಳನ್ನು ಕಾಯ್ದಿರಿಸಲಾಗುತ್ತದೆ. ಇದರಲ್ಲಿ ಮಾಜಿ ಸೈನಿಕರು ಮತ್ತು ಸೇನಾ ಸಿಬ್ಬಂದಿ ಮಕ್ಕಳಿಗೆ ಶೇ 25, ಪರಿಶಿಷ್ಟ ಜಾತಿ– ಶೇ 15, ಪರಿಶಿಷ್ಟ ಪಂಗಡ– ಶೇ 7.5 ಹಾಗೂ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಸೀಟುಗಳು ಲಭ್ಯವಿರುತ್ತವೆ. 6ನೇ ತರಗತಿಯ ಲಭ್ಯ ಸೀಟುಗಳಲ್ಲಿ ಶೇ 10 ಅಥವಾ ಕನಿಷ್ಠ 10 (ಯಾವುದು ಗರಿಷ್ಠವೋ) ಅಷ್ಟು ಪ್ರಮಾಣದಲ್ಲಿ ಬಾಲಕಿಯರಿಗೆ ಮೀಸಲಾತಿ ಇರುತ್ತದೆ.

ಪರೀಕ್ಷಾ ಪ್ರಕ್ರಿಯೆ ಬಳಿಕ ಮೆರಿಟ್ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆದ ವಿದ್ಯಾರ್ಥಿಗಳು ತಮ್ಮ ಅರ್ಹತೆಯಂತೆ, ಅಗತ್ಯ ಸೈನಿಕ ಶಾಲೆಗೆ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಹುದು. ಶುಲ್ಕವು ಆಯಾ ಸಂಸ್ಥೆಯಲ್ಲಿನ ವಿವಿಧ ಸೌಲಭ್ಯಗಳಿಗೆ ತಕ್ಕಂತೆ ಭಿನ್ನವಾಗಿ ಇರುತ್ತದೆ. ರನ್ನಿಂಗ್, ಫೈರಿಂಗ್, ಸ್ವಿಮಿಂಗ್, ಕ್ಯಾನೋಯಿಂಗ್, ಪರ್ವತಾರೋಹಣದಂತಹ ಕೋರ್ಸ್ ಹಾಗೂ ಕ್ರೀಡಾ ಸೌಲಭ್ಯಗಳನ್ನೂ ಒದಗಿಸುವುದು ಈ ಶಾಲೆಗಳ ವಿಶೇಷ. ❖

ರಾಜ್ಯದಲ್ಲಿ ಇರುವ ಶಾಲೆಗಳು

ಸೈನಿಕ್ ಶಾಲೆ ಬಿಜಾಪುರ, ಕೊಡಗು ಮತ್ತು ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಮೈಸೂರು ಜಿಲ್ಲೆಯ ಸರಗೂರು ತಾಲ್ಲೂಕಿನ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಸೈನಿಕ ಶಾಲೆ, ಬೀದರ್‌ನ ನ್ಯಾಷನಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಸೈನಿಕ ಶಾಲೆ. ಬೀದರ್‌ನ ಶಾಲೆಯು ಈಚೆಗೆ ಸೇರ್ಪಡೆಗೊಂಡಿದೆ.

ಸರಗೂರಿನಲ್ಲಿ ಎನ್‌ಜಿಒ ನಿರ್ವಹಣೆ

ಮೈಸೂರು ಜಿಲ್ಲೆಯ ಸರಗೂರು ತಾಲ್ಲೂಕಿನಲ್ಲಿ 2022ರಲ್ಲಿ ಆರಂಭವಾದ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಸೈನಿಕ ಶಾಲೆಯು ರಾಜ್ಯದಲ್ಲಿ ಸ್ವಯಂಸೇವಾ ಸಂಸ್ಥೆ ನಡೆಸುತ್ತಿರುವ ಏಕೈಕ ಸೈನಿಕ ಶಾಲೆ.

ಇದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಘಟಕ. ‘ಸೂಕ್ತ ಮಾರ್ಗದರ್ಶನ ಹಾಗೂ ಅಗತ್ಯ ತರಬೇತಿಯನ್ನು ಪಡೆದರೆ ಗ್ರಾಮೀಣ ಮಕ್ಕಳು ಪ್ರವೇಶ ಪರೀಕ್ಷೆ ಬರೆದು ಆಯ್ಕೆ ಆಗಬಹುದು. ಭವಿಷ್ಯದಲ್ಲಿ ಬಹಳಷ್ಟು ಅವಕಾಶ ದೊರೆಯಲಿದೆ’ ಎನ್ನುವುದು ಘಟಕದ ಆಶಯ.

ವಿದ್ಯಾರ್ಥಿ ವೇತನ ಕೈಪಿಡಿ

ಸಿಬಿಎಸ್‌ಇ ಮೆರಿಟ್ ಸ್ಕಾಲರ್‌ಷಿಪ್– 2025

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ನೀಡುವ ಒಂದು ಅವಕಾಶ ಇದಾಗಿದೆ. ಪೋಷಕರ ಏಕೈಕ ಹೆಣ್ಣುಮಗುವಾಗಿದ್ದು, ಸಿಬಿಎಸ್‌ಇ ಸಂಯೋಜಿತ ಶಾಲೆಯಿಂದ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಈ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತದೆ.

ಅರ್ಹತೆ: ವಿದ್ಯಾರ್ಥಿನಿಯು ಸಿಬಿಎಸ್‌ಇ ಸಂಯೋಜಿತ ಶಾಲೆಯಲ್ಲಿ 11 ಅಥವಾ 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಅಲ್ಲಿ ಬೋಧನಾ ಶುಲ್ಕ ತಿಂಗಳಿಗೆ ₹ 3,000ಕ್ಕಿಂತ ಹೆಚ್ಚಿಲ್ಲ. ಅರ್ಜಿದಾರರು 10ನೇ ತರಗತಿ ಪರೀಕ್ಷೆಯಲ್ಲಿ ಮೊದಲ ಐದು ವಿಷಯಗಳಲ್ಲಿ ಶೇ 70 ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು.

ಆರ್ಥಿಕ ನೆರವು: ಗರಿಷ್ಠ 2 ವರ್ಷಗಳ ಅವಧಿಗೆ ತಿಂಗಳಿಗೆ ₹ 1,000.

ಅರ್ಜಿ ಸಲ್ಲಿಸಲು ಕೊನೇ ದಿನ: 23-10-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/CMSC2

ಒಎನ್‌ಜಿಸಿ ಕ್ರೀಡಾ ವಿದ್ಯಾರ್ಥಿವೇತನ

ಭಾರತೀಯ ಕ್ರೀಡಾಪಟುಗಳಲ್ಲಿ ಕ್ರೀಡಾಸ್ಫೂರ್ತಿಯನ್ನು ಉತ್ತೇಜಿಸಲು ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ (ಒಎನ್‌ಜಿಸಿ) ಉಪಕ್ರಮ ಇದಾಗಿದೆ. ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಿರುವ, ಮಾನ್ಯತೆ ಪಡೆದ 21 ಕ್ರೀಡೆಗಳ ಪೈಕಿ ಒಂದರಲ್ಲಿ ಶ್ರೇಷ್ಠ ಸಾಧನೆ ಮಾಡುತ್ತಿರುವ 15ರಿಂದ 20 ವರ್ಷ ವಯಸ್ಸಿನ ಪುರುಷ ಅಥವಾ ಮಹಿಳಾ ಕ್ರೀಡಾಪಟುಗಳು ಅರ್ಜಿ ಸಲ್ಲಿಸಬಹುದು. ಅವರ ಪೋಷಕರ ವಾರ್ಷಿಕ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ಭಾಗವಹಿಸುವಿಕೆಯ ಮಟ್ಟವನ್ನು ಅವಲಂಬಿಸಿ ಮಾಸಿಕ ₹ 15,000ದಿಂದ ₹ 30,000ದವರೆಗೆ.

ಅರ್ಜಿ ಸಲ್ಲಿಸಲು ಕೊನೇ ದಿನ: 21-10-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/ONGC3

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

18) 1784ರ ಪಿಟ್ಸ್ ಇಂಡಿಯಾ ಕಾಯ್ದೆ ಬರೆಯಿರಿ

ಉತ್ತರ:– (....ಹಿಂದಿನ ಸಂಚಿಕೆಯಿಂದ)

ಅಧಿಕಾರವನ್ನು ಪಡೆದಿತ್ತು. ಇಂಗ್ಲೆಂಡಿನಲ್ಲಿ ನಿರ್ದೇಶಕ ಮಂಡಳಿ (Court of Directors) ಮತ್ತು ನಿಯಂತ್ರಣ ಮಂಡಳಿ (Board of Control) ಎರಡೂ ಜಾರಿಯಲ್ಲಿದ್ದವು. “ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಾ ಅವರದೇ ಸ್ವಂತ ಹಕ್ಕಲ್ಲ” ಎಂದು ಈ ಕಾಯ್ದೆಯಲ್ಲಿ ಹೇಳುವ ಮೂಲಕ ಭಾರತೀಯರ ರಾಜಕೀಯ ಹಕ್ಕುಗಳನ್ನು ನಿರ್ಣಾಯಕವಾಗಿ ಮೊಟಕುಗೊಳಿಸಿತು. ಈ ಕಾಯ್ದೆಯು ಭಾರತದಲ್ಲಿದ್ದ ಕಂಪನಿಯ ಅಧೀನದ ಪ್ರದೇಶ (The British Possessions)ಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

19) ಚಾರ್ಟರ್ ಕಾಯ್ದೆಗಳು ಯಾವ ಉದ್ದೇಶದಿಂದ ಜಾರಿಯಾದವು?

ಉತ್ತರ:– ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿ(permit)ಯನ್ನು ವಿಸ್ತರಿಸುವ ಉದ್ದೇಶದಿಂದ. 1793, 1813, 1833 ಮತ್ತು 1853ರಲ್ಲಿ ಚಾರ್ಟರ್ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಪ್ರತಿ 20 ವರ್ಷಕ್ಕೊಮ್ಮೆ ಕಂಪನಿಗೆ ಪರವಾನಗಿಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಇಂಗ್ಲೆಂಡಿನ ಸರ್ಕಾರ ತೆಗೆದುಕೊಂಡ ಹೊಸ ನೀತಿಗಳನ್ನು ಈ ಕಾಯ್ದೆಗಳಲ್ಲಿ ಸೇರಿಸಲಾಯಿತು.

20) 1813ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳು ಯಾವುವು?

ಉತ್ತರ : 1813ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳು

1. ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು. ಈ ಕಾಯ್ದೆಯು ಜಾರಿಗೊಳ್ಳುವ ಪೂರ್ವದಲ್ಲಿ ಭಾರತದಲ್ಲಿ ವ್ಯಾಪಾರ ಮಾಡುವ ಅಧಿಕಾರವನ್ನು ಕಂಪನಿಗೆ ಮಾತ್ರವಲ್ಲದೆ ಇಚ್ಛೆಯುಳ್ಳವರೆಲ್ಲರಿಗೂ ನೀಡಬೇಕೆಂದು ದೊಡ್ಡ ಹೋರಾಟ ನಡೆಯಿತು. ಈ ಹಿನ್ನೆಲೆಯಲ್ಲಿ ಇಚ್ಛೆಯಿದ್ದವರೆಲ್ಲರಿಗೂ ಈ ಕಾಯ್ದೆಯು ಅವಕಾಶವನ್ನು ಮುಕ್ತವಾಗಿಸಿತು. ಇದರ ಪರಿಣಾಮವಾಗಿ ಮುಕ್ತ ವ್ಯಾಪಾರದ ಹೊಸ ಶಕೆ ಆರಂಭಗೊಂಡಿತು.
2. ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು.
3. ಇನ್ನು ಮುಂದೆ ಗವರ್ನರ್ ಜನರಲ್ ಮತ್ತು ಸೇನೆಯ ಮಹಾ ಮುಖ್ಯಸ್ಥರನ್ನು (commander-in-chief) ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.
4. ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು. ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು ನೀಡಲಾಯಿತು. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬರತೊಡಗಿದರು. ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

21) 1833ರ ಚಾರ್ಟರ್ ಕಾಯ್ದೆಯಲ್ಲಿರುವ ಪ್ರಮುಖಾಂಶಗಳನ್ನು ಬರೆಯಿರಿ

ಉತ್ತರ : ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ; 1. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು.

2. ಭಾರತದ ಎಲ್ಲ ವ್ಯಾಪಾರಿ ಸರಕುಗಳನ್ನು “ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ” ಅಧಿಕಾರವನ್ನು ಗವರ್ನರ್ ಜನರಲ್‌ನು ಪಡೆದನು.
3. ದೇಶಿ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತ್ತು.
4. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಯಲ್ಲಿ ಉಳಿದ ಸದಸ್ಯರ ಜೊತೆ ಗವರ್ನರ್ ಜನರಲ್‌ನಿಗೆ ಯಾವುದಾದರೂ ವಿಷಯದ ಮೇಲೆ ಒಮ್ಮತ ಮೂಡದಿದ್ದಾಗ ಅವನು ಬಹುಮತದ ನಿರ್ಣಯವನ್ನು ತಿರಸ್ಕರಿಸಲು ಇದ್ದ ಕಾರಣಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕಾಯಿತು.
5. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು ಈ ಕಾಯ್ದೆಯು ನಿರ್ದೇಶಿಸಿತು.
6. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬೇಕಾಯಿತು.
7. ಎಲ್ಲ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು. ಈ ಕಾಯ್ದೆಯು 1830ರ ದಶಕದ ಭಾರತದ ಆಂತರಿಕ ಮತ್ತು ಇಂಗ್ಲೆಂಡಿನಲ್ಲಿದ್ದ ವಿವಿಧ ರಾಜಕೀಯ ವಿದ್ಯಮಾನಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ

22) ಭಾರತ ಸರ್ಕಾರದ ಕಾಯ್ದೆ – 1858 ಪ್ರಮುಖಾಂಶಗಳನ್ನು ಬರೆಯಿರಿ

ಉತ್ತರ:– ಈ ಕಾಯ್ದೆಯನ್ನು 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು. ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು. ನವಂಬರ್ 1, 1858ರಂದು ಬ್ರಿಟಿಷ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು.

ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ, 1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.

2. ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ “ವೈಸ್‌ರಾಯ್” ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ “ಲಾರ್ಡ್ ಕ್ಯಾನಿಂಗ್” ನೇಮಕಗೊಂಡರು.
3. “ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ” ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.
4. ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ (ಕೌನ್ಸಿಲ್ ಆಫ್ ಇಂಡಿಯಾ) ಅಸ್ತಿತ್ವಕ್ಕೆ ಬಂದಿತು.

23) 1861ರ ಭಾರತೀಯ ಪರಿಷತ್ ಕಾಯ್ದೆಯಲ್ಲಿರುವ ಅಂಶಗಳು ಯಾವುವು?

ಉತ್ತರ. 1861ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು: (1) ವೈಸರಾಯ್ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ ಮಾಡಲಾಯಿತು.

(2) ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರವನ್ನು ಗವರ್ನರ್ ಜನರಲ್‌ಗೆ ನೀಡಲಾಯಿತು.

24) 1892ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DIFFERENTIABILITY

2. Prove that $\frac{d}{dx}\cos^{-1}x = -\frac{1}{\sqrt{1-x^2}}$ by definition.

Prof:- (....Contd)

$$= \frac{1}{(-1)\,\underset{h\to 0}{Lt}\left(\sin\frac{2y+h}{2}\right)\left(\frac{\sin\frac{h}{2}}{\frac{h}{2}}\right)}$$

$$= -\frac{1}{\sin y}, \text{ provided } \neq 0 \text{ and } y \neq \pi$$

$$\therefore \frac{d}{dx}\cos^{-1}x = -\frac{1}{\sqrt{1-\cos^2 y}}$$

$$= -\frac{1}{\sqrt{1-x^2}},$$

$[\because \sin y > 0 \text{ for } y \in (0,\pi)]$

3. Prove that $\frac{d}{dx}\tan^{-1}x = \frac{1}{1+x^2}$ by definition.

Proof :– Let $y = \tan^{-1}x$,

$$y \in \left[-\frac{\pi}{2}, \frac{\pi}{2}\right], x \in R.$$

$$\Rightarrow x = \tan y$$

$$\therefore \frac{d}{dx}\tan^{-1}x = \frac{d}{dx}y = \frac{1}{\left(\frac{dx}{dy}\right)} = \frac{1}{\frac{d}{dy}(\tan y)}$$

$$= \frac{1}{\underset{h\to 0}{Lt}\left\{\frac{\tan(y+h)-\tan y}{h}\right\}}$$

$$= \frac{1}{\underset{h\to 0}{Lt}\left\{\frac{\sin(y+h-y)}{\cos(y+h)\cos y}\right\}}$$

$$= \frac{1}{\underset{h\to 0}{Lt}\left\{\frac{\sin(y+h)\cos y-\cos(y+h)\sin y}{h\cos(y+h)\cos y}\right\}}$$

$$= \frac{1}{\underset{h\to 0}{Lt}\left\{\frac{\sin(y+h)-y}{h\cos(y+h)\cos y}\right\}}$$

$$= \frac{1}{\underset{h\to 0}{Lt}\left(\frac{\sin h}{h}\right)\cdot\left\{\frac{1}{\cos(y+h)\cos y}\right\}}$$

$$= \frac{1}{1)\left\{\frac{1}{\cos y\cos y}\right\}}$$

$$= \cos^2 y\ \frac{1}{\sec^2 y}$$

$$= \frac{1}{1+\tan^2 y} = \frac{1}{1+x^2}$$

Inverse trigonometric functions

Basics

1. Define inverse sine function.

Ans:- Inverse sine function is defined as –

If $\sin\theta = x, -\frac{\pi}{2} \le x \le \frac{\pi}{2}$,

then $\sin^{-1}x = \theta, -1 \le x \le 1$,

is called inverse sine function.

i.e., $\sin^{-1}x = \theta$

$$\Leftrightarrow \sin\theta = x; \begin{cases} -\frac{\pi}{2} \le \theta \le \frac{\pi}{2} \\ -1 \le x \le 1 \end{cases}$$

2. Define inverse cosine function.

Ans:- Inverse cosine function is defined as –

If $\cos\theta = x, 0 \le \theta \le \pi$, then, $\cos^{-1}x = \theta, -1 \le x \le 1$, is called inverse cosine function.

i.e., $\cos^{-1}x = \theta$

$$\Leftrightarrow \cos\theta = x; \begin{cases} 0 \le \theta \le \pi \\ -1 \le x \le 1 \end{cases}$$

3. Define inverse tangent function.

Ans:- Inverse tangent function is defined as –

If $\tan\theta = x, -\frac{\pi}{2} < \theta < \frac{\pi}{2}$, then, $\tan^{-1}x = \theta, -\infty < x < \infty$, is called inverse tangent function.

i.e., $\tan^{-1}x = \theta$

$$\Leftrightarrow \tan\theta = x; \begin{cases} -\frac{\pi}{2} < \theta < \frac{\pi}{2} \\ -\infty < x < \infty \end{cases}$$

4. Define inverse cosecant function.

Ans:- Inverse cosecant function is defined as –

If $\operatorname{cosec}\theta = x, -\frac{\pi}{2} \le \theta \le \frac{\pi}{2}, \theta \neq 0$,

then $\operatorname{cosec}^{-1}x = \theta, x \le -1$ or $x \ge 1$, is called inverse cosecant function.

ie., $\operatorname{cosec}^{-1}x = \theta$

$$\Leftrightarrow \operatorname{cosec}\theta = x; \begin{cases} -\frac{\pi}{2} \le \theta \le \frac{\pi}{2}, \theta \neq 0 \\ x \le -1 \text{ (or) } x \ge 1 \end{cases}$$

5. Define inverse secant function.

Ans:- **Inverse secant function is defined as –**

If $\sec\theta = x, 0 \le \theta \le \pi, \theta \neq \frac{\pi}{2}$;

then, $\sec^{-1}x = \theta, x \le -1$ (or) $x \ge 1$, is called inverse secant function.

i.e., $\sec^{-1}x = \theta$

$$\Leftrightarrow \sec\theta = x; \begin{cases} 0 \le \theta \le \pi, \theta \neq \frac{\pi}{2} \\ x \le -1 \text{ (or) } x \ge 1 \end{cases}$$

6. Define inverse tangent function.

Ans:- Inverse tangent function is defined as –

If $\cot\theta = x, 0 < \theta < \pi$, then, $\cot^{-1}x = \theta, -\infty < x < \infty$, is called inverse cotangent function.

i.e., $\cot^{-1}x = \theta$

$$\Leftrightarrow \cot\theta = x; \begin{cases} 0 < \theta < \pi \\ -\infty < x < \infty \end{cases}$$

7. Prove that $\sin^{-1}(-x) = -\sin^{-1}x, -1 \le x \le 1$

Soln:- Let $\sin^{-1}(-x) = \theta$

$\therefore \sin\theta = -x$; i.e., $-\sin\theta = x$

$\Rightarrow \sin(-\theta) = x$

Hence, $\sin^{-1}x = -\theta$

(or) $\theta = -\sin^{-1}x$

$\therefore \sin^{-1}(-x) = -\sin^{-1}(-x)$

‘ಮೆಟ್ರೊಗೆ ಕೆಂಪೇಗೌಡರ ಹೆಸರಿಡಿ’

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ನಂಜಾವಧೂತ ಸ್ವಾಮೀಜಿ ಆಗ್ರಹ

ಪ್ರಮುಖ ಅಂಶಗಳು
- ಜಾತಿ ಕಾಲಂನಲ್ಲಿ ಒಕ್ಕಲಿಗ ಎಂದೇ ನಮೂದಿಸಬೇಕು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ
- ಶೀಘ್ರ ಒಕ್ಕಲಿಗರ ಸಂಘದ ಸರ್ವ ಸದಸ್ಯರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರ ಹೆಸರನ್ನು ನಮ್ಮ ಮೆಟ್ರೊಗೆ ನಾಮಕರಣ ಮಾಡಬೇಕು’ ಎಂದು ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಆಗ್ರಹಿಸಿದರು.

ರಾಜ್ಯ ಒಕ್ಕಲಿಗರ ಸಂಘ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಮಾತನಾಡಿದರು.

‘ಕೆಂಪೇಗೌಡರು ದೂರದೃಷ್ಟಿ ಹೊಂದಿದ್ದರು. ಇಡೀ ಜಗತ್ತೆ ತಿರುಗಿ ನೋಡುವಂತೆ ನಾಡನ್ನು ಕಟ್ಟಿದರು. ಆದ್ದರಿಂದ ನಮ್ಮ ಮೆಟ್ರೊದ ಹೆಸರನ್ನು ಕೆಂಪೇಗೌಡ ಮೆಟ್ರೊ ಎಂದು ಬದಲಾಯಿಸಬೇಕು. ಬಸವಣ್ಣ ಅವರು ಸರ್ವಶ್ರೇಷ್ಠರು. ಅವರ ಭಾವಚಿತ್ರವನ್ನು ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಹಾಕಲಾಗಿದೆ. ಅವರ ಹೆಸರನ್ನು ಬೇರೆ ದೊಡ್ಡ ದೊಡ್ಡ ಯೋಜನೆಗಳಿಗೆ ಇಡಬಹುದು. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದಲ್ಲಿ ಕೈಗೊಳ್ಳುವ ಯೋಜನೆಗಳಿಗೆ ಕೆಂಪೇಗೌಡ ಅವರ ಹೆಸರನ್ನು ಇಡಲು ಸಾಧ್ಯವಿಲ್ಲ. ಆದ್ದರಿಂದ ಬೆಂಗಳೂರಿನ ನಮ್ಮ ಮೆಟ್ರೊಗೆ ನಾಡಪ್ರಭು ಕೆಂಪೇಗೌಡ ಅವರ ಹೆಸರನ್ನು ಇಡಬೇಕು. ಇದು ನಮ್ಮ ಹಲವು ವರ್ಷಗಳ ಬೇಡಿಕೆಯಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಬೇಕು’ ಎಂದು ಒತ್ತಾಯಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ, ‘ಎಚ್. ಕಾಂತರಾಜ ನೇತೃತ್ವದಲ್ಲಿ ಸಿದ್ಧಪಡಿಸಲಾಗಿದ್ದ 10 ವರ್ಷಗಳ ಹಿಂದಿನ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಜಾರಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದರು. ವರದಿ ಅನುಷ್ಠಾನದ ವಿರುದ್ಧ ನಾವು ಹೋರಾಡಿ ಜಯಶೀಲರಾದೆವು. ಸಿದ್ದರಾಮಯ್ಯ ಅವರು ಸಮೀಕ್ಷೆ ಆಗಲೇ ಬೇಕು ಎಂದು ಹಟ ಹಿಡಿದು, ಮತ್ತೊಮ್ಮೆ ಸಮೀಕ್ಷೆ ನಡೆಸುತ್ತಿದ್ದಾರೆ. ಸರ್ಕಾರದಿಂದ ಸಿಗುವ ಅವಕಾಶ ತಪ್ಪಿಹೋಗುವ ಸಾಧ್ಯತೆ ಇರುವುದರಿಂದ, ಜಾತಿ ಕಾಲಂನಲ್ಲಿ ಒಕ್ಕಲಿಗ ಎಂದೇ ನಮೂದಿಸಬೇಕು’ ಎಂದರು.

‘ಒಕ್ಕಲಿಗರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು. ಸಮುದಾಯದ ವಿಷಯ ಬಂದಾಗ ನಾವೆಲ್ಲ ಒಂದಾಗಬೇಕು. ಶೀಘ್ರದಲ್ಲಿಯೇ ಸಂಘದ ಸರ್ವಸದಸ್ಯರ ಸಭೆಯನ್ನೂ ನಡೆಸಲಾಗುತ್ತದೆ’ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ 95ಕ್ಕಿಂತ ಅಧಿಕ ಅಂಕ ಪಡೆದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ (ರಾಮನಗರ) ಒಕ್ಕಲಿಗ ಸಮುದಾಯದ 705 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಇದೇ ವೇಳೆ ಸಮುದಾಯದ ಸಾಧಕರಾದ ನಟ ಶ್ರೀನಗರ ಕಿಟ್ಟಿ, ಎಂಜಿನಿಯರ್ ರಿತುಪರ್ಣ ಕೆ.ಎಸ್., ರೈತ ಸಿ. ಪುಟ್ಟಸ್ವಾಮಿ, ಯೋಧ ಬಿ.ಎಸ್. ಭೀಮೇಗೌಡ ಹಾಗೂ ನಿವೃತ್ತ ಪ್ರಾಧ್ಯಾಪಕ ಮಾಗಡಿ ಆರ್. ಗುರುದೇವ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ರಾಜ್ಯ ಒಕ್ಕಲಿಗರ ಸಂಘದ ಆಂತರಿಕ ಲೆಕ್ಕಪರಿಶೋಧಕ ಸಿ.ಎಂ. ಮಾರೇಗೌಡ, ನಿರ್ದೇಶಕ ಆರ್. ಪ್ರಕಾಶ್, ರಿತುಪರ್ಣ ಕೆ.ಎಸ್., ಕೃಷ್ಣಪ್ಪ ರಂಗಮ್ಮ ಎಜುಕೇಷನ್ ಟ್ರಸ್ಟ್‌ನ ನಿರ್ದೇಶಕಿ ಅಶ್ವಿನಿ ನಾಗೇಂದ್ರ, ಸಂಘದ ಗೌರವಾಧ್ಯಕ್ಷ ಡಿ. ಹನುಮಂತಯ್ಯ, ನಂಜಾವಧೂತ ಸ್ವಾಮೀಜಿ, ಬಿ. ಕೆಂಚಪ್ಪಗೌಡ, ಡಾ.ಟಿ.ಎಚ್. ಆಂಜಿನಪ್ಪ, ಸಿ. ದೇವರಾಜು, ಡಿ.ಕೆ. ರಮೇಶ್, ಸಿ. ಪುಟ್ಟಸ್ವಾಮಿ ಮತ್ತು ಎಂ. ಪುಟ್ಟಸ್ವಾಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಎಚ್‌ಡಿಡಿ ಹೆಸರಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಿ’

‘ಒಕ್ಕಲಿಗರ ಸಂಘವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ₹ 700 ಕೋಟಿ ನಿಧಿ ಹೊಂದಿದೆ. ಈ ಹಣದಲ್ಲಿ ಸಂಘವು ಜಮೀನು ಖರೀದಿಸಿ, ಇನ್ನೊಂದು ವೈದ್ಯಕೀಯ ಕಾಲೇಜನ್ನು ನಿರ್ಮಿಸಬೇಕು. ಆ ಕಾಲೇಜಿಗೆ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೆಸರನ್ನು ಇಡಬೇಕು. ಅವರ ಹೆಸರಿಡುವುದಕ್ಕೆ ಸಮುದಾಯ ಕೂಡ ಒಪ್ಪಲಿದೆ. ಎಂಜಿನಿಯರಿಂಗ್ ಕಾಲೇಜು ಕೂಡ ಸ್ಥಾಪಿಸಿ, ಸಮುದಾಯದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸೀಟು ಒದಗಿಸಬೇಕು’ ಎಂದು ಸಂಘದ ಪದಾಧಿಕಾರಿಗಳಿಗೆ ಆಗ್ರಹಿಸಿದ ನಂಜಾವಧೂತ ಸ್ವಾಮೀಜಿ, ಇದಕ್ಕೆ ಸಮ್ಮತಿ ಇದ್ದವರು ಕೈ ಎತ್ತುವಂತೆ ಸೂಚಿಸಿದರು. ಅಧ್ಯಕ್ಷ ಕೆಂಚಪ್ಪಗೌಡ ಸೇರಿ ವೇದಿಕೆ ಮೇಲಿದ್ದ ಪದಾಧಿಕಾರಿಗಳು ಕೈ ಎತ್ತಿದರು.

ಯುವಜನರು ಯಂತ್ರಮಾನವರಾಗದೆ ಭಾವನೆಗಳಿಗೆ ಬೆಲೆ ಕೊಡಬೇಕು. ಹಣದ ಹಿಂದೆ ಹೋಗಿ ಹೆತ್ತವರನ್ನು ಮರೆಯಬಾರದು. ಸಮಾಜಕ್ಕೆ ಆಸ್ತಿಯಾಗಿ ಜಗತ್ತಿಗೆ ಕೊಡುಗೆ ನೀಡಬೇಕು

ನಂಜಾವಧೂತ ಸ್ವಾಮೀಜಿ, ಸ್ಫಟಿಕಪುರಿ ಮಠ

ಶೈಕ್ಷಣಿಕ, ಆಡಳಿತ ಸೇರಿ ವಿವಿಧ ಕ್ಷೇತ್ರಗಳಲ್ಲಿ ಒಕ್ಕಲಿಗ ಸಮುದಾಯದವರು ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಿಂದೆ ಉಳಿದಿದ್ದು, ಈ ಕ್ಷೇತ್ರದಲ್ಲಿಯೂ ಮುಂದೆ ಬರಬೇಕು

ಜಯಪ್ರಕಾಶ್ ಗೌಡ, ನಿವೃತ್ತ ಪ್ರಾಧ್ಯಾಪಕ

ಅಭ್ಯರ್ಥಿಗಳ ಆಯ್ಕೆಗೆ ಸಮಿತಿ ರಚಿಸಿದ ಬಿಜೆಪಿ

ಪರಿಷತ್, ಜಿಬಿಎ ಚುನಾವಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ವಿಧಾನ ಪರಿಷತ್‌ನಲ್ಲಿ ಈಗ ತೆರವಾಗಿರುವ ಮತ್ತು ಮುಂದಿನ ವರ್ಷ ತೆರವಾಗಲಿರುವ ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮತ್ತು ಚುನಾವಣಾ ತಯಾರಿ ನಡೆಸಲು ಬಿಜೆಪಿ ಸಮಿತಿಯನ್ನು ರಚಿಸಿದೆ.

ನಗರದಲ್ಲಿ ಭಾನುವಾರ ನಡೆದ ಬಿಜೆಪಿ ಕೇಂದ್ರ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆರ್.ಅಶೋಕ, ಗೋವಿಂದ ಕಾರಜೋಳ, ಶ್ರೀರಾಮುಲು, ಸಿ.ಟಿ.ರವಿ ಅವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರು ಎಲ್ಲ ಕ್ಷೇತ್ರಗಳಿಗೆ ಭೇಟಿ ನೀಡಿ, ಅಭಿಪ್ರಾಯ ಸಂಗ್ರಹಿಸಲಿದೆ. ಜಿಬಿಎ ಚುನಾವಣೆಗೆ ತಂತ್ರ ರೂಪಿಸುವ ಕೆಲಸವನ್ನೂ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದ ಬಿಜೆಪಿ ನಿಯೋಗದ ವರದಿ ಸಿದ್ಧವಾಗಿದೆ. ರಾಜ್ಯ ಸರ್ಕಾರವು ಯಾವ ಕ್ರಮ ತೆಗೆದುಕೊಳ್ಳಲಿದೆ ಎಂಬುದನ್ನು ಆಧರಿಸಿ, ಈ ಸಂಬಂಧ ಹೋರಾಟ ರೂಪಿಸಲು ಕೇಂದ್ರ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿವೆ.

ಭಿನ್ನಮತ ಶಮನಕ್ಕೆ ಯತ್ನ

ಬಿಜೆಪಿಯ ದಾವಣಗೆರೆ ಮುಖಂಡರಾದ ಜಿ.ಎಂ.ಸಿದ್ದೇಶ್ವರ ಮತ್ತು ಎಂ.ಪಿ.ರೇಣುಕಾಚಾರ್ಯ ಅವರ ಬಣದವರ ಜತೆ ಸಭೆ ನಡೆಸಿದ ಪಕ್ಷದ ನಾಯಕರು, ಮಾಧ್ಯಮಗಳಿಗೆ ಹೇಳಿಕೆ ನೀಡಬಾರದು ಎಂದು ತಾಕೀತು ಮಾಡಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮತ್ತು ರಾಜ್ಯ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್ ಅವರು ನಗರದಲ್ಲಿ ಭಾನುವಾರ ಸಂಜೆ ಎರಡೂ ಬಣದ ತಲಾ ಆರು ಮಂದಿಯ ಜತೆಗೆ ಪ್ರತ್ಯೇಕ ಸಭೆ ನಡೆಸಿದರು.

‘ಮೊದಲಿಗೆ ಜಿ.ಎಂ.ಸಿದ್ದೇಶ್ವರ ಅವರ ಬಣದವರ ಜತೆಗೆ ಸಭೆ ನಡೆಸಲಾಯಿತು. ಎಂ.ಪಿ. ರೇಣುಕಾಚಾರ್ಯ ಅವರು ಕಾಂಗ್ರೆಸ್‌ನವರೊಟ್ಟಿಗೆ ಒಪ್ಪಂದ ಮಾಡಿಕೊಂಡು, ತಮ್ಮ ಪತ್ನಿ ಚುನಾವಣೆಯಲ್ಲಿ ಸೋಲಲು ಕಾರಣರಾದರು ಎಂದು ಸಿದ್ದೇಶ್ವರ ಅವರು ದೂರಿದರು. ಇದಕ್ಕಾಗಿ ಅವರು ಕ್ಷಮೆಯಾಚಿಸಬೇಕು. ಜತೆಗೆ ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು’ ಎಂದು ಮೂಲಗಳು ಮಾಹಿತಿ ನೀಡಿವೆ.

‘ರೇಣುಕಾಚಾರ್ಯ ಅವರ ಬಣದ ಸದಸ್ಯರೊಂದಿಗೆ ನಂತರ ಸಭೆ ನಡೆಸಲಾಯಿತು. ಸಿದ್ದೇಶ್ವರ ಅವರ ಆರೋಪದ ಬಗ್ಗೆ ವಿವರಣೆ ಕೇಳಲಾಯಿತು. ರೇಣುಕಾಚಾರ್ಯ ಅವರೂ ಸಿದ್ದೇಶ್ವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು’ ಎಂದು ತಿಳಿಸಿವೆ.

‘ಸಭೆಯಲ್ಲಿ ಏನಾಯಿತು ಎಂಬುದರ ಬಗ್ಗೆ ಹೊರಗೆ ಮಾತನಾಡಬಾರದು ಮತ್ತು ಮಾಧ್ಯಮಗಳಿಗೆ ಹೇಳಿಕೆ ನೀಡಬಾರದು ಎಂದು ಎರಡೂ ಬಣಗಳಿಗೆ ತಾಕೀತು ಮಾಡಲಾಗಿದೆ’ ಎಂದು ತಿಳಿಸಿವೆ.

ನಗರದಲ್ಲಿ ಇಂದು

ರೆ.ಫರ್ಡಿನಾಂಡ್ ಕಿಟೆಲ್ ಅವರ ಜೀವನ ಮತ್ತು ಸಾಧನೆ ಕುರಿತು ಸಾಕ್ಷ್ಯಚಿತ್ರ, ಸಂವಾದ: ಸಂಪನ್ಮೂಲ ವ್ಯಕ್ತಿ: ಪ್ರಶಾಂತ್ ಪಂಡಿತ್, ಅಧ್ಯಕ್ಷತೆ: ಟೈಟಸ್ ಆಂಟೊ, ಉಪಸ್ಥಿತಿ: ಆರ್. ಎನ್. ಸುಬ್ಬರಾವ್, ಆಯೋಜನೆ ಮತ್ತು ಸ್ಥಳ: ಸೇಂಟ್ ಫ್ರಾನ್ಸಿಸ್ ಕಾಲೇಜು, ಮಧ್ಯಾಹ್ನ 1.30



ಕಿಟೆಲ್

‘ಮಹಾಭಾರತದ ಸಭಾಪರ್ವ’ ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

ಪ್ರವಚನ ವಾಹಿನಿ: ‘ಆಶ್ವಯುಜ ಮಾಸದ ವೈಭವ’ ಉಪನ್ಯಾಸ: ರಾಮಾಚಾರ್ ಕಟ್ಟಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಶ್ರೀಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ಸಚಿವರಿಗೆ ಮುಖ್ಯಮಂತ್ರಿ ಔತಣಕೂಟ ಇಂದು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ಸೋಮವಾರ ರಾತ್ರಿ ಔತಣಕೂಟ ಆಯೋಜಿಸಿರುವುದು ತೀವ್ರ ಕುತೂಹಲ ಮೂಡಿಸಿದೆ.

ಸಿದ್ದರಾಮಯ್ಯ ಅವರ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಈ ಔತಣಕೂಟ ಆಯೋಜಿಸಲಾಗಿದೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ನವೆಂಬರ್‌ಗೆ ಎರಡೂವರೆ ವರ್ಷ ತುಂಬುಲಿದ್ದು,, ನಾಯಕತ್ವ ಬದಲಾವಣೆ, ಸಂಪುಟ ಪುನರ್ ರಚನೆಯ ಮಾತು ಜೋರಾಗಿದೆ. ಈ ನಡುವೆ ಮುಖ್ಯಮಂತ್ರಿ ಔತಣ ಕೂಟ ಆಯೋಜಿಸಿರುವುದು ನಾನಾ ರಾಜಕೀಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಸೋಮವಾರ ಬೆಳಗ್ಗೆ 9.45ಕ್ಕೆ ಕಿತ್ತೂರು ಉತ್ಸವ ಜ್ಯೋತಿಗೆ ವಿಧಾನಸೌಧ ಮುಂಭಾಗ ಚಾಲನೆ ನೀಡಿ ಬಳಿಕ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಧಾರವಾಡ ಮತ್ತು ಬಾಗಲಕೋಟೆ ಜಿಲ್ಲಾ ಪ್ರವಾಸಕ್ಕೆ ಮುಖ್ಯಮಂತ್ರಿ ತೆರಳಲಿದ್ದಾರೆ. ಸಂಜೆ 5.30ಕ್ಕೆ ನಗರಕ್ಕೆ ವಾಪಸಾಗಲಿರುವ ಅವರು 6 ಗಂಟೆಗೆ ಕಾವೇರಿ ನಿವಾಸದಲ್ಲಿ ಔತಣ ಕೂಟ ಏರ್ಪಡಿಸಿದ್ದಾರೆ. ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಈ ವೇಳೆ ಚರ್ಚೆಯಾಗುವ ಸಾಧ್ಯತೆಯಿದೆ.

ನಗರದಲ್ಲಿ ಭಾನುವಾರ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕಿ ಎಲ್.ವಿ. ಶಾಂತಕುಮಾರಿ ಅವರಿಗೆ ‘ಆದಿಕವಿ ಪುರಸ್ಕಾರ’ ಹಾಗೂ ಲೇಖಕ ಅರಬಗಟ್ಟೆ ಅಣ್ಣಪ್ಪ ಅವರಿಗೆ ‘ವಾಗ್ದೇವಿ ಪುರಸ್ಕಾರ’ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ತಲಾ ₹1 ಲಕ್ಷ ನಗದು ಒಳಗೊಂಡಿವೆ. ಪರಿಷದ್‌ನ ರಾಜ್ಯ ಘಟಕದ ಅಧ್ಯಕ್ಷ ಎಸ್.ಜಿ.ಕೋಟಿ, ಉಪಾಧ್ಯಕ್ಷ ರಮೇಶ್ ಭಟ್ ಬೆಳಗೋಡು, ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್, ಕೆ. ಹರೀಶ್, ವಿ. ರಂಗನಾಥ್, ರಾಮಕೃಷ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಬಿಜೆಪಿ ಮಹಿಳಾ ಮೋರ್ಚಾ ಪತ್ರ

‘ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆಯಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗಿವೆ. ರಾಜ್ಯಕ್ಕೆ ಶೀಘ್ರ ಭೇಟಿ ನೀಡಿ, ಪರಿಶೀಲನೆ ನಡೆಸಿ’ ಎಂದು ರಾಜ್ಯ ಬಿಜೆಪಿ ಘಟಕದ ಮಹಿಳಾ ಮೋರ್ಚಾವು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಮಹಿಳಾ ಮೋರ್ಚಾದ ಅಧ್ಯಕ್ಷೆ ಸಿ.ಮಂಜುಳಾ ನೇತೃತ್ವದ ನಿಯೋಗವು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯ ಕಿಶೋರ್ ರಾಹತ್ಕರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದೆ. ವರ್ಷದ ಅವಧಿಯಲ್ಲಿ ರಾಜ್ಯದಾದ್ಯಂತ ಮಹಿಳೆಯರ ವಿರುದ್ಧ ನಡೆದಿರುವ ವಿವಿಧ 18 ಅಪರಾಧ ಕೃತ್ಯಗಳನ್ನು ಪಟ್ಟಿ ಮಾಡಿ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದಿದೆ.

‘ಬೆಂಗಳೂರು ನಗರದಲ್ಲಿ ಈಚೆಗೆ ಹಿಂದೂ ಯುವತಿಯ ಶವವು ಕಸ ಬಿಸಾಡುವ ಜಾಗದಲ್ಲಿ ಪತ್ತೆಯಾಗಿದೆ. ಈ ಬಗ್ಗೆ ಪ್ರಶ್ನಿಸಿದಾಗ ಗೃಹ ಸಚಿವರು, ಇಂಥದ್ದೆಲ್ಲಾ ಮಾಮೂಲು ಎಂದಿದ್ದಾರೆ. ಮಹಿಳೆಯರ ಬಗ್ಗೆ ಈ ಸರ್ಕಾರಕ್ಕೆ ಇರುವ ಕಾಳಜಿ ಎಂಥದ್ದು ಎಂಬುದನ್ನು ಗೃಹಸಚಿವರ ಮಾತೇ ಸಾಬೀತು ಮಾಡುತ್ತದೆ’ ಎಂದು ದೂರಿದ್ದಾರೆ.

‘ಮೈಸೂರಿನಲ್ಲಿ ಬಲೂನು ಮಾರುತ್ತಿದ್ದ ಬಾಲಕಿಯ ಅತ್ಯಾಚಾರ ಮತ್ತು ಕೊಲೆ, ಹಾವೇರಿಯಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ, ಹುಬ್ಬಳ್ಳಿಯಲ್ಲಿ ನೇಹಾ ಹಿರೇಮಠ ಕೊಲೆ ಪ್ರಕರಣಗಳು ರಾಜ್ಯ ಸರ್ಕಾರಕ್ಕೆ ಆಡಳಿತದ ಮೇಲೆ ಹಿಡಿತವೇ ಇಲ್ಲ ಎಂಬುದನ್ನು ತೋರಿಸುತ್ತದೆ’ ಎಂದಿದ್ದಾರೆ.

‘ಶಕ್ತಿ ಯೋಜನೆ ವಿಫಲ’

‘ರಾಜ್ಯ ಸರ್ಕಾರವು ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ‘ಶಕ್ತಿ’ ಯೋಜನೆಯನ್ನು ಘೋಷಿಸಿದೆ. ಆದರೆ ಓಡಾಟಕ್ಕೆ ತುಕ್ಕುಹಿಡಿದ, ಸುಸ್ಥಿತಿಯಲ್ಲಿ ಇರದ ಬಸ್‌ಗಳನ್ನು ನೀಡಿದೆ. ಹೀಗಾಗಿ ಈ ಯೋಜನೆ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಬಿಜೆಪಿ ಮಹಿಳಾ ಮೋರ್ಚಾವು ಮನವಿಯಲ್ಲಿ ಟೀಕಿಸಿದೆ. ‘ಮೊದಲು ಸಂಚರಿಸುತ್ತಿದ್ದ ಬಸ್‌ಗಳಿಗಿಂತ ಕಡಿಮೆ ಸಂಖ್ಯೆಯ ಬಸ್‌ಗಳನ್ನು ಕಾರ್ಯಾಚರಣೆಗೆ ಬಿಡಲಾಗಿದೆ. ಕೆಟ್ಟ ಸ್ಥಿತಿಯಲ್ಲಿರುವ ಬಸ್‌ಗಳ ಕಾರಣಕ್ಕೆ ಅಪಘಾತವಾಗಿ, ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ’ ಎಂದು ಆರೋಪಿಸಿದೆ.

‘ಲಾಲ್‌ಬಾಗ್ ಜಾಗ ಕಸಿಯಲು ಬಿಡಲ್ಲ’

ಉದ್ಯಾನಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಂಸದ ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸುರಂಗ ಮಾರ್ಗಕ್ಕಾಗಿ ಒಂದೂವರೆ ಎಕರೆ ಜಾಗಕ್ಕೆ ಪ್ರಸ್ತಾವ
- ಲಾಲ್‌ಬಾಗ್ ಜಾಗವನ್ನು ನಿರ್ನಾಮ ಮಾಡುವ ಯತ್ನ: ತೇಜಸ್ವಿ ಆರೋಪ
- ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ವಿರೋಧ

ಬೆಂಗಳೂರು: ‘ವಿನಾಶಕಾರಿ ಸುರಂಗ ಮಾರ್ಗಕ್ಕೆ ಲಾಲ್‌ಬಾಗ್‌ನಲ್ಲಿ ಆರು ಎಕರೆಯಲ್ಲ, ಆರು ಇಂಚು ಭೂಮಿಯನ್ನೂ ಕಸಿದುಕೊಳ್ಳಲು ಬಿಡುವುದಿಲ್ಲ’ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಸುರಂಗ ಮಾರ್ಗಕ್ಕೆ ಭೂಸ್ವಾಧೀನಕ್ಕಾಗಿ ಪ್ರಸ್ತಾಪಿಸಲಾದ 1.5 ಎಕರೆ ಜಾಗವನ್ನು ಲಾಲ್‌ಬಾಗ್‌ನಲ್ಲಿ ಭಾನುವಾರ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

‘ರಾಜ್ಯ ಸರ್ಕಾರವು ಈ ಯೋಜನೆಗೆ ಸುಮಾರು ಆರು ಎಕರೆಗಳಷ್ಟು ಪರಿಸರ–ಪಾರಂಪರಿಕ ಜಾಗವನ್ನು ಕಬಳಿಸಲು ಯೋಜಿಸಿದೆ. ಬೆಂಗಳೂರಿನ ಹಸಿರು ಶ್ವಾಸಕೋಶದಂತಿರುವ ಲಾಲ್‌ಬಾಗ್ ಪ್ರದೇಶವನ್ನು ಶಾಶ್ವತವಾಗಿ ನಿರ್ನಾಮ ಮಾಡುವ ಕೃತ್ಯವಿದು’ ಎಂದು ಆರೋಪಿಸಿದರು.

‘ಇದಕ್ಕಿಂತಲೂ ಹೆಚ್ಚು ಆತಂಕಕಾರಿಯೆಂದರೆ, ಪ್ರಸ್ತಾವಿತ ಸುರಂಗವು 300 ಕೋಟಿ ವರ್ಷಗಳಷ್ಟು ಹಳೆಯದಾದ ಪೆನಿನ್ಸುಲರ್ ಗ್ನೈಸ್ ಬಂಡೆಯ ಕೆಳಗೆ ನೇರವಾಗಿ ಹಾದುಹೋಗುತ್ತದೆ. ಇದು ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕವಾಗಿದ್ದು, ಈ ಪ್ರಾಚೀನ ರಚನೆಯ ಮೂಲಕ ಕೊರೆಯುವುದು ಅಪಾಯಕಾರಿಯಾದುದು’ ಎಂದು ಆತಂಕ ವ್ಯಕ್ತಪಡಿಸಿದರು.

‘ವಿಸ್ತೃತ ಯೋಜನಾ ವರದಿ (ಡಿಪಿಆರ್) ಮತ್ತು ಕಾರ್ಯಸಾಧ್ಯತಾ ಅಧ್ಯಯನವು ಕಾಪಿ–ಪೇಸ್ಟ್ ಕೆಲಸದಂತೆ ಕಾಣುತ್ತಿದೆ. ಪರಿಸರದ ಮೇಲಾಗುವ ಪರಿಣಾಮದ ಮೌಲ್ಯಮಾಪನ ನಡೆಸಿಲ್ಲ. ಇದು ಕಳಪೆ, ಅವೈಜ್ಞಾನಿಕ’ ಎಂದರು.

ಲಾಲ್‌ಬಾಗ್‌ನಲ್ಲಿ ಸಾಗುವ ಸುರಂಗ ರಸ್ತೆಯ ನೀಲನಕ್ಷೆಯ ವಿವರಗಳನ್ನು ತೇಜಸ್ವಿ ಸೂರ್ಯ ಅವರಿಗೆ ಅಧಿಕಾರಿಗಳು ನೀಡಿದರು

‘ಸುರಂಗ ಇರುವ ಸ್ಥಳದಲ್ಲಿ ಲಾಲ್‌ಬಾಗ್‌ನೊಳಗೆ ವಾಣಿಜ್ಯ ಸಂಕೀರ್ಣ ನಿರ್ಮಾಣದ ಬಗ್ಗೆ ಡಿಪಿಆರ್‌ನಲ್ಲಿ ಪ್ರಸ್ತಾಪಿಸಿದೆ. ಬೆಂಗಳೂರಿನ ಅತ್ಯಂತ ಹಳೆಯ ಸಸ್ಯೋದ್ಯಾನದೊಳಗೆ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು ಹುಚ್ಚುತನ’ ಎಂದು ಟೀಕಿಸಿದರು.

‘ಉತ್ತರಾಖಂಡದ ಸಿಲ್ಕ್ಯಾರಾ ಸುರಂಗದ ದುರಂತವನ್ನು ಕಂಡಿದ್ದೇವೆ. ಯಾವುದೇ ಜವಾಬ್ದಾರಿಯುತ ಸರ್ಕಾರವು ಸಮಗ್ರವಾಗಿ ಸುರಕ್ಷತಾ ಪರಿಶೀಲನೆ ನಡೆಸಬೇಕು. ಆದರೆ, ಈ ಸುರಂಗದ ಜೋಡಣೆ ಮತ್ತು ಭೂವೈಜ್ಞಾನಿಕ ದತ್ತಾಂಶವನ್ನು ತೋರಿಸಲು ಜಿಬಿಎ ಅಧಿಕಾರಿಗಳನ್ನು ಕೇಳಿದಾಗ ಅವರು ಪಲಾಯನ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ಲಾಲ್‌ಬಾಗ್‌ನ ಭೂವಿಜ್ಞಾನ ಮತ್ತು ಭೂಕಂಪನ ಶಾಸ್ತ್ರದ ಮೇಲಿನ ಸಂಭಾವ್ಯ ಪರಿಣಾಮಗಳ ಕುರಿತು ಸ್ವತಂತ್ರ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸುವಂತೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಗೆ ನಿರ್ದೇಶನ ನೀಡಿದ್ದೇನೆ’ ಎಂದು ತಿಳಿಸಿದರು.

ರಾಘವೇಂದ್ರ ಮಯ್ಯಗೆ ‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ

‘ಯಕ್ಷಗಾನದ ಮೂಲವೇ ಭಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಯಕ್ಷಗಾನ ಭಾಗವತ ರಾಘವೇಂದ್ರ ಮಯ್ಯ ಹಾಲಾಡಿ ಅವರಿಗೆ ‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿ ಪ್ರದಾನ ಮಾಡಿದ ಶಿಕ್ಷಣ ತಜ್ಞ ಪ್ರೊ.ಕೆ.ಈ. ರಾಧಾಕೃಷ್ಣ, ‘ಯಕ್ಷಗಾನದ ಮೂಲವೇ ಭಕ್ತಿಯಾಗಿದ್ದು, ಇದು ಭಕ್ತಿಯನ್ನು ಪಸರಿಸಲಿದೆ. ಈ ಕಲೆಯು ವಿಮರ್ಶೆಗೆ ತನ್ನನ್ನು ತಾನು ಒಡ್ಡಿಕೊಂಡು, ಭಾಷೆ, ಸಾಹಿತ್ಯ ಮತ್ತು ಮೌಲ್ಯವನ್ನು ಬಿಂಬಿಸಲಿದೆ. ಇದು ಪರಿಪೂರ್ಣ ಕಲೆಯಾಗಿದೆ. ಯಕ್ಷಗಾನಕ್ಕೆ ತಾರಾ ಮೆರುಗು ನೀಡಿದವರು ಕಾಳಿಂಗ ನಾವಡರು. ಅವರು ಯಕ್ಷಗಾನ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಯಕ್ಷಗಾನ ಕ್ಷೇತ್ರಕ್ಕೆ ಅವರ ಕೊಡುಗೆ ಬಹುದೊಡ್ಡದು’ ಎಂದು ಹೇಳಿದರು.

‘ಯಕ್ಷಗಾನ ಕ್ಷೇತ್ರದಲ್ಲಿ ಹಲವು ಸಾಧಕರಿದ್ದಾರೆ. ಅವರನ್ನು ಗುರುತಿಸಿ ಗೌರವಿಸುವ ಕೆಲಸ ಹೆಚ್ಚಬೇಕು. ಈ ವಿಚಾರದಲ್ಲಿ ಕಲಾ ಕದಂಬ ಆರ್ಟ್ ಸೆಂಟರ್ ಕಾರ್ಯ ಶ್ಲಾಘನೀಯ. ಯಕ್ಷಗಾನ ಕ್ಷೇತ್ರಕ್ಕೆ ಇನ್ನಷ್ಟು ಪ್ರೋತ್ಸಾಹ ಸಿಗಲಿ’ ಎಂದು ಆಶಿಸಿದರು.

ಕಾಳಿಂಗ ನಾವಡ ಅವರ ಹೆಸರಿನ ಪ್ರಶಸ್ತಿ ದೊರೆತಿರುವುದಕ್ಕೆ ರಾಘವೇಂದ್ರ ಮಯ್ಯ ಹಾಲಾಡಿ ಸಂತಸ ವ್ಯಕ್ತಪಡಿಸಿದರು. ಕಾಳಿಂಗ ನಾವಡರ ಸಹೋದರ ಗಣಪಯ್ಯ ನಾವಡ, ಯುವ ವಿಪ್ರ ವೇದಿಕೆ ಸಂಸ್ಥಾಪನಾಧ್ಯಕ್ಷ ಕೃಷ್ಣಮೂರ್ತಿ ಅಡಿಗ, ಶಿವಳ್ಳಿ ಸ್ಮಾರ್ಥ ಟ್ರಸ್ಟ್ ಅಧ್ಯಕ್ಷ ಪ್ರಕಾಶ್ ಭಟ್, ಚಂಡೆ ವಾದಕ ಶಿವಾನಂದ ಕೋಟ, ಕಲಾ ಕದಂಬ ಆರ್ಟ್ ಸೆಂಟರ್ ನಿರ್ದೇಶಕ ರಾಧಾಕೃಷ್ಣ ಉರಾಳ, ಕಾರ್ಯದರ್ಶಿ ಮುರಳೀಧರ ನಾವಡ, ಖಜಾಂಚಿ ವಿಶ್ವನಾಥ್ ಉರಾಳ ಉಪಸ್ಥಿತರಿದ್ದರು.

ಈ ಸಮಾರಂಭದ ಬಳಿಕ ‘ಅಂಧಕ ಮೋಕ್ಷ’ ಯಕ್ಷಗಾನ ಪ್ರದರ್ಶನ ಕಂಡಿತು. ಹಿಮ್ಮೇಳದಲ್ಲಿ ಸುಬ್ರಾಯ ಹೆಬ್ಬಾರ್, ಅಕ್ಷಯ್ ಆಚಾರ್, ಶ್ರೀನಿವಾಸ ಪ್ರಭು ಪಾಲ್ಗೊಂಡಿದ್ದರು. ಮುಮ್ಮೇಳದಲ್ಲಿ ಅಂಬರೀಷ್ ಭಟ್, ಭರತ್ ಕಾರ್ಕಳ, ದಿನೇಶ್ ಕನ್ನಾರ್, ದೇವರಾಜ ಕರಬ, ವಿನಯ್ ಹೊಸ್ತೋಟ, ಶಶಿಕಾಂತ್ ಆಚಾರ್ಯ ಹಾಲಾಡಿ, ಪೂಜಾ ಆಚಾರ್ಯ, ನಿತ್ಯಾ ಗೌಡ ಹಾಗೂ ವರ್ಣ ಶೆಟ್ಟಿ ಅವರು ರಂಜಿಸಿದರು.

ಸಮಾರಂಭದಲ್ಲಿ ರಾಘವೇಂದ್ರ ಮಯ್ಯ ಹಾಲಾಡಿ ಅವರಿಗೆ ‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ವಿಶ್ವನಾಥ್ ಉರಾಳ, ಗಣಪಯ್ಯ ನಾವಡ, ಕೃಷ್ಣಮೂರ್ತಿ ಅಡಿಗ, ಪ್ರಕಾಶ್ ಭಟ್, ಕೆ.ಈ. ರಾಧಾಕೃಷ್ಣ, ರಾಧಾಕೃಷ್ಣ ಉರಾಳ, ಶಿವಾನಂದ ಕೋಟ ಮತ್ತು ಮುರಳೀಧರ ನಾವಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಯಕ್ಷಗಾನಕ್ಕೆ ತಾರಾ ಮೆರುಗು ನೀಡಿದವರು ಕಾಳಿಂಗ ನಾವಡ
- ಭಾಷೆ, ಸಾಹಿತ್ಯ, ಮೌಲ್ಯ ಬಿಂಬಿಸುವ ಯಕ್ಷಗಾನ

ನಿಮ್ಹಾನ್ಸ್: ಮಾನಸಿಕ ಆರೋಗ್ಯ ಸಂತೆ 17, 18ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 17 ಮತ್ತು 18ರಂದು ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ‘ಮಾನಸಿಕ ಆರೋಗ್ಯ ಸಂತೆ’ ಹಮ್ಮಿಕೊಂಡಿದೆ.

ಬೆಳಿಗ್ಗೆ 10ರಿಂದ ನಡೆಯುವ ನಾಲ್ಕನೇ ಆವೃತ್ತಿಯ ಈ ಸಂತೆಗೆ ಉಚಿತ ಪ್ರವೇಶ ಇರಲಿದೆ. ಮಾನಸಿಕ ಅನಾರೋಗ್ಯ ಸಮಸ್ಯೆಗಳ ಬಗೆಗಿನ ಕಳಂಕ ಹೋಗಲಾಡಿಸಿ, ರೋಗದ ಬಗ್ಗೆ ಅರಿವು ಮೂಡಿಸುವುದು ಸಂತೆಯ ಉದ್ದೇಶವಾಗಿದೆ.

‘ಮಾನಸಿಕ ಆರೋಗ್ಯದ ಬಗೆಗಿನ ತಿಳಿವಳಿಕೆಯ ಕೊರತೆ ನಿವಾರಿಸಿ, ಸಮಸ್ಯೆಗಳನ್ನು ಗುರುತಿಸುವುದು ಹಾಗೂ ಚಿಕಿತ್ಸೆ ಕುರಿತು ಅರಿವು ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಸಂತೆ ಸಹಕಾರಿ ಆಗಲಿದೆ’ ಎಂದು ಸಂಸ್ಥೆ ಪ್ರಕಟಣೆಯಲ್ಲಿ ಹೇಳಿದೆ.

ನೋಂದಣಿ ಮತ್ತು ವಿವರಕ್ಕೆ: 080 2699 5156

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ರಸ್ತೆ ಗುಂಡಿ ಮುಚ್ಚಿ’



ಪರಪ್ಪನ ಅಗ್ರಹಾರ ಜೈಲಿಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಮಯವಾಗಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಈ ರಸ್ತೆಯಲ್ಲಿ 20ಕ್ಕೂ ಹೆಚ್ಚು ಬೃಹತ್ ಗುಂಡಿಗಳು ಬಿದ್ದಿವೆ. ಇದರಲ್ಲಿ ದ್ವಿಚಕ್ರ ವಾಹನ ಸವಾರರು ಕೈ ಕಾಲುಗಳನ್ನು ಮುರಿದುಕೊಂಡಿರುವ ಘಟನೆಗಳು ನಡೆದಿವೆ. ಈ ಬಗ್ಗೆ ಪಾಲಿಕೆಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಈ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಪರಪ್ಪನ ಅಗ್ರಹಾರದ ನಿವಾಸಿಗಳು

‘ಕಸ ಸಂಗ್ರಹಿಸುವ ಕೇಂದ್ರವಾದ ಉದ್ಯಾನ’

ವಸಂತನಗರದ ಒಂದನೇ ಮುಖ್ಯರಸ್ತೆಯಲ್ಲಿ ಇರುವ ಉದ್ಯಾನವು ಕಸ ಸಂಗ್ರಹಿಸುವ ಕೇಂದ್ರವಾಗಿ ಮಾರ್ಪಟ್ಟಿದೆ. ಪಾಲಿಕೆಯ ಅಧಿಕಾರಿಗಳು ಈ ಉದ್ಯಾನವನ್ನು ನಿರ್ವಹಣೆ ಮಾಡುತ್ತಿಲ್ಲ. ಆದ್ದರಿಂದ ಅನಗತ್ಯ ವಸ್ತುಗಳಿಂದ ತುಂಬಿಕೊಂಡಿದೆ. ಇದರಲ್ಲಿ ಫ್ಲೆಕ್ಸ್, ಕಟ್ಟಡ ತ್ಯಾಜ್ಯವನ್ನು ತಂದು ಸುರಿಯಲಾಗಿದೆ. ಉದ್ಯಾನವು ಈಗ ಅನೈತಿಕ ಚಟುವಟಿಕೆಗಳು ನಡೆಯುವ ತಾಣವಾಗಿಯೂ ಮಾರ್ಪಟ್ಟಿದೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಇಲ್ಲಿ ಹಾಕಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಿ, ಉದ್ಯಾನದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಬಿ.ಎಸ್. ಮನೋಹರ್, ವಸಂತನಗರ

‘ಅಗೆದಿರುವ ರಸ್ತೆ ದುರಸ್ತಿಗೊಳಿಸಿ’

ನಗರದ ಇತಿಹಾಸ ಪ್ರಸಿದ್ಧ ಹಲಸೂರಿನ ಸೋಮೇಶ್ವರ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ದೇವಸ್ಥಾನಕ್ಕೆ ತೆರಳುವ ಭಕ್ತರಿಗೆ ತೊಂದರೆ ಆಗಿದೆ. ರಸ್ತೆ ಅಭಿವೃದ್ಧಿ ಮಾಡುವ ನೆಪದಲ್ಲಿ ಮಳೆಗಾಲದಲ್ಲಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಕಾಮಗಾರಿಯೂ ನಿಧಾನ ಗತಿಯಲ್ಲಿ ನಡೆಯುತ್ತಿದೆ. ಮಳೆಯಾದರೆ ರಸ್ತೆ ಕೆಸರು ಗದ್ದೆ ಆಗುತ್ತದೆ. ದೇವಸ್ಥಾನಕ್ಕೆ ಬರುವ ಭಕ್ತರು ಈ ರಸ್ತೆಯಲ್ಲಿ ಬಿದ್ದಿರುವ ಘಟನೆಗಳು ನಡೆದಿವೆ. ಆದ್ದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು.

ಪಿ. ಎನ್. ಎಂ ಗುಪ್ತ, ಹಲಸೂರು

‘ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹ’

ವೈಟ್‌ಫೀಲ್ಡ್‌ನ ಪ್ರಶಾಂತ್ ಲೇಔಟ್‌ನ ಐದನೇ ಕ್ರಾಸ್‌ನ ಉಪಕಾರ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಈ ರಸ್ತೆಯಲ್ಲಿ ವಾಹನ ಸಂಚಾರವೇ ದುಸ್ತರವಾಗಿದೆ. ಇಂತಹ ರಸ್ತೆಯಲ್ಲಿ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಓಡಾಡುವುದೇ ಕಷ್ಟವಾಗಿದೆ. ರಸ್ತೆ ಹಾಳಾಗಿರುವ ಕಾರಣ ನಮ್ಮ ಬಡಾವಣೆಗೆ ಆಟೊರಿಕ್ಷಾಗಳು, ಟ್ಯಾಕ್ಸಿಗಳು ಬರುತ್ತಿಲ್ಲ. ರಸ್ತೆ ದುರಸ್ತಿಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಎಂ. ಎಸ್. ಬಸಪ್ಪ, ಸುಜಿತ್ ಕಾಮತ್, ಶ್ರೀಲಕ್ಷ್ಮಿ ಪಿ.ಜಿ., ಕೆ. ನಾಗರಾಜ್, ಎನ್.ಜಿ. ಪ್ರವೀಣ್, ಉಪಕಾರ ಲೇಔಟ್

‘ಪಾದಚಾರಿ ಮಾರ್ಗದ ಸ್ಲ್ಯಾಬ್ ಕುಸಿತ’

ಹೆಬ್ಬಾಳದ ಗುಂಡಪ್ಪ ರೆಡ್ಡಿ ಬಡಾವಣೆಯ ಒಂದನೇ ಕ್ರಾಸ್‌ನ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕುಸಿದು ಹೋಗಿದೆ. ಇದರಿಂದ ಪಾದಚಾರಿಗಳು ಮುಖ್ಯ ರಸ್ತೆಯಲ್ಲಿಯೇ ಓಡಾಡುತ್ತಿದ್ದಾರೆ. ಇದರಿಂದ ಅಪಘಾತಗಳು ಆಗುವ ಸಾಧ್ಯತೆ ಇದೆ. ಎಂಟು ತಿಂಗಳ ಹಿಂದೆಯೇ ಕಾಂಕ್ರೀಟ್ ಸ್ಲ್ಯಾಬ್ ಕುಸಿದಿದ್ದು, ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಜಿ.ಎಸ್. ಮಂಜುನಾಥ, ಹೆಬ್ಬಾಳ

Vittal Mallya

February 8, 1924 - October 13, 1983

A force to reckon with, he was a visionary who inspired many to dream big and realize their full potential.

We honor the memory of our founder, Mr. Vittal Mallya.

UNITED BREWERIES LIMITED

PART OF THE HEINEKEN COMPANY

UB Tower, UB City, #24, Vittal Mallya Road, Bengaluru - 560 001

ಚಿಟಿಕೆ ಸುದ್ದಿ

ಸೆರೆ ಹಿಡಿದಿದ್ದ ಕಾಡುಕೋಣ ಸಾವು

ಕಾಡುಕೋಣ

ಹಾಸನ: ಜಿಲ್ಲೆಯ ಚನ್ನರಾಯಪಟ್ಟಣದ ವಿದ್ಯಾನಗರದಲ್ಲಿ ಸೆರೆಹಿಡಿದಿದ್ದ ಕಾಡುಕೋಣ ಕೆಲ ಸಮಯದ ನಂತರ, ಅರಣ್ಯ ಇಲಾಖೆ ಸುಪರ್ದಿಯಲ್ಲಿ ಇದ್ದಾಗಲೇ ಮೃತಪಟ್ಟಿದೆ.

ಪಟ್ಟಣಕ್ಕೆ ನುಗ್ಗಿದ್ದ ಕಾಡುಕೋಣ, 54 ವರ್ಷದ ಶಾಂತಮ್ಮ ಅವರ ಮೇಲೆ ದಾಳಿ ನಡೆಸಿತ್ತು. ಕಾರು ಮತ್ತು 3 ಬೈಕ್ ಜಖಂಗೊಳಿಸಿತ್ತು.

ಮೈಸೂರಿನಿಂದ ಬಂದಿದ್ದ ಅರಿವಳಿಕೆ ತಜ್ಞರು, ಚುಚ್ಚು ಮದ್ದು ನೀಡಿದ್ದು ಸೆರೆ ಹಿಡಿದ ಬಳಿಕ ಅದನ್ನು ಲಾರಿಗೆ ಹತ್ತಿಸಲಾಗಿತ್ತು.

'ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ವರದಿ ಬಂದ ಬಳಿಕ ಸಾವಿಗೆ ಕಾರಣ ತಿಳಿಯಲಿದೆ' ಎಂದು ಅರಣ್ಯಾಧಿಕಾರಿ ಖಲಂದರ್ ತಿಳಿಸಿದ್ದಾರೆ.

ಶಾಸಕಿ ಕರೆಮ್ಮ ಕಾರು ಅಪಘಾತ: ಹಣೆಗೆ ಪೆಟ್ಟು

ಲಿಂಗಸುಗೂರು (ರಾಯಚೂರು ಜಿಲ್ಲೆ): ದೇವದುರ್ಗದ ಶಾಸಕಿ ಕರೆಮ್ಮ ನಾಯಕ ಅವರಿದ್ದ ಕಾರು, ತಾಲ್ಲೂಕಿನ ಗೋಲಪಲ್ಲಿ ಘಾಟ್ ಬಳಿ ಅಪಘಾತಕ್ಕೀಡಾಗಿದೆ. ಅವರಿಗೆ ಹಣೆಗೆ ಪೆಟ್ಟಾಗಿದೆ. ಅವರು ಮದುವೆ ಸಮಾರಂಭಕ್ಕಾಗಿ ಹುಬ್ಬಳ್ಳಿಗೆ ತೆರಳುತ್ತಿದ್ದರು.

'ಘಾಟ್ ರಸ್ತೆ ಕಿರಿದಾಗಿದ್ದು, ಅಡ್ಡಬಂದ ನಾಯಿ ಉಳಿಸುವ ಯತ್ನದಲ್ಲಿ ಅಪಘಾತವಾಗಿದೆ. ಗಂಭೀರ ಗಾಯವಾಗಿಲ್ಲ. ಆತಂಕ ಪಡುವ ಅಗತ್ಯವಿಲ್ಲ' ಎಂದು ಶಾಸಕಿ ಕರೆಮ್ಮ ನಾಯಕ ಹೇಳಿದರು.

ಅಭ್ಯರ್ಥಿಗಳಿಗೆ ಕೆಇಎ ಶುಲ್ಕದ ಬರೆ

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 708 ಹುದ್ದೆಗಳಿಗೆ ಅರ್ಜಿ ಆಹ್ವಾನ

• ಓಂಕಾರ ಬಿರಾದಾರ

ಕಲಬುರಗಿ: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 708 ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಉದ್ಯೋಗ ಆಕಾಂಕ್ಷಿಗಳಿಗೆ 'ಅಧಿಕ ಶುಲ್ಕ'ದ ಬರೆ ನೀಡಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೃಷಿ ಮಾರಾಟ ಇಲಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಕರ್ನಾಟಕ ಸೋಪ್ ಆ್ಯಂಡ್ ಡಿಟರ್ಜೆಂಟ್ಸ್ ಲಿ., ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿ 8 ಇಲಾಖೆಗಳ ಎಫ್‌ಡಿಎ, ಎಸ್‌ಡಿಎ, ಕಿರಿಯ ಸಹಾಯಕ, ಸಹಾಯಕ ಲೆಕ್ಕಿಗ, ನಿರ್ವಾಹಕ, ಗ್ರಂಥಪಾಲಕ ಸೇರಿ ಹಲವು ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳು ಒಂದು ಅರ್ಜಿ ಸಲ್ಲಿಸಲು ₹750 ಪಾವತಿಸಬೇಕಿದೆ. ಹೆಚ್ಚುವರಿಯಾಗಿ ಅಭ್ಯರ್ಥಿಗಳು ಎಷ್ಟು ಅರ್ಜಿಗಳನ್ನು ಸಲ್ಲಿಸುತ್ತಾರೋ ಪ್ರತಿ ಅರ್ಜಿಗೆ ಹೆಚ್ಚುವರಿ ₹100 ಪಾವತಿಸಬೇಕಿದೆ.

ಪಿಯುಸಿ, ಪದವಿ ಅರ್ಹತೆ ಅಭ್ಯರ್ಥಿಗಳು ಆಹ್ವಾನಿಸಿದ ಎಲ್ಲ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಸುಮಾರು ₹2,100 ಪಾವತಿಸಬೇಕಿದೆ. ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ ₹500 ಶುಲ್ಕ ನಿಗದಿಸಿದೆ. ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕಾದರೆ ₹1,600 ಶುಲ್ಕ ಪಾವತಿಸಬೇಕಿದೆ. ಇನ್ನಿತರೆ ವಿದ್ಯಾರ್ಹತೆಯವರು ಆಯಾ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದಾದರೆ ಶುಲ್ಕ ಇನ್ನೂ ಹೆಚ್ಚುವರಿಯಾಗಲಿದೆ.

ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ 2023ರ ನವೆಂಬರ್‌ನಲ್ಲಿ ಹೊರಡಿಸಿದ್ದ ಅಧಿಸೂಚನೆಯಲ್ಲಿ ಸಾಮಾನ್ಯ ವರ್ಗದವರಿಗೆ ₹500, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ ₹ 300 ಹಾಗೂ ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ -1ರ ಅಭ್ಯರ್ಥಿಗಳಿಗೆ ₹200 ಶುಲ್ಕ ವಿಧಿಸಿತ್ತು.

ಕೆಪಿಎಸ್‌ಸಿ ವತಿಯಿಂದ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 600, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ ₹300 ಹಾಗೂ ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಿದೆ.

'ಸುಮಾರು ಎರಡು ವರ್ಷದಿಂದ ಯಾವುದೇ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿಲ್ಲ. ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತ ಅಭ್ಯರ್ಥಿಗಳು ಓದುತ್ತ ಇದ್ದಾರೆ. ಅರ್ಧದಷ್ಟಾದರೂ ಶುಲ್ಕ ಕಡಿತ ಮಾಡಬೇಕು. ಪ್ರತ್ಯೇಕ ಶುಲ್ಕ ವಿಧಿಸುವುದು ಕೈ ಬಿಡಬೇಕು ಎನ್ನುತ್ತಾರೆ ಸ್ಪರ್ಧಾ ಆಕಾಂಕ್ಷಿ ಸುನಿಲ ಸಿಡ್ಲಿ.

ಖಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೆಪಿಎಸ್‌ಸಿ ಮಾದರಿಯಲ್ಲಿ ಶುಲ್ಕ ವಿಧಿಸಿ ಅಭ್ಯರ್ಥಿಗಳಿಗೆ ಸಹಾಯವಾಗಲು ಸರ್ಕಾರ ನಿರ್ಧಾರ ಕೈಗೊಳ್ಳಬೇಕು
ಉದಯ ಸೂರಿ, ಸ್ಪರ್ಧಾ ಆಕಾಂಕ್ಷಿ

'5 ವರ್ಷದಿಂದ ಶುಲ್ಕ ಹೆಚ್ಚಳ ಮಾಡಿಲ್ಲ'



'ಪರೀಕ್ಷೆ ಸುವ್ಯವಸ್ಥಿತವಾಗಿ ನಡೆಸಲು ಹಿಂದಿಗಿಂತಲೂ ಅಧಿಕ ವೆಚ್ಚವಾಗುತ್ತದೆ. ವಿದ್ಯಾರ್ಥಿಗಳಿಗೆ ಹೊರೆ ಆಗಬಾರದು ಎಂಬ ದೃಷ್ಟಿಯಿಂದ 5 ವರ್ಷದಿಂದ ಶುಲ್ಕ ಹೆಚ್ಚಳ ಮಾಡಿರಲಿಲ್ಲ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ 'ಪ್ರಜಾವಾಣಿ'ಗೆ ತಿಳಿಸಿದರು.

'ಪರೀಕ್ಷೆ ನಡೆಸಲು ಪ್ರಾಧಿಕಾರವೇ ಎಲ್ಲ ವೆಚ್ಚ ಭರಿಸಲಿದೆ. ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ಆಗಬಾರದು ಎಂದು 8 ಇಲಾಖೆಗಳಿಂದ ಪ್ರತ್ಯೇಕ ಅಧಿಸೂಚನೆ ಹೊರಡಿಸದೇ ಒಂದೇ ಅಧಿಸೂಚನೆ ಹೊರಡಿಸಲಾಗಿದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

'ಮುಟ್ಟಿನ ರಜೆ: ದಿಟ್ಟ ಹೆಜ್ಜೆ'

ಬೆಂಗಳೂರು: 'ಉದ್ಯೋಗಸ್ಥ ಮಹಿಳೆಯರಿಗೆ ಒಂದು ದಿನದ ವೇತನಸಹಿತ ಮುಟ್ಟಿನ ರಜೆ ನೀಡುವ ಕರ್ನಾಟಕ ಸರ್ಕಾರದ ನಿರ್ಣಯವು ಒಂದು ದಿಟ್ಟ ಹೆಜ್ಜೆ. ಇದು ಕೇವಲ ರಜೆಯಲ್ಲ, ಮಹಿಳೆಯರ ಆರೋಗ್ಯದ ಹಕ್ಕು ಮತ್ತು ಘನತೆಯನ್ನು ಎತ್ತಿಹಿಡಿಯುವ ಕ್ರಮ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅಭಿಪ್ರಾಯಪಟ್ಟಿದ್ದಾರೆ.

'ಮಹಿಳೆಯರ ಬಹುದಿನಗಳ ಬೇಡಿಕೆಗೆ ಕರ್ನಾಟಕ ಸರ್ಕಾರ ಸ್ಪಂದಿಸಿದೆ. ಋತುಚಕ್ರದ ಸಂದರ್ಭದಲ್ಲಿ ಮಹಿಳೆಯರು ಅನುಭವಿಸುವ ನೋವು ಮತ್ತು ಆರೋಗ್ಯದ ಸೂಕ್ಷ್ಮತೆ ಗುರುತಿಸಿ ರಜೆ ಘೋಷಿಸಿರುವುದು, ಮಹಿಳೆಯರ ಸ್ವಾವಲಂಬನೆಗೆ ಮತ್ತು ಆರೋಗ್ಯಕ್ಕೆ ಮಾಡಿಕೊಟ್ಟ ದಾರಿ' ಎಂದಿದ್ದಾರೆ.

'ಸರ್ಕಾರದ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಕ್ರಮಗಳ ಬೆನ್ನಲ್ಲೇ, ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದ ಈ ನಿರ್ಧಾರವು ಮಹಿಳೆಯರ ಪಾಲಿಗೆ ಮತ್ತಷ್ಟು ಸ್ವಾವಲಂಬನೆ ಶಕ್ತಿ ತುಂಬಲಿದೆ' ಎಂದಿದ್ದಾರೆ.

'ಕರ್ನಾಟಕ ಸರ್ಕಾರದ ಈ 'ಋತುಚಕ್ರ ರಜೆ ನೀತಿ- 2025' ಇಡೀ ದೇಶಕ್ಕೆ ಮಾದರಿ' ಎಂದಿರುವ ಸುರ್ಜೇವಾಲಾ, 'ಕಾಂಗ್ರೆಸ್ ಪಕ್ಷವು ಮಹಿಳೆಯರ ಬಗ್ಗೆ ಅಪಾರ ಗೌರವವನ್ನು ಹೊಂದಿದೆ. ಜೊತೆಗೆ, ಅವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇಂತಹ ಮಾನವೀಯ ಮತ್ತು ಪ್ರಗತಿಪರ ಕ್ರಮವನ್ನು ಕೈಗೊಳ್ಳಲು ಕಾಂಗ್ರೆಸ್ ಸರ್ಕಾರಕ್ಕೆ ಮಾತ್ರ ಸಾಧ್ಯ. ಈ ನಿರ್ಧಾರದಿಂದಾಗಿ ಕರ್ನಾಟಕವು ಗ್ಯಾರಂಟಿ ಯೋಜನೆಗಳ ನಂತರ ಮತ್ತೊಮ್ಮೆ ಇಡೀ ದೇಶಕ್ಕೆ ಮತ್ತು ಇತರ ರಾಜ್ಯಗಳಿಗೆ ಮಾದರಿಯಾಗಿದೆ' ಎಂದು ಬಣ್ಣಿಸಿದ್ದಾರೆ.

'ಮಾಜಿ ಸಂಸದ ಉಗ್ರಪ್ಪ ಹಾಗೇ ಮಾತನಾಡಬಾರದಿತ್ತು'

ಕೊಪ್ಪಳ: 'ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗಾರರು. ಆದರೂ ಸರ್ಕಾರಿ ಕಾರ್ಯಕ್ರಮದಲ್ಲಿ 'ನಮ್ಮ ಅನ್ನ ಕಸಿದುಕೊಳ್ಳಬೇಡಿ ಎಂದಿದ್ದು ಸರಿಯಲ್ಲ' ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ, 'ಸಿ.ಎಂಗೆ ಮುಜುಗರ ಆಗುವಂತೆ ಮಾತು ಆಡಬಾರದಿತ್ತು. ಅವರು ಎಂದಿಗೂ ಇನ್ನೊಬ್ಬರ ಅನ್ನ ಕಸಿದುಕೊಳ್ಳುವುದಿಲ್ಲ' ಎಂದರು.

'ಪಕ್ಷ ಅಥವಾ ಬೇರೆ ವೇದಿಕೆಗಳಲ್ಲಿ ಈ ಬಗ್ಗೆ ಪ್ರಶ್ನಿಸಬಹುದಿತ್ತು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ನನಗೆ ಗೊತ್ತಿರುವ ಮಾಹಿತಿ ಹೇಳದಿದ್ದರೆ ತಪ್ಪಾಗುತ್ತದೆ' ಎಂದರು.

ಪರಿಷ್ಕರಣೆ: 'ಸುಪ್ರೀಂ ಕೋರ್ಟ್ ಆದೇಶದಂತೆ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನವೆಂಬರ್‌ನಿಂದ ಆರಂಭಿಸುತ್ತೇವೆ' ಎಂದು ತಿಳಿಸಿದರು. 'ನಾವು ಮಾಡಿದ ಬಳಿಕ ಆಯೋಗ ಪಟ್ಟಿ ಪರಿಷ್ಕರಿಸಲಿ ಎಂದು ಪತ್ರ ಬರೆದಿದ್ದೇನೆ. ಸ್ಥಳೀಯ ಸಂಸ್ಥೆ ಚುನಾವಣೆ ಇರುವೆಡೆ ಪರಿಷ್ಕರಿಸುವುದಿಲ್ಲ ಎಂದು ಪ್ರತಿಕ್ರಿಯಿಸಿದೆ' ಎಂದರು.

ನೌಕಾಯಾನ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನವರು (ಎನ್‌ಸಿಸಿ) ಮಂಗಳೂರಿನಿಂದ ಉಡುಪಿವರೆಗೆ ನೌಕಾಯಾನವನ್ನು ಭಾನುವಾರ ಕೈಗೊಂಡರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.70	14,205	7,164
ಹಾರಂಗಿ	2,859	2,857.91	1,783	1,050
ಕಬಿನಿ	2,284	2,283.09	2,300	900
ಹೇಮಾವತಿ	2,922	2,917.32	8,407	6,610
ಲಿಂಗನಮಕ್ಕಿ	1,819	1,815.95	2,465	6,004
ಸೂಪಾ (ಮೀ)	564	559.14	1,333.82	4,553.04
ಮಾಣಿ	595	593.94	139	648
ತುಂಗಭದ್ರಾ	1,633	1,620.01	14,533	10,376
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2,175	2,174.80	1,459	1,778
ಭದ್ರಾ *	186	184.1	3,204	3,204
ಆಲಮಟ್ಟಿ (ಮೀ)	519.6	519.60	20,960	20,960
ನಾರಾಯಣಪುರ (ಮೀ)	492.25	492.25	20,000	12,943

* ನೆಲಮಟ್ಟದಿಂದ

2,500 ಕಾರ್ಯಕರ್ತರಿಗೆ ಕರವೇಯಿಂದ 'ಕನ್ನಡ ದೀಕ್ಷೆ'

ಬೆಳಗಾವಿ: ಕರವೇ (ನಾರಾಯಣಗೌಡ ಬಣ) ಇಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ, 2,500 ಕಾರ್ಯಕರ್ತರಿಗೆ ನಾಡು-ನುಡಿ ರಕ್ಷಣೆ ಹೋರಾಟಕ್ಕೆ ಸಜ್ಜಾಗಲು 'ಕನ್ನಡ ದೀಕ್ಷೆ' ನೀಡಲಾಯಿತು.

'ಎಲ್ಲ ಜಿಲ್ಲೆಗಳಲ್ಲೂ ಇಂತಹ ಕಾರ್ಯಕ್ರಮ ನಡೆಸಲಿದ್ದು, 50 ಸಾವಿರ ಕಾರ್ಯಕರ್ತರಿಗೆ ದೀಕ್ಷೆ ಕೊಡಲು ಯೋಜಿಸಿದ್ದೇವೆ' ಎಂದು ಸಂಘಟನೆಯ ಅಧ್ಯಕ್ಷ ಟಿ.ಎ. ನಾರಾಯಣಗೌಡ ಹೇಳಿದರು.

'ರಾಜ್ಯೋತ್ಸವಕ್ಕೆ ಪರ್ಯಾಯವಾಗಿ ಬೆಳಗಾವಿಯಲ್ಲಿ ಕರಾಳ ದಿನ ಆಚರಿಸಲು ಎಂಇಎಸ್‌ಗೆ ಅನುಮತಿ ಕೊಡಬಾರದು. ಕೊಟ್ಟರೆ ಮುಂದಿನ ಅನಾಹುತಕ್ಕೆ ಸರ್ಕಾರವೇ ಹೊಣೆ' ಎಂದು ಎಚ್ಚರಿಸಿದರು.

ಇಬ್ಬರು ಆರ್‌ಐ, ವಿಎಗಳ ಅಮಾನತು

ಹಾಸನ: ಹಾಸನಾಂಬ ದೇವಿ ದರ್ಶನದ ವೇಳೆ ಕರ್ತವ್ಯ ಲೋಪದ ಆರೋಪದ ಮೇಲೆ ಕಂದಾಯ ನಿರೀಕ್ಷಕರಾದ (ಆರ್‌ಐ) ಗೋವಿಂದರಾಜ್, ಯೋಗಾನಂದ್, ಗ್ರಾಮಲೆಕ್ಕಿಗರಾದ ಸಂತೋಷ್ ಅಂಬಿಗರ, ಶಿರಾಜ್ ಮಹಿಮಾ ಪಟೇಲ್ ಅವರನ್ನು ಅಮಾನತು ಮಾಡಲಾಗಿದೆ.

ಗೋಲ್ಡ್ ಕಾರ್ಡ್ ಕೌಂಟರ್‌ನಲ್ಲಿ ಕಾರ್ಡ್ ಸ್ಕ್ಯಾನ್ ಮಾಡದೇ ಭಕ್ತರನ್ನು ದೇವಾಲಯದ ಒಳಗಡೆಗೆ ಬಿಟ್ಟ ಆರೋಪದ ಮೇಲೆ ಅಮಾನತು ಮಾಡಲಾಗಿದೆ. ಗುರುತಿನ ಕಾರ್ಡ್ ದುರ್ಬಳಕೆ ಆರೋಪದಲ್ಲಿ ಮೊದಲದಿನ ಇಬ್ಬರು ವಾರ್ಡನ್‌ಗಳನ್ನು ಅಮಾನತು ಮಾಡಲಾಗಿತ್ತು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ

'ಡಿಸೆಂಬರ್‌ಗೆ ಸಂಪುಟ ವಿಸ್ತರಣೆ ಸಾಧ್ಯತೆ'

ಪ್ರಜಾವಾಣಿ ವಾರ್ತೆ

ರಾಯಚೂರು: 'ಡಿಸೆಂಬರ್‌ನಲ್ಲಿ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗುವ ಸಾಧ್ಯತೆ ಇದೆ' ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಇಲ್ಲಿ ಹೇಳಿದರು.

'ಅನೇಕ ಹಿರಿಯರಿಗೆ ಸಚಿವ ಸ್ಥಾನ ಕೊಡಬೇಕು ಎನ್ನುವ ಬೇಡಿಕೆಯಿದೆ. ಕೆಲವರು ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂತೆಯೇ ಮುಖ್ಯ-ಮಂತ್ರಿಯವರು ಸೂಚ್ಯವಾಗಿ ಈ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ' ಎಂದು ಭಾನುವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ರಾಜ್ಯದಲ್ಲಿ ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಸ್ಟ್ಯಾಂಪ್ ಪೇಪರ್ ಮೇಲೆ ಬರೆದು ಕೊಡಬೇಕಾ?
ಶರಣಬಸಪ್ಪ ದರ್ಶನಾಪುರ, ಸಚಿವ

ಹೈಕಮಾಂಡ್ ಸೂಚಿಸದೇ ವಿಸ್ತರಣೆ ಇಲ್ಲ: ಮಹದೇವಪ್ಪ

ಮಡಿಕೇರಿ: 'ಯಾರು ಏನೇ ಹೇಳಿದರೂ ಹೈಕಮಾಂಡ್ ಸೂಚಿಸುವವರೆಗೆ ಸಂಪುಟ ವಿಸ್ತರಣೆ ನಡೆಯುವುದಿಲ್ಲ' ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿರುವುದು ಇದುವರೆಗೂ ಕಂಡು ಬಂದಿಲ್ಲ' ಎಂದರು.

'ಮುಖ್ಯಮಂತ್ರಿ ಅವರು ಎಲ್ಲ ಸಚಿವರನ್ನೂ ಔತಣಕೂಟಕ್ಕೆ ಕರೆದಿದ್ದಾರೆ. ನಾನೂ ಹೋಗುವೆ. ಇದರಲ್ಲಿ ವಿಶೇಷ ಅರ್ಥ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಹೊಸ ಮುಖಗಳಿಗೆ ಸ್ಥಾನ ಸಾಧ್ಯತೆ: ಜಮೀರ್

ಹುಬ್ಬಳ್ಳಿ: 'ಐದು ವರ್ಷ ಸಿದ್ದರಾಮಯ್ಯ ಅವರೇ ಸಿ.ಎಂ ಆಗಿರುವರು. ನವೆಂಬರ್ ಕ್ರಾಂತಿ ಮಾಧ್ಯಮಗಳ ಸೃಷ್ಟಿ' ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

'ನವೆಂಬರ್‌ಗೆ ಸಂಪುಟ ಪುನರ್‌ರಚನೆ ಆಗಲಿದ್ದು, ಹೊಸಮುಖಗಳಿಗೆ ಸ್ಥಾನ ನೀಡುವ ಸಾಧ್ಯತೆ ಇದೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಮುಖ್ಯಮಂತ್ರಿ ಆಗುವ ಆಸೆ ಕಾಂಗ್ರೆಸ್‌ನಲ್ಲಿ ಹಲವು ನಾಯಕರಿಗಿದೆ. ಅದಕ್ಕಾಗಿ ಪಕ್ಷದಲ್ಲಿ ಒಳಜಗಳ ಇಲ್ಲ. ಜಗಳ ಇರುವುದು ಬಿಜೆಪಿಯಲ್ಲಿ' ಎಂದರು.

ಸಚಿವ ಸ್ಥಾನಕ್ಕೆ ಬಡಿದಾಟ: ಜೋಶಿ ವ್ಯಂಗ್ಯ

ಹುಬ್ಬಳ್ಳಿ: 'ಸಿದ್ದರಾಮಯ್ಯ ತಮಗೆ ಬೇಕಾದ ಸಚಿವರು, ಶಾಸಕರನ್ನು ಡಿನ್ನರ್ ಮೀಟಿಂಗ್‌ಗೆ ಕರೆದಿದ್ದಾರೆ. ಸಂಪುಟದಲ್ಲಿ ಸ್ಥಾನ ಪಡೆಯಲು ಮತ್ತು ಸ್ಥಾನ ಉಳಿಸಿಕೊಳ್ಳಲು ಕಾಂಗ್ರೆಸ್ ಶಾಸಕರು, ಸಚಿವರು ಬಡಿದಾಡುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದಲ್ಲಿನ ಈ ಗೊಂದಲದಿಂದಾಗಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ' ಎಂದರು.

ಬಾಲಕಿ ಮೇಲೆ ಗ್ರಾ.ಪಂ. ನೌಕರ ಅತ್ಯಾಚಾರ

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ 17 ವರ್ಷದ ಬಾಲಕಿಯ ಮೇಲೆ ಗ್ರಾ.ಪಂ. ಕರವಸೂಲಿಗಾರನಾಗಿರುವ ಬೀರಪ್ಪ ಇಲಕಲ್ (27) ಎಂಬಾತ ಅತ್ಯಾಚಾರ ಎಸಗಿರುವ ಕುರಿತು ಬಾಲಕಿಯ ತಾಯಿ ಕುಷ್ಟಗಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬಾಲಕಿಯನ್ನು ಹೊಲದಲ್ಲಿ ಬಲವಂತವಾಗಿ ಹೊತ್ತೊಯ್ದು ಹಲ್ಲೆ ನಡೆಸಿ ಅತ್ಯಾಚಾರ ಎಸಗಿದ್ದಾನೆ. ಈ ಕುರಿತು ಪೋಕ್ಸೊ ಕಾಯ್ದೆಯಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಕೆಲಸಕ್ಕೆ ಹೋಗದ ಪತ್ನಿಗೆ ನೇಣು ಹಾಕಿದ'

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ದುಡಿದು ಹಣ ತರಲಿಲ್ಲ ಎಂದು ಕೋಪಗೊಂಡ ಪತಿಯು, ಪತ್ನಿಗೆ ನೇಣು ಹಾಕಿ ಕೊಂದ ಘಟನೆ ತಾಲ್ಲೂಕಿನ ಚಿಕ್ಕ ಉಪ್ಪೇರಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಬಸಮ್ಮ ಸಿದ್ದಲಿಂಗಪ್ಪ ಬನ್ನಿಗೋಳ (28) ಮೃತರು. ಚಿಕ್ಕ ಉಪ್ಪೇರಿಯ ಸಿದ್ದಲಿಂಗಪ್ಪ ಬನ್ನಿಗೋಳ (32) ಎಂಬಾತ ದುಡಿದು ಹಣ ತರುವಂತೆ ನಿತ್ಯ ಪತ್ನಿಗೆ ಮಾನಸಿಕ, ದೈಹಿಕ ಕಿರುಕುಳ ನೀಡುತ್ತಿದ್ದ.

'ಶನಿವಾರವೂ ಜಗಳವಾಡಿ ಪತ್ನಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದು, ಬಳಿಕ ಸೀರೆಯಿಂದ ನೇಣು ಹಾಕಿ ಕೊಲೆಗೈದಿದ್ದಾನೆ' ಎಂದು ಮೃತ ಬಸಮ್ಮಳ ತಾಯಿ ಗುರುಲಿಂಗಮ್ಮ ಜಗ್ಲೇರ ಅವರು ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಆರ್‌ಎಸ್‌ಎಸ್‌ಗೆ ಅಂಕುಶ?

ಒಂದನೇ ಪುಟದಿಂದ...

ಈ ಪತ್ರವನ್ನು ಲಗತ್ತಿಸಿ ತಮ್ಮ 'ಎಕ್ಸ್' ಖಾತೆಯಲ್ಲಿ ಭಾನುವಾರ ಪೋಸ್ಟ್ ಮಾಡಿರುವ ಪ್ರಿಯಾಂಕ್, 'ಆರ್‌ಎಸ್‌ಎಸ್ ಪ್ರತಿಪಾದಿಸುವ ಮೂಲಭೂತವಾದಿ ಸಿದ್ಧಾಂತದ ಪರಿಣಾಮದಿಂದಲೇ ಇಂದು ನ್ಯಾಯಾಂಗದ ಮುಖ್ಯಸ್ಥರ ಮೇಲೆ ಶೂ ಎಸೆಯುವಂತಹ ವಾತಾವರಣ ಸೃಷ್ಟಿಯಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನಿಂದಿಸುವ ಮನಃಸ್ಥಿತಿ ಬೆಳೆದಿದೆ. ಮಕ್ಕಳು ಹಾಗೂ ಯುವ ಸಮುದಾಯದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಉಂಟು ಮಾಡಲು ಯತ್ನಿಸುವ ಆರ್‌ಎಸ್‌ಎಸ್ ಪ್ರಯತ್ನವನ್ನು ತಡೆಯುವ, ಸಂವಿಧಾನದ ಆಶಯಗಳನ್ನು, ಏಕತೆ, ಸಮಾನತೆ, ಸಮಗ್ರತೆಯನ್ನು ಎತ್ತಿ ಹಿಡಿಯಲು ಸಾರ್ವಜನಿಕ ಪ್ರದೇಶದಲ್ಲಿ ಆರ್‌ಎಸ್‌ಎಸ್‌ನ ಚಟುವಟಿಕೆಯನ್ನು ನಿರ್ಬಂಧಿಸುವಂತೆ ಮುಖ್ಯಮಂತ್ರಿಗೆ ಕೋರಿಕೆ ಸಲ್ಲಿಸಿದ್ದೇನೆ' ಎಂದು ಬರೆದುಕೊಂಡಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಸಭೆ ಅಧಿ-ವೇಶನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆರ್‌ಎಸ್‌ಎಸ್‌ನ ಪ್ರಾರ್ಥನಾ ಗೀತೆ, 'ನಮಸ್ತೇ ಸದಾ ವತ್ಸಲೇ..' ಹಾಡುವ ಮೂಲಕ ಚರ್ಚೆಗೆ ಗ್ರಾಸವಾಗಿದ್ದರು. ಇದನ್ನು ಕಾಂಗ್ರೆಸ್ ನಾಯಕರು ಖಂಡಿಸಿದ್ದರು. ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಶಿವಕುಮಾರ್ ಕ್ಷಮೆ ಕೇಳಬೇಕೆಂದು ಆಗ್ರಹಿಸಿದ್ದರು. ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶಿದ ಬಳಿಕ ಡಿ.ಕೆ. ಶಿವಕುಮಾರ್ ಅವರು ಮಾಧ್ಯಮದ ಮುಂದೆ ಕ್ಷಮೆ ಕೇಳಿ ಪರಿಸ್ಥಿತಿ ತಿಳಿಗೊಳಿಸಿದ್ದರು.

'ಆರ್‌ಎಸ್‌ಎಸ್‌ನವರು ತಾಲಿಬಾನಿಗಳು'

ಒಂದನೇ ಪುಟದಿಂದ...

ಅಲ್ಲದೇ 'ಆರ್‌ಎಸ್‌ಎಸ್ ಸಂಘಟನೆಯವರು ಅನುಮತಿ ಪಡೆಯದೆ ಹಲವು ವರ್ಷಗಳಿಂದ ಸರ್ಕಾರಿ ಜಾಗಗಳಲ್ಲಿ ಶಾಖೆ ನಡೆಸಿಕೊಂಡು ಬಂದಿದ್ದಾರೆ. ಲಾಠಿ, ತಲ್ವಾರ್ ತಿರುಗಿಸಿಕೊಂಡು ಓಡಾಡುತ್ತಾರೆ' ಎಂದು ಹೇಳಿದರು.

'ಪ್ಯಾಲೇಸ್ಟೀನ್ ಪರ ಪ್ರತಿಭಟನೆ ಮಾಡಿದರೆ ಪೊಲೀಸರು ಬಂಧಿಸುತ್ತಾರೆ. ಆರ್‌ಎಸ್‌ಎಸ್ ಶಾಖೆ ನಡೆಸಲು ಪೊಲೀಸರು ಏಕೆ ಅನುಮತಿ ಕೊಟ್ಟಿದ್ದಾರೆ. ಅನುಮತಿ ಪಡೆದು ಸರ್ಕಾರಿ ಜಾಗದಲ್ಲಿ ಕಾರ್ಯಕ್ರಮ ಮಾಡುವುದಾದರೆ ನಮ್ಮ ಅಭ್ಯಂತರ ಇಲ್ಲ' ಎಂದರು.

'ಬಜರಂಗದಳ ಸಂಘಟನೆಯನ್ನು ನಿಷೇಧ ಮಾಡುತ್ತೇವೆ ಎಂದು ನಾವು ಪ್ರಣಾಳಿಕೆಯಲ್ಲೇ ಹೇಳಿದ್ದೇವೆ' ಎಂದೂ ಹೇಳಿದರು.

'ತಾಕತ್ತಿದ್ದರೆ ನಿಷೇಧಿಸಿ'

ಒಂದನೇ ಪುಟದಿಂದ...

'325 ಸೀಟು ಗೆದ್ದಿದ್ದ ರಾಹುಲ್ ಗಾಂಧಿ ಅವರ ಅಜ್ಜಿ ಇಂದಿರಾಗಾಂಧಿ ಅವರ ಕೈಯಲ್ಲಿ ಸಂಘದ ಚಟುವಟಿಕೆಗಳನ್ನು ನಿಷೇಧ ಮಾಡಲು ಆಗಲಿಲ್ಲ. 414 ಸೀಟು ಗೆದ್ದಿದ್ದ ರಾಜೀವ್ ಗಾಂಧಿ ಅವರ ಕೈಯಲ್ಲೂ ಆಗಿರಲಿಲ್ಲ. ಇನ್ನು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಲಿರುವ ಸಿದ್ದರಾಮಯ್ಯ ಏನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದ್ದಾರೆ.

'ವಿಧಾನಸೌಧದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೆಮ್ಮೆಯಿಂದ ಸಂಘದ ಪ್ರಾರ್ಥನಾ ಗೀತೆ ಹಾಡಿದ್ದರು. ಸಂಘದ ಚಟುವಟಿಕೆ ನಿಷೇಧಿಸುವ ಮೊದಲು ನಿಮ್ಮ ತಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು ಡಿಕೆಶಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಿ. ಆಗುತ್ತದೆಯೇ' ಎಂದು ಅಶೋಕ ಪ್ರಶ್ನಿಸಿದ್ದಾರೆ.

'ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುವವರ ಸಮರ್ಥನೆ ಮಾಡಿಕೊಳ್ಳುವ ನೀವು ಸಂವಿಧಾನದ ಆಶಯಗಳ ಬಗ್ಗೆ ಮಾತನಾಡುವುದು ನಿಜಕ್ಕೂ ಹಾಸ್ಯಾಸ್ಪದ' ಎಂದಿದ್ದಾರೆ.

'ನಿಮ್ಮ ವೈಫಲ್ಯ, ದುರಾಡಳಿತ ಮುಚ್ಚಿಕೊಳ್ಳಲು ಕೆಲಸಕ್ಕೆ ಬಾರದ ಪತ್ರ ಬರೆಯುವುದನ್ನು ಬಿಟ್ಟು ಸರಿಯಾಗಿ ಖಾತೆ ನಿರ್ವಹಿಸಿ. ನೆರೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವು ಒದಗಿಸಿ' ಎಂದಿದ್ದಾರೆ.

'ಸಂಘದ ವಿರುದ್ಧ ವಿಷ ಕಾರುತ್ತಾ ಇದ್ದವರು ಇಹಲೋಕ ತ್ಯಜಿಸಿದ್ದಾರೆ'

ಬೆಂಗಳೂರು: 'ಜೀವನಪೂರ್ತಿ ಸಂಘದ ಮೇಲೆ ವಿಷ ಕಾರುತ್ತಾ ಇದ್ದ ಕೆಲವರು ಹೊಟ್ಟೆ ಒಳಗೆ ಹುಣ್ಣಾಗಿ ಇಹಲೋಕವನ್ನೇ ತ್ಯಜಿಸಿದ್ದಾರೆ. ತಮ್ಮದು ಯಾವ ಪಾಡೋ ಕಾದು ನೋಡೋಣ' ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಕಿಡಿಕಾರಿದ್ದಾರೆ.

'ಎಕ್ಸ್'ನಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಅವರು, 'ಸಂಘದ ಶಾಖೆಗಳನ್ನು ನಿಷೇಧಿಸುತ್ತೇವೆಂಬ ತಿರುಕನ ಕನಸಿನಿಂದ ಹೊರಬನ್ನಿ' ಎಂದಿದ್ದಾರೆ.

'ಹಲವು ತಲೆಮಾರುಗಳಿಂದ ಸಂಘವನ್ನು ಕಂಡರೆ ಉರಿದು ಬೀಳುತ್ತಿದ್ದ ನಿಮ್ಮವರೇ ತಮ್ಮ ಜೀವಮಾನದ ಕೊನೆಯಲ್ಲಿ ಬದಲಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಗಣರಾಜ್ಯೋತ್ಸವದ ಪರೇಡ್‌ನಲ್ಲೂ ಭಾಗವಹಿಸಲು ಅವಕಾಶ ಕೊಟ್ಟಿದ್ದಾರೆ. ಇನ್ನೂ ಕೆಲವರು ಸಂಘದ ದ್ವೇಷದಿಂದ ಹೊರಬಂದು ಸಂಘದ ಕಾರ್ಯಕ್ರಮ-ಗಳಲ್ಲಿ ಭಾಗವಹಿಸಿ, ಹಾಡಿ ಹೊಗಳಿದ್ದಾರೆ' ಎಂದು ರವಿ ಹೇಳಿದ್ದಾರೆ.

'ಸಂಘದ ವಿರೋಧ ಅದು ರಾಷ್ಟ್ರದ ವಿರೋಧವೇ ಆಗುತ್ತದೆ. ಏಕೆಂದರೆ ಸಂಘ ರಾಷ್ಟ್ರೀಯ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಒಂದು ಸಂಘಟನೆ. ಸಂಘ ದೇಶ ಭಕ್ತಿಯ ಸಂಸ್ಕಾರವನ್ನು ಕೊಡುತ್ತದೆ. ಹಿಂದೂಗಳನ್ನು ಸಂಘಟಿಸುವ ಕೆಲಸ ಮಾಡುತ್ತದೆ. ಸಂಘದ ಕುರಿತು ಪ್ರಿಯಾಂಕ್ ಖರ್ಗೆ ಅವರ ತಪ್ಪು ಕಲ್ಪನೆಯನ್ನು ದೂರ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಅವರದು ಪೂರ್ವಗ್ರಹದ ದ್ವೇಷವಾದರೆ ಅದಕ್ಕೆ ಕಾಲವೇ ತಕ್ಕ ಉತ್ತರ ಕೊಡುತ್ತದೆ' ಎಂದಿದ್ದಾರೆ.

'ಸಂಘವನ್ನು ಟೀಕಿಸದಿದ್ದರೆ ಬಿಕೆ- ಪ್ರಿಯಾಂಕ್‌ಗೆ ತಿಂದ ಅನ್ನ ಅರಗಲ್ಲ'

ಬೆಂಗಳೂರು: 'ಬಿ.ಕೆ.ಹರಿಪ್ರಸಾದ್ ಮತ್ತು ಪ್ರಿಯಾಂಕ್ ಖರ್ಗೆ ಅವರಿಗೆ ಆರ್‌ಎಸ್‌ಎಸ್ ಹೆಸರು ನಿತ್ಯ ಪಠಿಸದಿದ್ದರೆ ತಿಂದ ಅನ್ನ ಅರಗುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಎಕ್ಸ್' ಮೂಲಕ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೀಲಾಕಾಶದಲ್ಲಿ ಭಾರತದ ಭರವಸೆಯ ಬೆಳಕಿನ ನಕ್ಷತ್ರವಾಗಿ ಮಿನುಗುತ್ತಿದೆ. ಹಿಮಾಲಯದೆತ್ತರ ಬೆಳೆದು ನಿಂತಿದೆ. ನಾಯಿ ಬೊಗಳಿದರೆ ದೇವಲೋಕ ಹಾಳಾಗುವುದಿಲ್ಲ. ಸಭ್ಯತೆ, ಘನತೆ, ವ್ಯಕ್ತಿತ್ವ ಇಲ್ಲದ ಮಾತುಗಳು ರಾಜಕೀಯ ಟೀಕೆ ಆಗಲಾರದು. ಅದೇನಿದ್ದರೂ ಹೊಲಸು ರಾಜಕಾರಣದ ಪ್ರತಿಬಿಂಬವಾಗುತ್ತದೆ' ಎಂದು ಕಿಡಿಕಾರಿದ್ದಾರೆ.

ಪ್ರಿಯಾಂಕ್ ವಜಾಗೆ ಆಗ್ರಹ: ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಕಾರಾತ್ಮಕ ಆಲೋಚನೆಗಳನ್ನು ತುಂಬಲಾಗುತ್ತಿದೆ ಎಂದು ಪ್ರಿಯಾಂಕ್ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಯಾವ ನಕಾರಾತ್ಮಕ ಆಲೋಚನೆಗಳನ್ನು ತುಂಬಲಾಗಿದೆ ಎಂಬುದನ್ನು ಸಾಬೀತು ಮಾಡಬೇಕು. ಇಲ್ಲವಾದರೆ ತಕ್ಷಣವೇ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆಗ್ರಹಿಸಿದ್ದಾರೆ.

ನೆಹರೂ, ಇಂದಿರಾಗಾಂಧಿ ಮತ್ತಿತ್ತರ ಮಹಾನುಭಾವರು ಇದೇ ದುಸ್ಸಾಹಸ ಮಾಡಲು ಹೋಗಿ ಕೈ ಸುಟ್ಟುಕೊಂಡರು. ಇತಿಹಾಸ ಗೊತ್ತಿರದವರು ಮತ್ತೊಮ್ಮೆ ಇದೇ ಕೃತ್ಯ ಮಾಡಲು ಹೊರಟಿದ್ದಾರೆ. ಇವರಿಗೂ ಇತಿಹಾಸ ಕಹಿಯಾದ ಪಾಠವನ್ನೇ ಕಲಿಸಲಿದೆ
ಎಸ್.ಸುರೇಶ್ ಕುಮಾರ್, ಬಿಜೆಪಿ ಶಾಸಕ

ಶತಮಾನಗಳ ಇತಿಹಾಸವಿರುವ ಜಮಖಾನಗಳು; ಸೂಕ್ತ ತರಬೇತಿ, ಆರ್ಥಿಕ ನೆರವಿನ ನಿರೀಕ್ಷೆ

ನವಲಗುಂದ ಧುರಿ; ತಯಾರಕರ ಕೊರತೆ

• ಗೋವರ್ಧನ ಎಸ್.ಎನ್.

ಹುಬ್ಬಳ್ಳಿ: ಶತಮಾನಗಳ ಇತಿಹಾಸವುಳ್ಳ ಮತ್ತು ಭೌಗೋಳಿಕ ಮಾನ್ಯತೆ (ಜಿಐ) ಪಡೆದಿರುವ ಧಾರವಾಡ ಜಿಲ್ಲೆ ನವಲಗುಂದದ ಧುರಿಗಳ (ಜಮಖಾನ) ತಯಾರಿಕೆಗೆ ತಯಾರಕರ ಕೊರತೆ ಕಾಡುತ್ತಿದೆ.

ನವಲಗುಂದದ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ (ಕಾವೇರಿ ಎಂಪೋರಿಯಂ) ಘಟಕದಲ್ಲಷ್ಟೇ ಸದ್ಯ ಜಮಖಾನಗಳ ಉತ್ಪಾದನೆ ಆಗುತ್ತಿದೆ. ಇವುಗಳ ತಯಾರಿಕೆ ಮಾಡುವವರ ಸಂಖ್ಯೆ 17ಕ್ಕೆ ಇಳಿದಿದೆ.

'ಪಾರಂಪರಿಕ ನೇಯ್ಗೆ ಕಲೆಯನ್ನು ಮಕ್ತುಲ್ ಸಾಬ್ ಜಮಖಾನ್ದಾರ್ ಅವರು ನಮಗೆ ಕಲಿಸಿದರು. ನಾನು ತರಬೇತಿ ಪಡೆದಾಗ 150ಕ್ಕೂ ಹೆಚ್ಚು ಮಂದಿ ಕಾರ್ಮಿಕರು ತಯಾರಿಸುತ್ತಿದ್ದರು. ಕ್ರಮೇಣ ಅವರ ಸಂಖ್ಯೆ ಕುಸಿಯುತೊಡಗಿತು' ಎಂದು ನವಲಗುಂದ ನೇಕಾರರ ಸಂಘದ ಅಧ್ಯಕ್ಷೆ ಫರ್ಜಾನ ಶಿರಸಂಗಿ 'ಪ್ರಜಾವಾಣಿ'ಗೆ ತಿಳಿಸಿದರು.



'ಜಮಖಾನ ತಯಾರಿಸುವ-ವರಿಗೆ ಸರ್ಕಾರದಿಂದ ವಿಶೇಷ ನೆರವು ಇಲ್ಲ. ಜಮಖಾನ ಮಾರಾಟದಿಂದ ತಿಂಗಳಿಗೆ ₹2 ಲಕ್ಷದವರೆಗೆ ಆದಾಯಗಳಿಸುವ ಸಾಧ್ಯತೆ ಇದ್ದರೂ, ತಯಾರಕರ ಕೊರತೆಯಿಂದ ಅದು ಸಾಧ್ಯವಾಗುತ್ತಿಲ್ಲ. ಒಂದೊಂದು ಜಮಖಾನ ದರ ₹ 1 ಸಾವಿರದಿಂದ ₹ 10 ಸಾವಿರದವರೆಗೆ ಇರುತ್ತದೆ. ಸದ್ಯ ತಿಂಗಳಿಗೆ 100 ರಿಂದ 200 ಜಮಖಾನ ತಯಾರಿಸಲಾಗುತ್ತಿದೆ' ಎಂದರು.

ಉತ್ತಮ ಬೇಡಿಕೆ: 'ಪ್ರಾಚೀನ ಕಾಲದ ಕರಕುಶಲ ಉತ್ಪನ್ನವಾದ ಜಮಖಾನದ ಚಾಮೂರ್, ಪಗಡೆ ವಿಧಕ್ಕೆ ಸಾಕಷ್ಟು ಬೇಡಿಕೆ ಇದೆ. ನವಲಗುಂದದಲ್ಲಿರುವ ಘಟಕಕ್ಕೆ ಸೌಲಭ್ಯ ನೀಡಲಾಗಿದೆ. ಉತ್ಪನ್ನವಾರು ತಯಾರಕರಿಗೆ ಸಂಬಳ ನೀಡಲಾಗುತ್ತಿದೆ' ಎಂದು ಘಟಕದ ಯೋಜನಾಧಿಕಾರಿ ರಮೇಶ ತಿಳಿಸಿದರು.

ಮುಖ್ಯಾಂಶಗಳು

- ವಿಜಯಪುರದಿಂದ ವಲಸೆ ಬಂದ ಕುಶಲಕರ್ಮಿಗಳು
- ಮುಸ್ಲಿಂ ಮಹಿಳೆಯರಿಂದ ಕಲೆ ಮುಂದುವರಿಕೆ

2016ರಲ್ಲಿ 30 ಜನರಿಗೆ ತರಬೇತಿ ನೀಡಲಾಗಿತ್ತು. ಹೊಸದಾಗಿ ತರಬೇತಿ ನೀಡಲು ಸರ್ಕಾರ ಅನುಮೋದನೆ ನೀಡಿದ ಬಳಿಕ ತರಬೇತಿ ಆರಂಭಿಸಲಾಗುತ್ತದೆ
ರಮೇಶ, ಯೋಜನಾಧಿಕಾರಿ, ನವಲಗುಂದ ಜಮಖಾನ ಉತ್ಪಾದನಾ ಘಟಕ

ನವಲಗುಂದ ಜಮಖಾನ ಅಭಿವೃದ್ಧಿಗೆ ಪ್ರತ್ಯೇಕ ಯೋಜನೆ ಇಲ್ಲ. ಶೀಘ್ರದಲ್ಲೇ ಘಟಕಕ್ಕೆ ಭೇಟಿ ನೀಡಿ, ಪರಿಶೀಲಿಸುವೆ. ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು
ಎಚ್.ಬಿ. ಪಾಟೀಲ, ಕೈಮಗ್ಗ ಮತ್ತು ಜವಳಿ ಇಲಾಖೆ, ಧಾರವಾಡ

'ಪರಂಪರೆಯೂ ಕಾರಣ'

'ಜಮಖಾನ ತಯಾರಿಕೆ, ಮಾರಾಟದ ಹೊಣೆಯನ್ನು ಸರ್ಕಾರ ವಹಿಸಿಕೊಂಡಿದೆ. ಹೊಸದಾಗಿ ತರಬೇತಿ ಪಡೆದವರು ಆ ಕೆಲಸ ಮುಂದುವರಿಸುವುದಿಲ್ಲ. ಮುಖ್ಯವಾಗಿ ಕೌಶಲ ಗೊತ್ತಿರುವವರು ಮನೆಯ ಹೆಣ್ಣುಮಕ್ಕಳಿಗೆ ಕಲಿಸುವುದಿಲ್ಲ. ಹೊಸ ಪೀಳಿಗೆಗೆ ಈ ಬಗ್ಗೆ ಆಸಕ್ತಿ ಇಲ್ಲ. ತಯಾರಕರ ಸಂಖ್ಯೆ ಕುಸಿಯಲು ಇದೂ ಕಾರಣ' ಎಂದು ಕೈಮಗ್ಗ ಹಾಗೂ ಜವಳಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸಮೀಕ್ಷೆ: ಮಾಹಿತಿ ನೀಡದವರೇ ಹೆಚ್ಚು

ನಮ್ಮ ಜಾತಿಗೆ ಉಪಯೋಗವಿಲ್ಲ, ಇತರರಿಗೆ ಏಕೆ ಅನುಕೂಲ ಮಾಡಬೇಕು ಎನ್ನುವವರೇ ಹೆಚ್ಚು

• ಜಯಸಿಂಹ ಆರ್.



ಬೆಂಗಳೂರು: ರಾಜ್ಯ ಸರ್ಕಾರವು ನಡೆಸುತ್ತಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡಲು ನಿರಾಕರಿಸುತ್ತಿರುವ ಹಲವು ಪ್ರಕರಣಗಳು ನಗರದಲ್ಲಿ ನಡೆದಿವೆ. ನಗರದ 19 ಬ್ಲಾಕ್‌ಗಳಲ್ಲಿ ಶೇ 62ಕ್ಕೂ ಹೆಚ್ಚು ಮಂದಿ ಮಾಹಿತಿ ನೀಡಲು ನಿರಾಕರಿಸಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹಿಸುತ್ತಿರುವ ಸರ್ಕಾರದ ವಿವಿಧ ಇಲಾಖೆ-ಪ್ರಾಧಿಕಾರಗಳ ಸಿಬ್ಬಂದಿಯ ಜತೆಗೆ ಸಮಾಲೋಚಿಸಿದಾಗ ಈ ಮಾಹಿತಿ ದೊರೆಯಿತು. ಸಮೀಕ್ಷೆಗೆ ಸಂಬಂಧಿಸಿದ ದತ್ತಾಂಶಗಳು 'ಪ್ರಜಾವಾಣಿ'ಗೆ ಲಭ್ಯವಾಗಿದ್ದು, ಅವುಗಳನ್ನು ಪರಿಶೀಲಿಸಿದಾಗ ಈ ಅಂಶ ದೃಢಪಟ್ಟಿತು.

ಸಮೀಕ್ಷೆಗಾಗಿ ನಗರದ ವ್ಯಾಪ್ತಿಯಲ್ಲಿರುವ ಪ್ರತಿ 150 ಮನೆಗಳನ್ನು ಒಂದು ಬ್ಲಾಕ್ ಆಗಿ ವರ್ಗೀಕರಿಸಲಾಗಿದೆ. ಜಯನಗರ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರದ ವ್ಯಾಪ್ತಿಯಲ್ಲಿ ಬರುವ ವಿವಿಧ, 19 ಬ್ಲಾಕ್‌ಗಳಲ್ಲಿ ಶನಿವಾರ ಸಂಜೆವರೆಗೆ ಒಟ್ಟು 2,923 ಮನೆಗಳಿಗೆ ಸಮೀಕ್ಷಕರು ಭೇಟಿ ನೀಡಿದ್ದಾರೆ. ಈ ಪೈಕಿ 1,756 ಮನೆಯವರು 'ನಾವು ಮಾಹಿತಿ ನೀಡುವುದಿಲ್ಲ ಎಂದಿದ್ದಾರೆ.

ಈ ಬ್ಲಾಕ್‌ಗಳಲ್ಲಿ, ಸಾಮಾಜಿಕ ಮತ್ತು ಶೈಕ್ಷಣಿಕ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಿರುವುದು 920 ಮನೆಗಳಲ್ಲಿ ಮಾತ್ರ. ಜಯನಗರ ವ್ಯಾಪ್ತಿಯ ಬ್ಲಾಕ್‌ವೊಂದರ ಒಂದು ಅಪಾರ್ಟ್‌ಮೆಂಟ್‌ನಲ್ಲಿ 120 ಫ್ಲ್ಯಾಟ್‌ಗಳಿದ್ದು, ಎಲ್ಲ ಫ್ಲ್ಯಾಟ್‌ನವರೂ ಮಾಹಿತಿ ನೀಡುವುದಿಲ್ಲ ಎಂದಿದ್ದಾರೆ. 'ಈ ಅಪಾರ್ಟ್‌ಮೆಂಟ್‌ನಲ್ಲಿ ಪ್ರಬಲ ಜಾತಿ-ಸಮುದಾಯದವರೇ ಇದ್ದು, 'ನಮ್ಮ ಜಾತಿಯವರಿಗೆ ಇದರಿಂದ ಉಪಯೋಗವಿಲ್ಲ. ಬೇರೆ ಯಾವುದೋ ಜಾತಿಯವರಿಗೆ ಮೀಸಲಾತಿ ಹೆಚ್ಚಳ ಮಾಡಲು ನಮ್ಮ ಮಾಹಿತಿ ಏಕೆ ನೀಡಬೇಕು' ಎಂದು ಪ್ರಶ್ನಿಸಿದರು' ಎಂದು ಸಮೀಕ್ಷಕರೊಬ್ಬರು ಮಾಹಿತಿ ನೀಡಿದರು.

ಬೊಮ್ಮನಹಳ್ಳಿ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಒಂದರಲ್ಲಿ 450 ಫ್ಲ್ಯಾಟ್‌ಗಳಿದ್ದು, ಸಮೀಕ್ಷಕರನ್ನು ಅಪಾರ್ಟ್‌ಮೆಂಟ್‌ನ ಒಳಗೇ ಬಿಟ್ಟಿಲ್ಲ. 'ಅಪಾರ್ಟ್‌ಮೆಂಟ್ ಮ್ಯಾನೇಜ್‌ಮೆಂಟ್, 'ಯಾವ ಫ್ಲ್ಯಾಟ್‌ನವರೂ ನಿಮಗೆ ಮಾಹಿತಿ ನೀಡಲು ಸಿದ್ಧರಿಲ್ಲ, ಮತ್ತೆ ಇಲ್ಲಿಗೆ ಬರಬೇಡಿ' ಎಂದು ತಾಕೀತು ಮಾಡಿದರು. ಒಟ್ಟು ಮೂವರು ಸಮೀಕ್ಷಕರನ್ನು ಈ ಅಪಾರ್ಟ್‌ಮೆಂಟ್‌ಗೆ ನಿಯೋಜನೆ ಮಾಡಿದ್ದರು. ಮೂವರ ಸಮೀಕ್ಷಾ ಪ್ರಗತಿ 'ಶೂನ್ಯ' ಎಂದು ಕಂದಾಯ ಇಲಾಖೆಯಿಂದ ಸಮೀಕ್ಷೆಗೆ ನಿಯೋಜನೆಗೊಂಡಿರುವ ಸಿಬ್ಬಂದಿಯೊಬ್ಬರು ತಮ್ಮ ಅಸಹಾಯಕತೆ ಹೇಳಿಕೊಂಡರು.

'ಸಮೀಕ್ಷೆಗೆ ಮಾಹಿತಿ ನೀಡಬೇಡಿ ಎಂದು ಪ್ರಮುಖ ರಾಜಕೀಯ ಪಕ್ಷವೊಂದು ನಮ್ಮ ವ್ಯಾಪ್ತಿಯ ಪ್ರತಿ ಮನೆಗೂ ಕರಪತ್ರಗಳನ್ನು ಹಂಚಿದೆ. ಹೀಗಾಗಿ ಬಹುತೇಕ ಮಂದಿ ಮಾಹಿತಿ ನೀಡುವುದಿಲ್ಲ ಎಂದೇ ಹೇಳುತ್ತಿದ್ದಾರೆ. ನಮ್ಮನ್ನು ಮನೆಯ ಬಳಿಗೂ ಬಿಟ್ಟುಕೊಳ್ಳುತ್ತಿಲ್ಲ. ಕೇಂದ್ರ ಸರ್ಕಾರ ಜಾತಿಗಣತಿ ಮಾಡುತ್ತದೆ. ನಿಮಗೆ ನೀಡುವುದಿಲ್ಲ ಎನ್ನುತ್ತಿದ್ದಾರೆ ಎಂದು ಹಲವು ಸಮೀಕ್ಷಕರು ಹೇಳುತ್ತಿದ್ದಾರೆ' ಎಂದು ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮೇಲ್ವಿಚಾರಕರೊಬ್ಬರು ವಿವರಿಸಿದರು.

ಬೆಂಗಳೂರಿನ ಶ್ರೀರಾಮಪುರ ವ್ಯಾಪ್ತಿಯ ನಿವಾಸಿಯೊಬ್ಬರು ಸಮೀಕ್ಷಕರಿಗೆ ಮಾಹಿತಿ ನೀಡಿದರು ಪ್ರಜಾವಾಣಿ ಚಿತ್ರ

'ಬಿಪಿಎಲ್ ರದ್ದಾಗುತ್ತದೆಂದು ಅಪಪ್ರಚಾರ'

ಪರಿಶೀಲನೆಗೆ ಆಯ್ಕೆಮಾಡಲಾದ ಈ 19 ಬ್ಲಾಕ್‌ಗಳ ಪೈಕಿ, ಮೂರರಲ್ಲಿ ದೊಡ್ಡ-ದೊಡ್ಡ ಕೊಳೆಗೇರಿಗಳಿವೆ. ಇಲ್ಲಿಯ ನಿವಾಸಿಗಳೂ ಸಮೀಕ್ಷೆಗೆ ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂದು ಸಮೀಕ್ಷಕರು ತಿಳಿಸಿದರು.

'ಈ ಕೊಳೆಗೇರಿಗಳಲ್ಲಿ ಬಹುಪಾಲು ಮಂದಿ ಪರಿಶಿಷ್ಟ ಜಾತಿಯವರೇ ಇದ್ದಾರೆ. ಒಳಮೀಸಲಾತಿ ಸಂಬಂಧ ನಡೆದ ಸಮೀಕ್ಷೆಗೆ ಇಲ್ಲಿನ ನಿವಾಸಿಗಳು ಮಾಹಿತಿ ನೀಡಿದ್ದರು. ಆದರೆ ಈಗ ಮಾಹಿತಿ ನೀಡುತ್ತಿಲ್ಲ. ಏಕೆಂದು ಕೇಳಿದರೆ, 'ಇದಕ್ಕೆ ಮಾಹಿತಿ ನೀಡಿದರೆ ನಮ್ಮ ಬಿಪಿಎಲ್ ಕಾರ್ಡ್ ರದ್ದಾಗುತ್ತದೆಯಂತೆ. ಹೀಗಾಗಿ ನೀಡುವುದಿಲ್ಲ' ಎನ್ನುತ್ತಿದ್ದಾರೆ' ಎಂದು ರಾಜರಾಜೇಶ್ವರಿನಗರ ವ್ಯಾಪ್ತಿಯ ಸಮೀಕ್ಷಕರೊಬ್ಬರು ಮಾಹಿತಿ ನೀಡಿದರು.

ಸಮೀಕ್ಷೆಗೆ ಮಾಹಿತಿ ನೀಡಿದರೆ ಬಿಪಿಎಲ್ ಕಾರ್ಡ್ ರದ್ದಾಗುತ್ತದೆ ಎಂದು ಸುಳ್ಳು ಮಾಹಿತಿ ಹಬ್ಬಿಸಲಾಗಿದೆ. ಈ ಕಾರಣದಿಂದ ನಮಗೆ ಸಮೀಕ್ಷೆ ನಡೆಸಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಜನರಿಗೆ ಸರಿಯಾದ ಮಾಹಿತಿ ನೀಡಲು ಸರ್ಕಾರ ತಿಳಿಸಿ ಎಂದು ಜಿಬಿಎ ವ್ಯಾಪ್ತಿಯ ಹಲವು ಕಂದಾಯ ಅಧಿಕಾರಿಗಳಿಗೆ (ಆರ್‌ಒ) ಸಮೀಕ್ಷಕರು, ಸಮೀಕ್ಷಾ ಮೇಲ್ವಿಚಾರಕರು ಲಿಖಿತವಾಗಿ ಮನವಿ ಸಲ್ಲಿಸಿದ್ದಾರೆ.

ಸಮೀಕ್ಷೆ: ಅಂಗನವಾಡಿ ಕಾರ್ಯಕರ್ತೆಯರ ಅಳಲು

ಸಂಭಾವನೆ ನೀಡದೆ ನಿಯೋಜನೆ

• ನಾಗರಾಜ್ ಬಿ.ಎನ್.

> ಸರ್ಕಾರ ಸೂಚಿಸಿದ ಕೆಲಸ ಮಾಡಲು ಸಿದ್ಧರಿದ್ದೇವೆ. ಸಮೀಕ್ಷೆಗೆ ನಿಯೋಜಿತರಾದ ಶಿಕ್ಷಕರಿಗೆ ಗೌರವ ಸಂಭಾವನೆ ನೀಡಿದಂತೆ ನೀಡಬೇಕು
> **ಸುನಂದಾ ಎಸ್.ಎಚ್.,** ಪ್ರಧಾನ ಕಾರ್ಯದರ್ಶಿ, ಅಂಗನವಾಡಿ ನೌಕರರ ಸಂಘ

> ಅಂಗನವಾಡಿ ಕಾರ್ಯಕರ್ತೆಯರನ್ನು ಸಮೀಕ್ಷೆಗೆ ನಿಯೋಜಿಸಿಕೊಳ್ಳಲಾಗಿದೆ. ಅವರಿಗೆ ಯಾವ ರೀತಿ ಗೌರವ ಸಂಭಾವನೆ ನೀಡಬೇಕು ಎಂಬ ಕುರಿತು ಪರಿಶೀಲಿಸಲಾಗುವುದು
> **ರುದ್ರೇಶ ಘಾಳಿ,** ಸಮೀಕ್ಷಾ ಉಸ್ತುವಾರಿ

ಹುಬ್ಬಳ್ಳಿ: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಗೌರವ ಸಂಭಾವನೆ ಮತ್ತು ಸೂಕ್ತ ತರಬೇತಿ ನೀಡದೆ ನಿಯೋಜಿಸಿರುವುದಕ್ಕೆ ಅಂಗನವಾಡಿ ಕಾರ್ಯಕರ್ತೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಸ್ಎಸ್ಎಲ್‌ಸಿ, ಪಿಯುಸಿ ಮುಗಿಸಿರುವ 20 ಸಾವಿರ ಅಂಗನವಾಡಿ ಕಾರ್ಯಕರ್ತೆಯರನ್ನು ಸಮೀಕ್ಷೆಗೆ ಬಳಸಲಾಗಿದೆ. ಈಗ ನಿಯೋಜನೆಗೊಂಡಿರುವ ಶಿಕ್ಷಕರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುವ ಜತೆಗೆ, ಸಮೀಕ್ಷೆ ನಡೆಸಿದ ಮನೆಗಳ ಪುನರ್ ಪರಿಶೀಲನೆ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ಕಾರ್ಯಕರ್ತೆಯರನ್ನು ಸಮೀಕ್ಷೆಗೆ ನಿಯೋಜನೆ ಕುರಿತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಆದೇಶ ಬಂದಿಲ್ಲ. ಕೆಲ ತಾಲ್ಲೂಕುಗಳಲ್ಲಿ ತಹಶೀಲ್ದಾರ್‌ಗಳು ಮಾತ್ರ ಆದೇಶ ಹೊರಡಿಸಿದ್ದು, ಗೌರವ ಸಂಭಾವನೆ ನೀಡುವ ಕುರಿತು ತಿಳಿಸಿಲ್ಲ.

'ಕೆಲಸಕ್ಕೆ ತಕ್ಕಂತೆ ಸಂಭಾವನೆ ನೀಡಿದರೆ ಅನುಕೂಲ. ಐದು, ಹತ್ತು ಸಾವಿರಕ್ಕೆ ಅಂಗನವಾಡಿಗಳಲ್ಲಿ ದುಡಿಯುವ ನಾವು, ಸಮೀಕ್ಷೆಗೆ ಬೆಳಿಗ್ಗೆಯಿಂದ ಸಂಜೆವರೆಗೆ ಮನೆಮನೆಗೆ ಓಡಾಡಬೇಕು. ಭಾನುವಾರವೂ ರಜೆ ಪಡೆಯುವ ಹಾಗಿಲ್ಲ' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ಬೇಸರ ವ್ಯಕ್ತಪಡಿಸಿದರು.

'ನಿಗದಿತ ಅವಧಿಯಲ್ಲಿ ಸಮೀಕ್ಷೆ ಮುಗಿಯದ್ದಕ್ಕೆ ಏಕಾಏಕಿ, ಕಾರ್ಯಕರ್ತೆಯರನ್ನು ನಿಯೋಜಿಸಿದ್ದಾರೆ. ರಾಯಚೂರಿನಲ್ಲಿ ಆಕ್ಷೇಪಿಸಿದ್ದ ಐವರು ಕಾರ್ಯಕರ್ತೆಯರನ್ನು ಅಮಾನತು ಮಾಡಲಾಗಿತ್ತು. ತರಬೇತಿ, ಗೌರವ ಸಂಭಾವನೆ ನೀಡದೆ ಸಮೀಕ್ಷೆ ಮಾಡುವಂತೆ ಸೂಚಿಸಿದ್ದು ಸರಿಯಲ್ಲ' ಎಂದು ಅಂಗನವಾಡಿ ನೌಕರರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸುನಂದಾ ಎಸ್.ಎಚ್., ಹೇಳಿದರು.

ಮಾಜಿ ದೇವದಾಸಿಯರ ಮರು ಸಮೀಕ್ಷೆ ಸಮಾಲೋಚನಾ ಸಭೆ ಹೊಸಪೇಟೆಯಲ್ಲಿ ನಡೆಯಿತು ಪ್ರಜಾವಾಣಿ ಚಿತ್ರ

ಮರುಸಮೀಕ್ಷೆ: ಅವಧಿ ವಿಸ್ತರಿಸಿ

ಮಾಜಿ ದೇವದಾಸಿಯರ ಸಮಾಲೋಚನಾ ಸಭೆಯಲ್ಲಿ ಒತ್ತಾಯ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಮಾಜಿ ದೇವದಾಸಿಯರ ಮರು ಸಮೀಕ್ಷೆ ಪೂರ್ಣಗೊಳಿಸಲು ಅ.24ರ ಗಡುವು ನೀಡಲಾಗಿದೆ. ಕೆಲ ಜಿಲ್ಲೆಗಳಲ್ಲಿ ದಾಖಲಾತಿ ಸಿಗುತ್ತಿಲ್ಲ. ಅವಧಿಯನ್ನು ಡಿಸೆಂಬರ್‌ವರೆಗೆ ವಿಸ್ತರಿಸಬೇಕು ಎಂದು ಇಲ್ಲಿ ನಡೆದ ರಾಜ್ಯಮಟ್ಟದ ಸಮಾಲೋಚನಾ ಸಭೆಯಲ್ಲಿ ಒತ್ತಾಯಿಸಲಾಯಿತು.

ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ- ಕರ್ನಾಟಕ, ಸಖಿ ಸಂಸ್ಥೆ ಹೊಸಪೇಟೆ ಸಹಯೋಗದಲ್ಲಿ ನಡೆದ ಸಭೆಯಲ್ಲಿ ಸಮೀಕ್ಷೆ ನಡೆಯುತ್ತಿರುವ 15 ಜಿಲ್ಲೆಗಳ ಪ್ರತಿನಿಧಿಗಳು ಇದ್ದರು.

ಸಮೀಕ್ಷೆ ವೇಳೆ ಕೇಳುತ್ತಿರುವ ದಾಖಲೆಗಳ ವಿಚಾರದಲ್ಲಿ ಏಕರೂಪತೆ ಇಲ್ಲ. ನೆಟ್‌ವರ್ಕ್ ಸಮಸ್ಯೆ ಇದೆ. ಕೆಲ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಸಮಿತಿಗೆ ಈ ಸಮೀಕ್ಷೆಯ ಬಗ್ಗೆ ಯಾವುದೇ ಮಾಹಿತಿ ತಲುಪಿಲ್ಲ ಮತ್ತು ಸಮೀಕ್ಷೆಯ ಬಗ್ಗೆ ಸಭೆಯನ್ನು ಕೂಡಾ ಮಾಡಿಲ್ಲ ಎಂದು ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ (ಎನ್ಎಲ್ಎಸ್‌ಯು) ಪ್ರೊ.ಆರ್. ವಿ.ಚಂದ್ರಶೇಖರ 'ಪ್ರಜಾವಾಣಿ'ಗೆ ತಿಳಿಸಿದರು. ಸಮೀಕ್ಷಕರಿಗೆ ಸಮಗ್ರ ತರಬೇತಿ ನೀಡಬೇಕು. ಹೀಗಾಗಿ ಗಡುವು ವಿಸ್ತರಿಸಿ ಎಲ್ಲ ಮಾಜಿ ದೇವದಾಸಿಯರ ಕುಟುಂಬಗಳ ಸಮೀಕ್ಷೆ ಸಮಗ್ರವಾಗಿ ಆಗುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

'ಸಿಎಂ ದುರ್ಬಲ ಎಂದು ಗೊತ್ತಿರಲಿಲ್ಲ'

ತುಮಕೂರು: 'ಕುರುಬರನ್ನು ಎಸ್.ಟಿ ಪಟ್ಟಿಗೆ ಸೇರಿಸುತ್ತೇವೆ' ಎಂಬ ಸ್ಥಿತಿಗೆ ಸಿದ್ದರಾಮಯ್ಯ ಬರುತ್ತಾರೆ, ಅವರು ಇಷ್ಟೊಂದು ದುರ್ಬಲರು ಎಂದು ಭಾವಿಸಿರಲಿಲ್ಲ' ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಭಾನುವಾರ ಹೇಳಿದರು.

ಇಲ್ಲಿ 'ವ್ಯವಸ್ಥೆ ಸುಧಾರಣೆಯಲ್ಲಿ ನಮ್ಮ ಪಾತ್ರ' ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಜಾತಿ ಸೋಂಕು ಅತಿಯಾಗುತ್ತಿದೆ. 'ಲಿಂಗಾಯತರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಎಂದು ನಾವೂ ಮಾತನಾಡುವುದು ಅನಿವಾರ್ಯ. ಇಲ್ಲದಿದ್ದರೆ ಉಳಿಗಾಲವಿಲ್ಲ' ಎಂದರು.

ಭಕ್ತರ ಸಾಲು...

ಪ್ರಜಾವಾಣಿ ಚಿತ್ರ: ಅತೀಖುರ್ ರಹಮಾನ್

ಹಾಸನದಲ್ಲಿ ಹಾಸನಾಂಬ ದೇವಿಯ ದರ್ಶನಕ್ಕಾಗಿ ಭಾನುವಾರ ಅಪಾರ ಸಂಖ್ಯೆಯ ಭಕ್ತರು ಸರದಿ ಸಾಲಿನಲ್ಲಿ ಬಂದರು

'ಗುತ್ತಿಗೆದಾರರಿಗಾಗಿ ವಿದ್ಯುತ್ ಪಂಪ್ಡ್ ಸ್ಟೋರೇಜ್ ಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿದಾರರಿಗೆ ಅನುಕೂಲ ಮಾಡಿಕೊಡಲೆಂದೇ ಶರಾವತಿ ಮತ್ತು ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಪರಿಸರ ಹೋರಾಟಗಾರ ಅಖಿಲೇಶ್ ಚಿಪ್ಲಿ ಆರೋಪಿಸಿದರು.

ನಗರದಲ್ಲಿ ಭಾನುವಾರ ನಡೆದ 'ಪಶ್ಚಿಮ ಘಟ್ಟಗಳನ್ನು ಉಳಿಸಿ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರ ಅರಣ್ಯ, ಪರಿಸರ ಮತ್ತು ವನ್ಯಜೀವಿ ಸಚಿವಾಲಯದಿಂದ ಅನುಮತಿ ಸಿಕ್ಕಿಲ್ಲ. ಈ ಅನುಮತಿಗಾಗಿ ರಾಜ್ಯ ಸರ್ಕಾರವು ಈ ವರ್ಷದ ಜನವರಿಯಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಆದರೆ, 2024ರಲ್ಲಿಯೇ ಆಂಧ್ರಪ್ರದೇಶದ 'ಮೇಘಾ ಎಂಜಿನಿಯರಿಂಗ್ ವರ್ಕ್ಸ್' ಎಂಬ ಕಂಪನಿಗೆ ಟೆಂಡರ್ ಆಗಿದೆ ಎಂದು ಹೇಳಿದರು.

ಬ್ಯಾಟರಿ ಸ್ಟೋರೇಜ್ ಎನರ್ಜಿ ಸಿಸ್ಟಂ ಮೂಲಕ ಎಲ್ಲಿ ಬೇಕಾದರೂ ವಿದ್ಯುತ್ ಸ್ಟೋರೇಜ್ ಮಾಡಲು ಅವಕಾಶವಿದೆ. ಆದರೂ ಪಶ್ಚಿಮ ಘಟ್ಟದ ಸಂರಕ್ಷಿತ ಪ್ರದೇಶದಲ್ಲಿ ಶರಾವತಿ ಮತ್ತು ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ಅನುಷ್ಠಾನ ಮಾಡಲು ಸರ್ಕಾರ ಹೊರಟಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಗುಂಡಿಬೈಲು, ಹೆನ್ನಿ, ಹಿರೇಹೆನ್ನಿ ಮುಂತಾದ ಪ್ರದೇಶಗಳಲ್ಲಿ 350ಕ್ಕೂ ಅಧಿಕ ಕುಟುಂಬಗಳು ಯಾವುದೇ ಹಕ್ಕುಪತ್ರ ಇಲ್ಲದೇ ಬಹಳ ವರ್ಷಗಳಿಂದ ಬದುಕುತ್ತಿವೆ. ಈ ಪಂಪ್ಡ್ ಸ್ಟೋರೇಜ್ ಯೋಜನೆಯಡಿ ಈ ಕುಟುಂಬಗಳನ್ನು ಕೂಡ ಒಕ್ಕಲೆಬ್ಬಿಸಲಾಗುತ್ತದೆ. ಆದರೆ, ಹಕ್ಕುಪತ್ರ ಇಲ್ಲದೇ ಇರುವುದರಿಂದ ಇವರಿಗೆ ಯಾವುದೇ ಪರಿಹಾರ ಸಿಗುವುದಿಲ್ಲ ಎಂದು ಹೇಳಿದರು.

1,800 ಟನ್ ಸ್ಫೋಟಕಗಳನ್ನು ಬಳಸಿ ಇಲ್ಲಿ ಸುರಂಗಗಳನ್ನು ನಿರ್ಮಿಸಲಾಗುತ್ತಿದೆ. ಗುರುತ್ವಾಕರ್ಷಣೆಗೆ ವಿರುದ್ಧವಾಗಿ ನೀರನ್ನು ಮೇಲಕ್ಕೆ ಹರಿಸಬೇಕಿರುವುದರಿಂದ ಉತ್ಪಾದನೆಗಿಂತ ಶೇ 25ರಷ್ಟು ಅಧಿಕ ವಿದ್ಯುತ್ ಇಲ್ಲಿ ವ್ಯಯವಾಗಲಿದೆ ಎಂದು ವಿವರಿಸಿದರು.

ಪರಿಸರವಾದಿ ಶಂಕರ್ ಶರ್ಮ ಮಾತನಾಡಿ, 'ಈ ಯೋಜನೆ ಕುರಿತು ತಯಾರಿಸಿದ ವಿಸ್ತೃತ ಯೋಜನಾ ವರದಿಯು ಹಸಿ ಸುಳ್ಳುಗಳಿಂದ ಕೂಡಿದೆ. ಮಾಡಲೇಬೇಕಾದ ಯೋಜನೆ ಎಂದು ಎಲ್ಲಿಯೂ ಹೇಳಿಲ್ಲ. ಈ ಯೋಜನೆಗಾಗಿ 400 ಎಕರೆ ಕಾಡು ಕಡಿಯಬೇಕಾಗುತ್ತದೆ ಎಂಬುದನ್ನು ಹೇಳಿದ್ದಾರೆ. ವಿನಾಶದ ಅಂಚಿನಲ್ಲಿರುವ ಸಿಂಹಬಾಲದ ಸಿಂಗಲೀಕ ಸಹಿತ ಅನೇಕ ಜೀವಜಂತುಗಳು ನಾಶವಾಗಲಿವೆ. ಹಾಗಾಗಿ ಈ ಯೋಜನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿದರು. ಪರಿಸರ ಹೋರಾಟಗಾರ ಜೋಸೆಫ್ ಹೂವರ್ ಉಪಸ್ಥಿತರಿದ್ದರು.

5 ದಿನ ಪುಸ್ತಕ ಮೇಳಕ್ಕೆ ₹4.50 ಕೋಟಿ ವೆಚ್ಚ

ಒಂದನೇ ಪುಟದಿಂದ...

ಈ ಸಂಸ್ಥೆಗಳಿಗೆ ಮೇಳ ನಡೆದ ಎಲ್ಲ ಐದೂ ದಿನ ಸಚಿವಾಲಯದ ವತಿಯಿಂದ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು.

ಮೇಳಕ್ಕೆ ಬಂದ ಇತರ ರಾಜ್ಯಗಳು ಮತ್ತು ವಿವಿಧ ಜಿಲ್ಲೆಗಳಿಂದ ಬಂದಿದ್ದ ವಿಶೇಷ ಆಹ್ವಾನಿತರು, ಸಂವಾದಕರು, ಕವಿಗಳು ಮತ್ತು ಕಲಾವಿದರಿಗೆ ಹೊಸ ಕುಮಾರಕೃಪ ಅತಿಥಿಗೃಹದಲ್ಲಿ ವಿಧಾನಸಭೆ ಸಚಿವಾಲಯದ ವತಿಯಿಂದ ವಾಸ್ತವ್ಯಕ್ಕೆ ಕೊಠಡಿ ಮತ್ತು ಊಟೋಪಾಚಾರ ವ್ಯವಸ್ಥೆ ಮಾಡಲಾಗಿತ್ತು. ವಾಸ್ತವ್ಯಕ್ಕೆ ₹33 ಸಾವಿರ, ಊಟೋಪಾಚಾರಕ್ಕೆ ₹8,943 ಅನ್ನು ಸಚಿವಾಲಯವು ಪಾವತಿಸಿದೆ.

ಮೇಳಕ್ಕೆ ಮಳಿಗೆಗಳ ನಿರ್ಮಾಣ, ಅದಕ್ಕೆ ಅಗತ್ಯವಾದ ಎಲ್ಲ ವ್ಯವಸ್ಥೆ ಸೇರಿದಂತೆ ರೂಪುರೇಷೆ ಸಿದ್ಧಪಡಿಸಿ ನೀಡಲು ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯಾದ ಲಾಫಿಂಗ್ ವಾಟರ್ ಪ್ರೊಡಕ್ಷನ್ ಪ್ರೈವೆಟ್ ಲಿಮಿಟೆಡ್‌ಗೆ ವಹಿಸಲಾಗಿತ್ತು. ಟೆಂಡರ್ ಆಹ್ವಾನಿಸಲು ಸಮಯದ ಅಭಾವದ ಕಾರಣಕ್ಕೆ ಕೆಟಿಪಿಪಿ ಕಾಯ್ದೆ 4 ಜಿಯಡಿ ವಿನಾಯಿತಿ ನೀಡಲಾಗಿತ್ತು. ಈ ಸಂಸ್ಥೆಯು ₹1.18 ಕೋಟಿ (ಜಿಎಸ್‌ಟಿ ಸೇರಿ) ವೆಚ್ಚವಾಗಲಿದೆ ಎಂದು ದರ ಪಟ್ಟಿ ನೀಡಿತ್ತು. ಆ ಬಳಿಕ, ಪ್ರತಿದಿನ 1,500 ಜನರಿಗೆ ಬೆಳಿಗ್ಗೆ ಮತ್ತು ಸಂಜೆ ಲಘು ಉಪಾಹಾರ, ಮಧ್ಯಾಹ್ನ ಲಘು ಭೋಜನ, ಗಣ್ಯರಿಗೆ ವಿಶೇಷ ನೆನಪಿನ ಕಾಣಿಕೆ ಒದಗಿಸುವುದು ಸೇರಿದಂತೆ ಹೆಚ್ಚುವರಿ ವ್ಯವಸ್ಥೆ ಒದಗಿಸಲು ಸೂಚನೆ ನೀಡಲಾಗಿತ್ತು. ಹೀಗಾಗಿ, ಒಟ್ಟು ₹1.56 ಕೋಟಿಯ ಬಿಲ್ ಅನ್ನು ಈ ಸಂಸ್ಥೆಯು ಸಚಿವಾಲಯಕ್ಕೆ ಸಲ್ಲಿಸಿತ್ತು. ಅಷ್ಟೂ ಮೊತ್ತವನ್ನು ಪಾವತಿಸಲಾಗಿದೆ.

ಇಡೀ ವಿಧಾನಸೌಧ ಕಟ್ಟಡಕ್ಕೆ ಈ ಐದೂ ದಿನ ವಿಶೇಷ ದೀಪಾಲಂಕಾರ ವ್ಯವಸ್ಥೆ ಮಾಡಲು ಮಂಡ್ಯ ಜಿಲ್ಲೆ ಮದ್ದೂರಿನ ಶಿವ ಎಲೆಕ್ಟ್ರಿಕಲ್ ಆ್ಯಂಡ್ ಎಂಟರ್‌ಪ್ರೈಸಸ್‌ಗೆ ಗುತ್ತಿಗೆ ನೀಡಲಾಗಿತ್ತು. ಈ ಸಂಸ್ಥೆ ಸಲ್ಲಿಸಿದ್ದ ಬಿಲ್ ಮೊತ್ತ ₹21.34 ಲಕ್ಷ ಪಾವತಿಸಲಾಗಿದೆ. ಮೇಳಕ್ಕೆ ಪ್ರಚಾರ ನೀಡುವ ಉದ್ದೇಶದಿಂದ ಜಾಹೀರಾತುಗಳಿಗೆ ₹31.59 ಲಕ್ಷ ವೆಚ್ಚ ಮಾಡಲಾಗಿದೆ. ಈ ಪೈಕಿ, ಇನ್‌ಸ್ಟಾಗ್ರಾಂ, ಫೇಸ್ ಬುಕ್, ಯೂ ಟ್ಯೂಬ್ ಸೇರಿದಂತೆ 15 ಸಾಮಾಜಿಕ ಜಾಲ ತಾಣಗಳ ಮೂಲಕ ಪ್ರಚಾರದ ವಿಡಿಯೊಗಳಿಗೆ ಸಚಿವಾಲಯದಿಂದ ₹10 ಲಕ್ಷ ಭರಿಸಲಾಗಿದೆ.

ಮೇಳದ ಮೊದಲ ದಿನ 10 ಕಲಾವಿದರೊಂದಿಗೆ ನೀಡಿದ್ದ ಅರ್ಧ ಗಂಟೆ ಅವಧಿಯ ಕಥಕ್ ನೃತ್ಯ ಕಾರ್ಯಕ್ರಮಕ್ಕೆ ₹1 ಲಕ್ಷ ಗೌರವ ಸಂಭಾವನೆ ನೀಡುವಂತೆ ಮಾನಸ ಜೋಶಿ ಆರ್ಟ್ಸ್ ಫೌಂಡೇಷನ್ ಕೇಳಿತ್ತು. ಸಚಿವಾಲಯವು ₹2 ಸಾವಿರ ಕಡಿತಗೊಳಿಸಿ ₹98 ಸಾವಿರ ಪಾವತಿಸಿದೆ. ಎಂಟು ಕಲಾವಿದರ ಜೊತೆಗೆ ಒಂದು ಗಂಟೆ ಅವಧಿಯ ಸ್ಯಾಕ್ಸೊಫೋನ್ ಕಛೇರಿ ನೀಡಿದ್ದ ಉಡುಪಿಯ ಶಿವಪುರದ ತಂಡಕ್ಕೆ ₹98 ಸಾವಿರ ಪಾವತಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಾದ್ಯ ಸಂಗೀತ, ಸುಗಮ ಸಂಗೀತ, ಜನಪದ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಕಲಾ ತಂಡಗಳಿಗೆ ಗೌರವ ಸಂಭಾವನೆ ಪಾವತಿಸಲು ಒಟ್ಟು ₹3.75 ಲಕ್ಷವನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಬ್ಯಾಂಕ್ ಖಾತೆಗೆ ವರ್ಗಾಯಿಸುವಂತೆ ಸಚಿವಾಲಯಕ್ಕೆ ಇಲಾಖೆಯ ನಿರ್ದೇಶಕರು ಪತ್ರ ಬರೆದಿದ್ದರು. ಅದರಂತೆ ಹಣ ಪಾವತಿಸಲಾಗಿದೆ.

ಎಫ್‌ಐಆರ್ ದಾಖಲು

ಮೈಸೂರು: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರತ್ತ ಮೇಲೆ ಶೂ ತೂರಿದ್ದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಲಕ್ಷ್ಮೀಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. 'ಘಟನೆಯಿಂದ ನ್ಯಾಯಾಂಗದ ಗೌರವಕ್ಕೆ ಧಕ್ಕೆಯಾಗಿದೆ. ವಕೀಲರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ನಗರದ ವಕೀಲ ಎನ್.ಪುನೀತ್ ದೂರು ನೀಡಿದ್ದರು.

ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಯೋಜನೆ

ಆನ್‌ಲೈನ್ ಉದ್ಯೋಗ ವಿನಿಮಯ ಕೇಂದ್ರ

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದಲ್ಲಿನ ಲಕ್ಷಾಂತರ ಮಂದಿ ಉದ್ಯೋಗ ಆಕಾಂಕ್ಷಿಗಳು ಮತ್ತು ಕಂಪನಿಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು 'ಆನ್‌ಲೈನ್ ಉದ್ಯೋಗ ವಿನಿಮಯ' ಕೇಂದ್ರವನ್ನು ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಆರಂಭಿಸಲಿದೆ.

ಉದ್ಯೋಗ ಆಕಾಂಕ್ಷಿಗಳು ಆನ್‌ಲೈನ್ ಮೂಲಕ ತಮ್ಮ ವಿದ್ಯಾರ್ಹತೆ, ಕೌಶಲ, ಉದ್ಯೋಗ ಬಯಸುತ್ತಿರುವ ಕ್ಷೇತ್ರ ಇತ್ಯಾದಿ ವಿವರ ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಇದಾದ ಬಳಿಕ ವಿನಿಮಯ ಕೇಂದ್ರದ ಮೂಲಕ ಅವರು ನೀಡಿರುವ ಮಾಹಿತಿ ಸರಿ ಇದೆಯೋ, ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಮಾಹಿತಿ ಸರಿ ಇದ್ದವರ ವಿವರಗಳನ್ನು ಸಂಬಂಧಪಟ್ಟ ಕಂಪನಿಗಳಿಗೆ ಕಳುಹಿಸಲಾಗುತ್ತದೆ.

ಅದೇ ರೀತಿ ಯಾವ ಕಂಪನಿಯಲ್ಲಿ ಉದ್ಯೋಗ ಲಭ್ಯವಿದೆ. ಅದಕ್ಕೆ ಬೇಕಾದ ವಿದ್ಯಾರ್ಹತೆ, ಕೌಶಲ, ಅನುಭವ ಇತ್ಯಾದಿ ವಿವರಗಳನ್ನು ವಿನಿಮಯ ಕೇಂದ್ರದ ಮೂಲಕ ಉದ್ಯೋಗ ಆಕಾಂಕ್ಷಿಗಳಿಗೆ ನೀಡಲಾಗುತ್ತದೆ. ಇದರ ಮುಖ್ಯ ಉದ್ದೇಶ ಉದ್ಯೋಗದ ಹೆಸರಿನಲ್ಲಿ ನಡೆಯುವ ವಂಚನೆಯನ್ನು ತಡೆಯುವುದು, ಉದ್ಯೋಗ ಆಕಾಂಕ್ಷಿಗಳಿಗೆ ಮತ್ತು ಉದ್ಯೋಗ ದಾತರಿಗೆ ನೆರವಾಗುವುದಾಗಿದೆ ಎಂದು ಇಲಾಖೆಯ ಕಾರ್ಯದರ್ಶಿ ಮನೋಜ್‌ಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

'ಧಾರವಾಡದಲ್ಲಿ ಪ್ರಾಯೋಗಿಕವಾಗಿ ಮಾಡಿದ ಆನ್‌ಲೈನ್ ಉದ್ಯೋಗ ಮೇಳ ಯಶಸ್ವಿಯಾಗಿದ್ದು, 300 ರಿಂದ 400 ಮಂದಿಗೆ ಉದ್ಯೋಗ ಸಿಕ್ಕಿದೆ. ಇದರಿಂದ ಉತ್ತೇಜನಗೊಂಡು ಕಾಯಂ ಆಗಿ ಆನ್‌ಲೈನ್ ಉದ್ಯೋಗ ಮೇಳ ನಡೆಸಲು ನಿರ್ಧರಿಸಲಾಗಿದೆ. ಯಾವ ಭಾಗದಲ್ಲಿ ಯಾವ ಕೈಗಾರಿಕೆಗಳು, ಕಂಪನಿಗಳು ಇವೆ. ಅಲ್ಲಿರುವ ಉದ್ಯೋಗ ಅವಕಾಶಗಳು, ಸೌಲಭ್ಯಗಳು, ಸೇವಾ ಭದ್ರತೆ ಇತ್ಯಾದಿ ಮಾಹಿತಿಗಳು ದೊರೆಯುವಂತೆ ಮಾಡುತ್ತೇವೆ' ಎಂದು ಅವರು ವಿವರಿಸಿದರು.

ಶಿಕ್ಷಣ ಸಂಸ್ಥೆಗಳು ಮತ್ತು ಅದಕ್ಕೆ ಹತ್ತಿರದಲ್ಲೇ ಇರುವ ಕೈಗಾರಿಕೆ ಅಥವಾ ಕಂಪನಿಯ ಮ್ಯಾಪ್ ಸಿದ್ಧಪಡಿಸಲಾಗುತ್ತದೆ. ಇದರಿಂದ ವ್ಯಾಸಂಗದ ಬಳಿಕ ಹತ್ತಿರದಲ್ಲೇ ಯಾವ ಕಂಪನಿಯಲ್ಲಿ ಉದ್ಯೋಗಕ್ಕೆ ಪ್ರಯತ್ನಿಸಬಹುದು ಎಂದು ವಿದ್ಯಾರ್ಥಿಗಳಿಗೆ ಗೊತ್ತಾಗಲಿದೆ. ಅಲ್ಲದೆ ಕಂಪನಿಗಳಿಗೂ ಸಹ ಸಮೀಪದಲ್ಲೇ ಯಾವ ಶಿಕ್ಷಣ ಸಂಸ್ಥೆ ಇದೆ, ಅಲ್ಲಿ ನಮಗೆ ಬೇಕಾದ ಕೌಶಲವುಳ್ಳವರು ದೊರೆಯಲಿದ್ದಾರೆಯೇ ಎಂದು ತಿಳಿಯಲು ಅನುಕೂಲವಾಗಲಿದೆ.

ಉದ್ಯೋಗ ಆಕಾಂಕ್ಷಿಗಳ ಅನುಭವ, ವಿದ್ಯಾರ್ಹತೆಯ ದಾಖಲೆಗಳು ಮತ್ತು ಕಂಪನಿಯ ನೈಜತೆ ಬಗ್ಗೆ ತಿಳಿಸಿಕೊಡುವ ಕೆಲಸವನ್ನು ಕೇಂದ್ರವು ಮಾಡಲಿದೆ. ಇದಾದ ಬಳಿಕ ಸಂಬಂಧಪಟ್ಟ ಕಂಪನಿ ನೇರವಾಗಿ ಅಭ್ಯರ್ಥಿಯ ಸಂದರ್ಶನ ನಡೆಸಿ ಉದ್ಯೋಗಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಮಾಡಲಿದೆ ಎಂದು ತಿಳಿಸಿದರು.

ಅಂತರರಾಷ್ಟ್ರೀಯ ಉದ್ಯೋಗ ಮೇಳ

2026ರ ಜನವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಉದ್ಯೋಗ ಮೇಳ ಆಯೋಜಿಸಲಾಗುತ್ತದೆ. ಜಪಾನ್, ಜರ್ಮನಿ ಸೇರಿದಂತೆ ಬೇರೆ ಬೇರೆ ರಾಷ್ಟ್ರಗಳ ಕಾನ್ಸುಲೇಟ್‌ಗಳ ಜೊತೆ ಮಾತುಕತೆ ನಡೆಸಿದ ಬಳಿಕ ಇದಕ್ಕೆ ಅಂತಿಮ ರೂಪ ನೀಡಲಾಗುವುದು ಎಂದು ಮನೋಜ್‌ಕುಮಾರ್ ಮೀನಾ ತಿಳಿಸಿದರು.

ನರ್ಸಿಂಗ್, ಐಟಿಐ, ಡಿಪ್ಲೊಮಾ ಮಾಡಿದವರಿಗೆ ವಿದೇಶಗಳಲ್ಲಿ ಬೇಡಿಕೆ ಇದೆ. ನಮ್ಮಲ್ಲಿರುವ ಯುವಕ-ಯುವತಿಯರಿಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಉದ್ಯೋಗ ಅವಕಾಶಗಳು ಸಿಗಬೇಕು. ಮಧ್ಯವರ್ತಿಗಳ ಮೂಲಕ ಯಾವುದೇ ರೀತಿಯ ವಂಚನೆ ಆಗಬಾರದು ಎಂಬ ಉದ್ದೇಶದಿಂದ ಈ ಮೇಳ ಆಯೋಜಿಸಲಾಗುತ್ತಿದೆ ಎನ್ನುತ್ತಾರೆ ಮೀನಾ.

3 ದಿನ ಶೃಂಗ ಸಭೆ

ಮಾಹಿತಿ ತಂತ್ರಜ್ಞಾನ ಮೇಳದ ಮಾದರಿಯಲ್ಲೇ ನವೆಂಬರ್ 4, 5 ಮತ್ತು 6ರಂದು ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ಕೌಶಲ ಶೃಂಗ ಸಭೆ ಆಯೋಜಿಸಲಾಗುತ್ತದೆ. ನಾಲ್ಕರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದಕ್ಕೆ ಚಾಲನೆ ನೀಡಲಿದ್ದಾರೆ. ಇನ್ನು ಮುಂದೆ ಪ್ರತಿ ವರ್ಷ ಕೌಶಲ ಶೃಂಗ ಸಭೆ ಆಯೋಜಿಸಲು ನಿರ್ಧರಿಸಲಾಗಿದೆ. ಮುಂದಿನ 5–10 ವರ್ಷಗಳಲ್ಲಿ ಯಾವುದಕ್ಕೆ ಬೇಡಿಕೆ ಇರುತ್ತದೆ. ಅದಕ್ಕೆ ತಕ್ಕಂತೆ ಏನೆಲ್ಲ ಬದಲಾವಣೆಗಳು ಆಗಬೇಕು ಎಂಬ ಬಗ್ಗೆ ಚರ್ಚೆ ನಡೆಯಲಿದೆ.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಜೆಇ–1/ಟೆಂಡರ್/20/2025–26 ದಿನಾಂಕ: 09.10.2025
ಕೆ.ಪಿ.ಪಿ. ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ–ಲಕೋಟೆ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 5054/2023-24 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **17.10.2025 ರ ಸಂಜೆ 4.00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. (RDPR/2024-25/RD/WORK_INDENT13532/CALL-2, RDPR/2024-25/RD/WORK_INDENT13633/CALL-2 & RDPR/2024-25/RD/WORK_INDENT13613/CALL-2) ಕಾಮಗಾರಿದಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/3176/ಎಸ್‌ಎಸ್‌ಸಿ/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
ಯೋಜನೆ –3	ಬೆಂಜಮಂ/ಕಾನಿಅ (ಯೋಜನೆ–3)/ಪಿಬಿ/622/2025–26 ದಿನಾಂಕ: 09–10–2025	ರೂ.99,38,000/- / ರೂ.1,99,000/-	21-10-2025 ಸಂಜೆ 4.00 ಗಂಟೆಯವರೆಗೆ	23-10-2025 ಬೆಳಗ್ಗೆ 11.00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ–3).
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/AAPL/RO3200/25-26

ಭಾರತೀಯ ರೈಲ್ವೆ
ಸಾರ್ವಜನಿಕ ಅಧಿಸೂಚನೆ
ರೈಲು ಮಾರ್ಗಗಳು ಮತ್ತು ರೈಲ್ವೆ ಆವರಣದ ಎಲ್ಲ ಬಳಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ನೆಲೆಗೊಂಡಿರುವ ಕೆಳಕಂಡ ವಿಭಾಗಗಳಲ್ಲಿ 25,000 ವೋಲ್ಟ್ 50 Hz, ಎಸಿ, ಓವರ್‌ಹೆಡ್ ಎಳೆತವನ್ನು ಶಕ್ತಿಯುತಗೊಳಿಸಲಾಗಿದೆ ಮತ್ತು ಎಲ್ಲಾ ಸಮಯದಲ್ಲೂ ಲೈವ್ ಆಗಿ ಪರಿಗಣಿಸಲಾಗುವುದು. ಹೀಗಾಗಿ ಯಾವುದೇ ಅನಧಿಕೃತ ವ್ಯಕ್ತಿಗಳು ಮೇಲೆಹೇಳಲಾದ ಓವರ್‌ಹೆಡ್ ಲೈನ್ ಹತ್ತಿರ ಬರಬಾರದು ಹಾಗು ಅವುಗಳ ಸಮೀಪದಲ್ಲಿ ಕೆಲಸ ಮಾಡಬಾರದು ಎಂದು ಎಚ್ಚರಿಸಲಾಗಿದೆ.

ನಂ.	ವಿಭಾಗ	ದಿನಾಂಕ
1	ಸಕಲೇಶಪುರ (SKLR) (Km Ch 42/000) - ಸುಬ್ರಮಣ್ಯ ರೋಡ್ (SBHR) (Km Ch 98/000)	13.10.2025

25 ಕೆವಿ ಎ.ಸಿ ಟ್ರಾಕ್ಷನ್‌ನ ಅನಾವರಣ
ರಸ್ತೆ ಬಳಕೆದಾರರಿಗೆ ಎಚ್ಚರಿಕೆ
ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಈ ಕೆಳಗಿನ ಸೆಕ್ಷನ್‌ಗಳಲ್ಲಿ 25 ಕೆವಿ ಎಸಿ. ಎಲೆಕ್ಟ್ರಿಕ್ ಟ್ರಾಕ್ಷನ್ ಅನ್ನು ಅಳವಡಿಸುವ ಸಂಬಂಧ ರಸ್ತೆ ಮಟ್ಟದಿಂದ 4.78 ಮೀಟರ್ ಎತ್ತರದೊಂದಿಗೆ ಎಲ್ಲ ಲೆವೆಲ್‌ಕ್ರಾಸಿಂಗ್ ಗಳಲ್ಲಿ ಹೈಟ್ ಗೇಜ್ ಮಾಪಕಗಳನ್ನು ಸ್ಥಾಪಿಸಲಾಗಿದೆ ಎಂದು ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ತಿಳಿಸಲಾಗುತ್ತಿದೆ. ಲೆವೆಲ್ ಕ್ರಾಸಿಂಗ್ ಗಳಲ್ಲಿ ರೈಲು ಮಟ್ಟಕ್ಕಿಂತ ಕನಿಷ್ಟ 5.5 ಮೀ ಎತ್ತರದಲ್ಲಿರುವ ಲೈವ್ ಎಳೆತದ ತಂತಿಯ (ಕಾಂಟ್ಯಾಕ್ಟ್ ವೈರ್) ಸಂಪರ್ಕಕ್ಕೆ ಅಥವಾ ಅಪಾಯಕಾರಿ ಸಮೀಪಕ್ಕೆ ಬರದಂತೆ ಮಿತಿಮೀರಿದ ಎತ್ತರದ ಹೊರೆಗಳನ್ನು ತಡೆಗಟ್ಟುವ ದೃಷ್ಟಿಯಿಂದ ಅಳವಡಿಸಲಾಗುತ್ತಿದೆ

ನಂ.	ವಿಭಾಗ	ದಿನಾಂಕ
1	ಸಕಲೇಶಪುರ (SKLR) (Km Ch 42/000) - ಸುಬ್ರಮಣ್ಯ ರೋಡ್ (SBHR) (Km Ch 98/000)	13.10.2025

ವಾಹನಗಳನ್ನು ಲೋಡ್ ಮಾಡುವ ಉದ್ದೇಶಕ್ಕಾಗಿ ಮೇಲೆ ನಿರ್ದಿಷ್ಟಪಡಿಸಿದ ಎತ್ತರವನ್ನು ಗಮನಿಸಲು ಹೈಟ್‌ಗೇಜ್‌ಗಳನ್ನು ಮತ್ತು ರಸ್ತೆ ವಾಹನಗಳಲ್ಲಿ ಸಾಗಿಸುವ ಹೊರೆಗಳು ಯಾವುದೇ ಸಂದರ್ಭದಲ್ಲೂ ಉಲ್ಲಂಘಿಸದಂತೆ ನೋಡಿಕೊಳ್ಳಲು ಸಾರ್ವಜನಿಕರಿಗೆ ಈ ಮೂಲಕ ಸೂಚಿಸಲಾಗುತ್ತಿದೆ. ಅತಿಯಾದ ಎತ್ತರದ ಹೊರೆಯ ಅಪಾಯಗಳು ಈ ಕೆಳಗಿನಂತಿವೆ :
1. ಹೈಟ್‌ಗೇಜ್‌ಗೆ ಅಪಾಯ ಮತ್ತು ಪರಿಣಾಮವಾಗಿ ರಸ್ತೆ ಮತ್ತು ರೈಲು ಮಾರ್ಗಕ್ಕೆ ಅಡಚಣೆ.
2. ವಸ್ತುಗಳು ಅಥವಾ ಉಪಕರಣಗಳು ಅಥವಾ ವಾಹನಗಳಿಗೆ ಅಪಾಯ.
3. ವಾಹಕಗಳ ಸಂಪರ್ಕ ಅಥವಾ ಅಪಾಯಕಾರಿ ಸಾಮಿಪ್ಯದಿಂದಾಗಿ ಬೆಂಕಿಯ ಅಪಾಯ ಮತ್ತು ಜೀವಗಳಿಗೆ ಅಪಾಯ.
ಪ್ರಾಜೆಕ್ಟ್ ಇನ್ ಚಾರ್ಜ್
ಆರ್‌ಐಟಿಇಎಸ್ ಲಿಮಿಟೆಡ್

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು
ನಂ. ಆಇ 25 ಜಂ.ಕಾ(ಆ ಮತ್ತು ಸಂ) 2025 ಬೆಂಗಳೂರು, 13ನೇ ಅಕ್ಟೋಬರ್ 2025
ಪತ್ರಿಕಾ ಪ್ರಕಟಣೆ
ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2015, ದಿನಾಂಕ: 06ನೇ ನವೆಂಬರ್ 2015ರ ನಿಬಂಧನೆಯ ಮೇರೆಗೆ ಹೊರಡಿಸಲಾದ 8.14% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ದಿನಾಂಕ : 12ನೇ ನವೆಂಬರ್ 2025 ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 13ನೇ ನವೆಂಬರ್ 2025 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 13ನೇ ನವೆಂಬರ್ 2025 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.
2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ- ಬ್ಯಾಂಕಿಂಗ್ ಖಾತೆಯುನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.
3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 8.14% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.
"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ."
4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.
5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.
ಸಹಿ/– (ಡಾ.ಪಿ.ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/3212/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಹೊಟ್ಟೆಕಿಚ್ಚು ಎನ್ನುವುದು ಮನುಷ್ಯನ ಒಂದು ದುರ್ಗುಣ. ಅದನ್ನು ಆರಂಭದಲ್ಲೇ ನಾಶಪಡಿಸಬೇಕು.

–ಜವಾಹರಲಾಲ್ ನೆಹರೂ

ಸಂಪಾದಕೀಯ

ಲಾಲ್‌ಬಾಗ್ ಸುರಕ್ಷತೆ: ರಾಜಿ ಬೇಡ ಸುರಂಗ ರಸ್ತೆಗೆ ಪರ್ಯಾಯ ಹುಡುಕಲಿ

ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಎಂದು ರಾಜ್ಯ ಸರ್ಕಾರ ಬಿಂಬಿಸುತ್ತಿರುವ ಜೋಡಿ ಸುರಂಗ ರಸ್ತೆ ನಿರ್ಮಾಣ ಯೋಜನೆ, ಸಾರ್ವಜನಿಕ ಹಿತಾಸಕ್ತಿಯ ಜೊತೆಗೆ ಪರಿಸರ ಕಾಳಜಿಯೊಂದಿಗೂ ಮಾಡಿಕೊಳ್ಳುತ್ತಿರುವ ರಾಜಿಯಂತಿದೆ. ₹17,697 ಕೋಟಿ ವೆಚ್ಚದಲ್ಲಿ 16.69 ಕಿ.ಮೀ. ಉದ್ದದ ಜೋಡಿ ಸುರಂಗ ರಸ್ತೆ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ. ಪರಿಸರಸ್ನೇಹಿ ಹಾಗೂ ಸರ್ಕಾರದ ಖಜಾನೆಗೆ ಹೆಚ್ಚು ಭಾರವಾಗದ ಸಾಧ್ಯತೆಗಳನ್ನು ಯೋಚಿಸದೆ, ಸಾವಿರಾರು ಕೋಟಿ ರೂಪಾಯಿ ಯೋಜನೆಗಳನ್ನೇ ಅಭಿವೃದ್ಧಿಯ ಮಾದರಿಗಳನ್ನಾಗಿ ಬಿಂಬಿಸುವ ಪ್ರಯತ್ನ ಇದಾಗಿದೆ. ಉದ್ದೇಶಿತ ಯೋಜನೆಯಿಂದಾಗಿ, ಬೆಂಗಳೂರು ಮಹಾನಗರದ ಶ್ವಾಸಕೋಶದಂತಿರುವ ಲಾಲ್‌ಬಾಗ್ ಉದ್ಯಾನದ ಜೀವವೈವಿಧ್ಯಕ್ಕೆ ಹಾನಿಯಾಗುವ ಆತಂಕವನ್ನು ಪರಿಸರ ಪ್ರೇಮಿಗಳು ವ್ಯಕ್ತಪಡಿಸಿದ್ದಾರೆ. ರಾಜಧಾನಿಯಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಒಳಚರಂಡಿ ಮತ್ತು ರಾಜಕಾಲುವೆ ಮಾರ್ಗಗಳ ಮೇಲೆ ಉದ್ದೇಶಿತ ಸುರಂಗ ಮಾರ್ಗ ಉಂಟುಮಾಡಬಹುದಾದ ಪರಿಣಾಮ ಯಾವ ಬಗೆಯದೆನ್ನುವುದು ಸ್ಪಷ್ಟವಾಗಿಲ್ಲ. ಸುರಂಗ ಮಾರ್ಗಕ್ಕಾಗಿ ಪರಿಸರ ಪರಿಣಾಮ ಮೌಲ್ಯಮಾಪನ ನಡೆದಿಲ್ಲ; ಯೋಜನೆಯಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ ಎನ್ನುವ ಕಾರಣಕ್ಕಾಗಿ ಯೋಜನೆಯನ್ನು ಪ್ರಶ್ನಿಸಿ 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ'ಗೆ ದೂರು ಸಲ್ಲಿಕೆಯಾಗಿದೆ; ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೂ ಸಲ್ಲಿಕೆಯಾಗಿದೆ. ಇದರ ನಡುವೆಯೂ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಉತ್ಸುಕವಾಗಿದೆ.

ಜೋಡಿ ಸುರಂಗ ರಸ್ತೆ ಯೋಜನೆಗೆ ಕಳೆದ ಜುಲೈ 14ರಂದು ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಈ ಯೋಜನೆ ರೂಪಿಸಲಾಗಿದೆ ಎಂದು ಹೇಳುತ್ತಿರುವ ಸರ್ಕಾರ, ಸುಗಮ ಸಂಚಾರಕ್ಕಾಗಿ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸುವುದು ಅತ್ಯುತ್ತಮ ಪರಿಹಾರ ಎನ್ನುವ ವಿಶ್ವದ ಎಲ್ಲ ಮಹಾನಗರಗಳ ಅನುಭವದ ಪಾಠವನ್ನು ಕಡೆಗಣಿಸಿದೆ. ಪ್ರಸ್ತುತ ಬೆಂಗಳೂರಿನ ಜನಸಂಖ್ಯೆ ಸುಮಾರು 1.25 ಕೋಟಿಯಷ್ಟಿದ್ದು, ಜನರಿಗಿಂತಲೂ ಅಧಿಕ ಪ್ರಮಾಣದ ವಾಹನಗಳು ಮಹಾನಗರದಲ್ಲಿವೆ. ಈ ವಾಹನಗಳ ಬಳಕೆಯನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲು, ಸಾರ್ವಜನಿಕ ಸಾರಿಗೆಯನ್ನು ಬಲಪಡಿಸುವುದು ಅತ್ಯುತ್ತಮ ಮಾರ್ಗವಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳ ಜೊತೆಗೆ ಮೆಟ್ರೊ ರೈಲುಗಳ ಸಂಚಾರವನ್ನು ಮತ್ತಷ್ಟು ಬಲಪಡಿಸುವುದು ಹಾಗೂ ಜನಪ್ರಿಯಗೊಳಿಸುವುದು ಸರ್ಕಾರದ ಆದ್ಯತೆಯಾಗಬೇಕು. ದುರದೃಷ್ಟವಶಾತ್, ಕೊರೊನಾ ನಂತರದ ಅವಧಿಯಲ್ಲಿ ನಗರ ಸಾರಿಗೆ ಬಸ್‌ಗಳ ಸಂಪರ್ಕ ಜಾಲ ದುರ್ಬಲಗೊಂಡಿದೆ. 'ನಮ್ಮ ಮೆಟ್ರೋ' ರೈಲು ಪ್ರಯಾಣದರ ಜನಸಾಮಾನ್ಯರಿಗೆ 'ಹೊರೆ' ಎನ್ನುವಂತಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಚೇತರಿಕೆ ನೀಡುವುದು ಸಂಚಾರ ದಟ್ಟಣೆಯನ್ನು ಸಹನೀಯಗೊಳಿಸುವ ಹಾಗೂ ಪರಿಸರಸ್ನೇಹಿ ಕ್ರಮವಾಗಿದೆ. ಇದರ ಬದಲಿಗೆ, ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸುವ ಸುರಂಗ ಮಾರ್ಗ ಯೋಜನೆಯು ಮಹಾನಗರದ ಪಾಲಿಗೆ ಮತ್ತೊಂದು ಬಿಳಿ ಆನೆಯಾಗುವ ಎಲ್ಲ ಸಾಧ್ಯತೆಯೂ ಇದೆ.

ಸುರಂಗ ರಸ್ತೆಯಿಂದ ಲಾಲ್‌ಬಾಗ್‌ಗೆ ಯಾವುದೇ ಹಾನಿಯಾಗುವುದಿಲ್ಲ; ಉದ್ಯಾನಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತೆ ಮತ್ತೆ ಭರವಸೆ ನೀಡುತ್ತಿದ್ದಾರೆ. ಆದರೆ, ಉದ್ದೇಶಿತ ಯೋಜನೆ ಲಾಲ್‌ಬಾಗ್ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ. ಯೋಜನೆಯ ಅನುಷ್ಠಾನಕ್ಕಾಗಿ ಬಳಸುವ ಭಾರೀ ಯಂತ್ರಗಳು ಹಾಗೂ ನಿರ್ಮಾಣ ಚಟುವಟಿಕೆಗಳು ಜೈವಿಕ ಉದ್ಯಾನದ ಪ್ರಶಾಂತ ವಾತಾವರಣದಲ್ಲಿ ಉಂಟು ಮಾಡಬಹುದಾದ ಹಸ್ತಕ್ಷೇಪವನ್ನು ಊಹಿಸಿಕೊಳ್ಳುವುದೂ ಕಷ್ಟ. ಸುರಂಗ ಮಾರ್ಗಕ್ಕಾಗಿ ಉದ್ಯಾನದ ಮರ-ಗಿಡಗಳನ್ನು ಕಡಿಯುವುದು ಅನಿವಾರ್ಯವಾಗುತ್ತದೆ. ಸಾವಿರಾರು ಸಸ್ಯಪ್ರಭೇದಗಳು ನಾಶವಾಗುತ್ತವೆ. ನಿರ್ಮಾಣ ಕಾಮಗಾರಿಯಿಂದಾಗಿ ಉದ್ಯಾನದಲ್ಲಿರುವ ಕೋಟ್ಯಂತರ ವರ್ಷಗಳ ಅಪೂರ್ವ ಶಿಲಾರಚನೆಗೆ ಧಕ್ಕೆಯಾಗಬಹುದು ಹಾಗೂ ಕೆರೆಯ ಪರಿಸರ ಮತ್ತು ಜೀವವೈವಿಧ್ಯ ತೀವ್ರವಾಗಿ ಗಾಸಿಗೊಳ್ಳುವ ಸಾಧ್ಯತೆಯೂ ಇದೆ. ಯೋಜನೆಯ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮಗಳು ಯಾವ ರೂಪದಲ್ಲಿರುತ್ತವೆ ಎನ್ನುವುದು ಅಸ್ಪಷ್ಟವಾಗಿದೆ. ವಾಸ್ತವ ಹೀಗಿರುವಾಗ, ಲಾಲ್‌ಬಾಗ್‌ಗೆ ಯಾವುದೇ ಹಾನಿಯಾಗುವುದಿಲ್ಲ ಎನ್ನುವ ಉಪ ಮುಖ್ಯಮಂತ್ರಿಯ ಹೇಳಿಕೆಯನ್ನು ಓರ್ವ ರಾಜಕಾರಣಿಯ ಮಾತಿನಂತೆ ನೋಡಬಹುದೇ ಹೊರತು, ತಜ್ಞರ ಅಭಿಪ್ರಾಯವನ್ನಾಗಿ ಅಲ್ಲ. ಬಂಡವಾಳ ತೊಡಗಿಸುವುದರ ಮೂಲಕ ಸುರಂಗ ರಸ್ತೆ ನಿರ್ಮಿಸುವುದು ಕಷ್ಟವೇನಲ್ಲ. ಆದರೆ, ಲಾಲ್‌ಬಾಗ್‌ನಂಥ ಜೀವಕೋಶಗಳನ್ನು ರೂಪಿಸುವುದಕ್ಕೆ ಬಂಡವಾಳವಷ್ಟೇ ಸಾಕಾಗುವುದಿಲ್ಲ; ಇಚ್ಛಾಶಕ್ತಿ ಹಾಗೂ ನೈತಿಕಶಕ್ತಿಯೂ ಅಗತ್ಯ. ಸುರಂಗ ರಸ್ತೆ ನಿರ್ಮಾಣದಿಂದ ಎಷ್ಟೇ ಅನುಕೂಲಗಳಿದ್ದರೂ, ಲಾಲ್‌ಬಾಗ್ ಸುರಕ್ಷತೆಯ ಮುಂದೆ ಆ ಪ್ರಯೋಜನಗಳು ದೊಡ್ಡದಾಗಿರಲು ಸಾಧ್ಯವಿಲ್ಲ. ಸಾರ್ವಜನಿಕ ಹಾಗೂ ಪರಿಸರದ ಹಿತದೃಷ್ಟಿಯಿಂದ, ಉದ್ದೇಶಿತ ಯೋಜನೆಯ ಪರಿಧಿಯಿಂದ ಲಾಲ್‌ಬಾಗ್ ಹೊರಗಿಡುವುದು ಇಲ್ಲವೇ ಯೋಜನೆಯನ್ನು ಕೈಬಿಡುವುದು ಸರ್ಕಾರದ ಮುಂದಿರುವ ಎರಡು ಜನಪರ ಆಯ್ಕೆಗಳು.

> ಸುರಂಗ ರಸ್ತೆ ನಿರ್ಮಾಣ ಯೋಜನೆ ಲಾಲ್‌ಬಾಗ್‌ನ ಪರಿಸರ ಮತ್ತು ಜೀವವೈವಿಧ್ಯಕ್ಕೆ ಧಕ್ಕೆ ತರುವ ಅಪಾಯವಿದೆ. ಲಾಲ್‌ಬಾಗ್ ಸುರಕ್ಷತೆಯ ಮುಂದೆ ಯಾವುದೇ ಯೋಜನೆಯೂ ಮುಖ್ಯ ಆಗಬಾರದು.

ಚುನಾವಣಾ ಅವ್ಯವಸ್ಥೆ: ಮದ್ದುಂಟೆ?

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

> ರಾಹುಲ್ ಗಾಂಧಿ ಅವರ 'ಮತಗಳ್ಳತನ ವಿರೋಧಿ ಆಂದೋಲನ' ಯಶಸ್ವಿಯಾದರೆ ಚುನಾವಣಾ ವ್ಯವಸ್ಥೆ ಪೂರ್ಣವಾಗಿ ಶುದ್ಧಗೊಳ್ಳುವುದೇ? ರೋಗಗಳ ಗೂಡಿನಂತಿರುವ ಚುನಾವಣಾ ವ್ಯವಸ್ಥೆಯನ್ನು ನೋಡಿದರೆ, ಸುಧಾರಣೆ ಅಷ್ಟು ಸುಲಭದ್ದಾಗಿ ಕಾಣಿಸುವುದಿಲ್ಲ.

'ಮತಗಳ್ಳತನ'ದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಾರಂಭಿಸಿರುವ ಆಂದೋಲನವು ಕೇಂದ್ರ ಚುನಾವಣಾ ಆಯೋಗವನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದೆ. ಇದು ಸ್ವಾಯತ್ತ ಸ್ವರೂಪದ ಸಾಂವಿಧಾನಿಕ ಸಂಸ್ಥೆಯ ಹಲವು ಒಳಹುಳುಕುಗಳನ್ನು ಹೊರಹಾಕಿದೆ. ಒಂದೊಮ್ಮೆ ಈ ಆಂದೋಲನ ಯಶಸ್ಸನ್ನು ಕಂಡು ಮತದಾರರ ಪಟ್ಟಿಯಲ್ಲಿನ ಅಕ್ರಮಗಳ ನಿವಾರಣೆ ಆಗಿಬಿಟ್ಟರೆ, ಇಡೀ ಚುನಾವಣಾ ವ್ಯವಸ್ಥೆ ಪರಿಶುದ್ಧ ಮತ್ತು ಪರಿಪೂರ್ಣವಾಗಲಿದೆ ಎಂದು ಹೇಳಬಹುದೇ?

ಇದಕ್ಕೆ ಮೊದಲು ದೇಶದ 543 ಲೋಕಸಭಾ ಸದಸ್ಯರು ಮತ್ತು ರಾಜ್ಯಗಳ ಒಟ್ಟು 4,123 ವಿಧಾನ ಸಭಾ ಸದಸ್ಯರನ್ನು ಇನ್ನೊಂದು ಪ್ರಶ್ನೆ ಕೇಳಬೇಕಾಗಿದೆ. ಇವರಲ್ಲಿ ಯಾರಾದರೂ ಒಬ್ಬರು ಮುಂದೆ ಬಂದು ತಮ್ಮ ಆತ್ಮಸಾಕ್ಷಿಯ ಮೇಲೆ ಆಣೆ ಮಾಡಿ 'ಚುನಾವಣಾ ಆಯೋಗದ ಎಲ್ಲ ನೀತಿ-ನಿಯಮಗಳನ್ನು ಅಕ್ಷರಶಃ ಪಾಲಿಸಿದ್ದೇನೆ. ಉದಾಹರಣೆಗೆ, ಚುನಾವಣಾ ಆಯೋಗದ ನಿಯಮದಂತೆ ಲೋಕಸಭಾ ಚುನಾವಣೆಗೆ ₹95 ಲಕ್ಷ ಮತ್ತು ವಿಧಾನಸಭಾ ಚುನಾವಣೆಗೆ ₹45 ಲಕ್ಷವಷ್ಟೇ ಖರ್ಚು ಮಾಡಿ ಗೆದ್ದು ಬಂದಿದ್ದೇನೆ' ಎಂದು ಧೈರ್ಯದಿಂದ ಘೋಷಿಸಬಹುದೇ?

ಈ ಪ್ರಶ್ನೆಗೆ ಚುನಾವಣಾ ಸುಧಾರಣೆಗಾಗಿ ಕಳೆದ ಮೂರು ದಶಕಗಳಿಂದ ಶ್ರಮಿಸುತ್ತಿರುವ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್' (ಎಡಿಆರ್) ನೀಡಿರುವ ವರದಿಗಳಲ್ಲಿ ಉತ್ತರ ಇದೆ. ಎಡಿಆರ್ ವರದಿಗಳ ಪ್ರಕಾರ, ಲೋಕಸಭೆಯಲ್ಲಿರುವ 543 ಸದಸ್ಯರ ಪೈಕಿ 251 ಸದಸ್ಯರ ಮೇಲೆ (ಶೇ 46) ಕ್ರಿಮಿನಲ್ ಕೇಸ್‌ಗಳಿವೆ. ಇವರಲ್ಲಿ 170 ಸದಸ್ಯರ (ಶೇ 31) ವಿರುದ್ಧ ಕೊಲೆ, ಅತ್ಯಾಚಾರ, ಅಪಹರಣ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದಂತಹ ಗಂಭೀರ ಸ್ವರೂಪದ ಆರೋಪಗಳಿವೆ. ದೇಶದ 27 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಒಟ್ಟು 4,123 ಸದಸ್ಯರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ. ಇವರಲ್ಲಿ 1,203 ಸದಸ್ಯರ ವಿರುದ್ಧ ಕೊಲೆ, ಅತ್ಯಾಚಾರ, ಅಪಹರಣದಂತಹ ಗಂಭೀರ ಆರೋಪಗಳಿವೆ.

ಲೋಕಸಭೆಯ 543 ಸದಸ್ಯರಲ್ಲಿ 504 ಸದಸ್ಯರು ಕೋಟ್ಯಧಿಪತಿಗಳು. ಇವರಲ್ಲಿ ಹತ್ತು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಆದಾಯದ ಸದಸ್ಯರ ಸಂಖ್ಯೆ 227. ಭಾರತದಲ್ಲಿ ಸರಾಸರಿ ತಲಾದಾಯ ₹2,04,200. ಶೇ 50ರಷ್ಟಿರುವ ತಳಮಟ್ಟದ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ಕೇವಲ ₹53,610. ಇದು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ನಮ್ಮನ್ನು ಪ್ರತಿನಿಧಿಸುತ್ತಿರುವವರ ವ್ಯಕ್ತಿಚಿತ್ರದ ಒಂದು ಕಿರುನೋಟ.

ವಾಸ್ತವ ಸಂಗತಿ ಏನೆಂದರೆ, ದೇಶದ ಇಡೀ ಚುನಾವಣಾ ವ್ಯವಸ್ಥೆಯೇ ರೋಗಗಳ ಗೂಡಾಗಿದೆ. ಇತ್ತೀಚೆಗೆ ಚರ್ಚೆಯಲ್ಲಿರುವ 'ಮತಗಳ್ಳತನ', 'ಎಲೆಕ್ಟ್ರಾನಿಕ್ ಮತಯಂತ್ರಗಳ ದುರುಪಯೋಗ', 'ಚುನಾವಣಾ ಬಾಂಡ್‌ಗಳ ಹಗರಣ'ಗಳೆಲ್ಲವೂ ಒಂದೊಂದು ರೋಗದ ಲಕ್ಷಣಗಳು. ಇದರ ಅರ್ಥ ಹದಿನೈದು ವರ್ಷಗಳ ಹಿಂದೆ ಚುನಾವಣಾ ವ್ಯವಸ್ಥೆ ಸಂಪೂರ್ಣ ಆರೋಗ್ಯಕರವಾಗಿತ್ತು ಎಂದಲ್ಲ. ತುರ್ತು ಪರಿಸ್ಥಿತಿಯನ್ನು ಘೋಷಿಸುವ ಹಂತಕ್ಕೆ ಇಂದಿರಾ ಗಾಂಧಿಯವರನ್ನು ತಳ್ಳಿದ್ದು ಕೂಡ ಚುನಾವಣಾ ಅಕ್ರಮದ ಆರೋಪ ಎನ್ನುವುದನ್ನು ಮರೆಯಬಾರದು.

ಕಾಲಕಾಲಕ್ಕೆ ಕೇಂದ್ರದ ಚುನಾಯಿತ ಸರ್ಕಾರಗಳು ಚುನಾವಣಾ ವ್ಯವಸ್ಥೆಗೆ ಬಡಿದಿರುವ ರೋಗಗಳನ್ನು ನಿವಾರಿಸಲು ಚಿಕಿತ್ಸೆ ನೀಡುತ್ತಲೇ ಬಂದಿವೆ. ಕೇಂದ್ರ ಚುನಾವಣಾ ಆಯೋಗದ ಕಪಾಟಿನಲ್ಲಿ ದೂಳು ತಿನ್ನುತ್ತಾ ಬಿದ್ದಿರುವ ಚುನಾವಣಾ ಸುಧಾರಣಾ ವರದಿಗಳೇ ಈ ಪ್ರಯತ್ನಗಳಿಗೆ ಸಾಕ್ಷಿ. 'ನಾಗರಿಕ ಹಕ್ಕುಗಳ ಆಂದೋಲನದ ಪಿತಾಮಹ' ಎಂದೇ ಕರೆಯಲಾಗುವ ವಿ.ಎಂ. ತಾರ್ಕುಂಡೆ ನೇತೃತ್ವದ ಸಮಿತಿಯಿಂದ ಹಿಡಿದು, 1990ರ ಇಂದ್ರಜಿತ್ ಗುಪ್ತಾ ನೇತೃತ್ವದ ಸಮಿತಿವರೆಗೆ ಕನಿಷ್ಠ ಏಳು ಸಮಿತಿಗಳು ಚುನಾವಣಾ ವ್ಯವಸ್ಥೆಯ ಸುಧಾರಣೆಗೆ ಕ್ರಮಗಳನ್ನು ಸೂಚಿಸಿ ವರದಿಗಳನ್ನು ನೀಡಿವೆ. ಇವುಗಳ ಜೊತೆಗೆ ಕಾನೂನು ಆಯೋಗಗಳು ಕೂಡ ಒಂದಷ್ಟು ಶಿಫಾರಸುಗಳನ್ನು ಮಾಡಿವೆ. ಇದರ ನಡುವೆ ನ್ಯಾಯಾಂಗ ಆಗಾಗ ಮಧ್ಯಪ್ರವೇಶಿಸಿ, ಕೆಲವೊಮ್ಮೆ ಕಿವಿ ಹಿಂಡಿ, ಇನ್ನೂ ಕೆಲವೊಮ್ಮೆ ತಲೆಗೆ ಮೊಟಕಿ, ಹಟಮಾರಿ ಶಾಸಕಾಂಗ ಅನಿವಾರ್ಯವಾಗಿ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವಂತೆ ಮಾಡಿದೆ.

1974ರಲ್ಲಿ ರಚನೆಗೊಂಡ ವಿ.ಎಂ. ತಾರ್ಕುಂಡೆ ನೇತೃತ್ವದ ಚುನಾವಣಾ ಸುಧಾರಣಾ ಸಮಿತಿಯ ಪಾತ್ರ ಬಹುಮುಖ್ಯವಾದುದು. 'ಪ್ರಧಾನ ಮಂತ್ರಿ, ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನು ಒಳಗೊಂಡ ಸಮಿತಿ ಮೂಲಕ ಮುಖ್ಯ ಚುನಾವಣಾ ಆಯುಕ್ತರ ನೇಮಕ, ಮತದಾರರ ವಯೋಮಿತಿ 24ರಿಂದ 18 ವರ್ಷಕ್ಕೆ ಇಳಿಕೆ, ಚುನಾವಣಾ ಪ್ರಕ್ರಿಯೆ ಶುರುವಾದ ನಂತರ ಆಡಳಿತಾರೂಢ ಸರ್ಕಾರ ಉಸ್ತುವಾರಿ ಸರ್ಕಾರವಾಗಿ ಕಾರ್ಯ ನಿರ್ವಹಣೆ, ರಾಜಕೀಯ ಪಕ್ಷಗಳು ಲೆಕ್ಕಪತ್ರ ಪರಿಶೋಧಕರಿಂದ ದೃಢೀಕರಿಸಲ್ಪಟ್ಟ ಲೆಕ್ಕಪತ್ರವನ್ನು ಸಾರ್ವಜನಿಕರ ಅವಗಾಹನೆಗೆ ಮುಕ್ತವಾಗಿ ಇಡುವುದು, ಎರಡು ಕ್ಷೇತ್ರಗಳಿಗಿಂತ ಹೆಚ್ಚಿನ ಕಡೆ ಸ್ಪರ್ಧಿಸದಂತೆ ನಿರ್ಬಂಧ, ಸರ್ಕಾರದಿಂದಲೇ ಚುನಾವಣಾ ವೆಚ್ಚವನ್ನು ಭರಿಸುವುದು– ಇವು ತಾರ್ಕುಂಡೆ ಸಮಿತಿ 1975ರಲ್ಲಿ ಸರ್ಕಾರಕ್ಕೆ ನೀಡಿದ್ದ ವರದಿಯಲ್ಲಿನ ಮುಖ್ಯ ಶಿಫಾರಸುಗಳು.

ಇದರ ನಂತರ ಚುನಾವಣಾ ಸುಧಾರಣೆಗಾಗಿಯೇ ನೇಮಕಗೊಂಡ ದಿನೇಶ್ ಗೋಸ್ವಾಮಿ ಸಮಿತಿ (1990), ವೋಹ್ರಾ ಸಮಿತಿ (1993), ವಿ.ಆರ್. ಕೃಷ್ಣ ಅಯ್ಯರ್ ಸಮಿತಿ (1994), ಇಂದ್ರಜಿತ್ ಗುಪ್ತಾ ಸಮಿತಿಗಳು (1998) ಕೂಡ ತಾರ್ಕುಂಡೆ ಸಮಿತಿಯ ಕೆಲವು ಶಿಫಾರಸುಗಳ ಜೊತೆಯಲ್ಲಿ ಹೊಸ ಶಿಫಾರಸುಗಳನ್ನು ನೀಡಿವೆ. 'ಖಾಸಗಿ ಕಂಪನಿ ಮತ್ತು ಅನಾಮಧೇಯ ಸಂಸ್ಥೆಗಳ ದೇಣಿಗೆಗೆ ನಿಷೇಧ, ರಾಜಕೀಯ ಪಕ್ಷಗಳ ಕಡ್ಡಾಯ ಲೆಕ್ಕಪತ್ರ ಪರಿಶೋಧನೆ, ಸತತ ಎರಡು ಚುನಾವಣೆಗಳಲ್ಲಿ ಶೇ 5ಕ್ಕಿಂತ ಕಡಿಮೆ ಮತಗಳನ್ನು ಪಡೆಯುವ ರಾಜಕೀಯ ಪಕ್ಷಗಳ ನೋಂದಣಿ ರದ್ದತಿ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವವರ ವಿವರ ಘೋಷಣೆ' ಸೇರಿದಂತೆ ಹೊಸ ಶಿಫಾರಸುಗಳನ್ನು ಈ ಸಮಿತಿಗಳು ನೀಡಿವೆ.

ಇವುಗಳಲ್ಲಿ ಮುಖ್ಯವಾಗಿ, ಮತದಾರರ ಗುರುತು ಚೀಟಿ, ಮುಖ್ಯ ಚುನಾವಣಾ ಆಯುಕ್ತರ ನೇಮಕಕ್ಕೆ ಸಮಿತಿ, ಮತದಾರರ ವಯೋಮಾನ ಇಳಿಕೆ. ಎಲೆಕ್ಟ್ರಾನಿಕ್ ಮತಯಂತ್ರಗಳ ಬಳಕೆ, ಒಬ್ಬ ಅಭ್ಯರ್ಥಿ ಎರಡಕ್ಕಿಂತ ಹೆಚ್ಚಿನ ಕ್ಷೇತ್ರಗಳಿಂದ ಸ್ಪರ್ಧಿಸದಂತೆ ನಿರ್ಬಂಧ ಸೇರಿದಂತೆ ಸಮಿತಿಗಳ ಬಹಳಷ್ಟು ಶಿಫಾರಸುಗಳು ನಿಧಾನವಾಗಿಯಾದರೂ ಜಾರಿಗೆ ಬಂದಿವೆ, ಕೆಲವು ಬಾಕಿ ಇವೆ.

ಇತ್ತೀಚಿನ ವರ್ಷಗಳಲ್ಲಿ ಜಾರಿಗೆ ಬಂದಿರುವ ಬಹಳ ಮುಖ್ಯವಾದ ಇನ್ನೊಂದು ಚುನಾವಣಾ ಸುಧಾರಣಾ ಕ್ರಮಕ್ಕೆ ಕಾರಣವಾಗಿದ್ದು, 2003ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶ.

'ಸ್ಪರ್ಧಾ ಕಣದಲ್ಲಿರುವ ಪ್ರತಿಯೊಬ್ಬ ಅಭ್ಯರ್ಥಿಯ ಹಿನ್ನೆಲೆಯನ್ನು ತಿಳಿದುಕೊಳ್ಳುವ ಹಕ್ಕು ಮತದಾರನಿಗಿದೆ. ಈ ಕಾರಣಕ್ಕಾಗಿ ಅಭ್ಯರ್ಥಿಯ ನಾಮಪತ್ರಗಳ ಜೊತೆಯಲ್ಲಿ ತನ್ನ ಕ್ರಿಮಿನಲ್ ಅಪರಾಧಗಳ ವಿವರ, ಆದಾಯ ಮತ್ತು ಸಾಲದ ಲೆಕ್ಕ ಹಾಗೂ ಶೈಕ್ಷಣಿಕ ಅರ್ಹತೆಯ ವಿವರಗಳನ್ನು ಸಲ್ಲಿಸಬೇಕು' ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಇದರ ನಂತರ ಆ ಕಾಲದಲ್ಲಿ ಇನ್ನೂ ಸ್ವತಂತ್ರವಾಗಿಯೇ ಕಾರ್ಯ ನಿರ್ವಹಿಸುತ್ತಿದ್ದ ಕೇಂದ್ರ ಚುನಾವಣಾ ಆಯೋಗ ಚುನಾವಣಾ ನಿರ್ವಹಣಾ ನಿಯಮಾವಳಿಗೆ ತಿದ್ದುಪಡಿ ಮಾಡಿ 'ಅಪರಾಧ ಹಿನ್ನೆಲೆ ಮತ್ತು ಆದಾಯದ ವಿವರ ಘೋಷಣೆಯನ್ನು ಕಡ್ಡಾಯಗೊಳಿಸಿ ಹೊಸ ಮಾರ್ಗದರ್ಶಿಗಳನ್ನು ಜಾರಿಗೊಳಿಸಿತ್ತು.

ತಕ್ಷಣ ಸಿಡಿದೆದ್ದ ಸರ್ವಪಕ್ಷಗಳ ಸಂಸದರ ಒತ್ತಡಕ್ಕೆ ಮಣಿದ ಯುಪಿಎ ಸರ್ಕಾರ, ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ಮಾಡಿ ಹೊಸ ಮಾರ್ಗದರ್ಶಿ ಸೂತ್ರವನ್ನು ಸುಗ್ರೀವಾಜ್ಞೆ ಮೂಲಕ ಹೊರಡಿಸಿತ್ತು. ಈ ತಿದ್ದುಪಡಿಯ ಪ್ರಕಾರ ಅಭ್ಯರ್ಥಿಗಳು ಸ್ಪರ್ಧಿಸುವಾಗ ವಿವರ ಸಲ್ಲಿಸುವ ಅಗತ್ಯ ಇರಲಿಲ್ಲ. ಆರಿಸಿ ಬಂದರೆ ಮಾತ್ರ ಲೋಕಸಭಾ ಮತ್ತು ವಿಧಾನಸಭಾ ಅಧ್ಯಕ್ಷರಿಗೆ ಈ ವಿವರಗಳನ್ನು ಸಲ್ಲಿಸಬೇಕಾಗಿತ್ತು. ಆದರೆ, ಸುಪ್ರೀಂ ಕೋರ್ಟ್ ಸುಗ್ರೀವಾಜ್ಞೆಯನ್ನು ರದ್ದುಗೊಳಿಸಿ ತನ್ನ ಆದೇಶವನ್ನು ಜಾರಿಗೊಳಿಸಲು ಸೂಚನೆ ನೀಡಿತು.

ಕೇಂದ್ರ ಚುನಾವಣಾ ಆಯುಕ್ತರ ನೇಮಕಾತಿ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನು ಕಿತ್ತುಹಾಕುವುದರಿಂದ ಹಿಡಿದು, ಚುನಾವಣಾ ಬಾಂಡ್ ಜಾರಿವರೆಗೆ ಕಳೆದ ಹನ್ನೆರಡು ವರ್ಷಗಳ ಆಡಳಿತದ ಅವಧಿಯಲ್ಲಿ ಸ್ವಾಯತ್ತ ಸ್ವರೂಪದ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವನ್ನು ಕೈಗೊಂಬೆ ಮಾಡಿಕೊಳ್ಳಲು ಹೊರಟಿರುವ ಪ್ರಸಕ್ತ ಕೇಂದ್ರ ಸರ್ಕಾರ, ಇತ್ತೀಚೆಗೆ ಸಂವಿಧಾನಕ್ಕೆ 130ನೇ ತಿದ್ದುಪಡಿ ಮಾಡುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದೆ. ಭ್ರಷ್ಟಾಚಾರ ಅಥವಾ ಗಂಭೀರ ಅಪರಾಧ ಆರೋಪ ಎದುರಿಸುತ್ತಿರುವ ಪ್ರಧಾನಿ ಅಥವಾ ಮುಖ್ಯಮಂತ್ರಿಗಳು ಸತತವಾಗಿ 30 ದಿನಗಳ ಕಾಲ ಬಂಧನದಲ್ಲಿದ್ದರೆ ಅವರನ್ನು ಅಧಿಕಾರದಿಂದ ಕಿತ್ತುಹಾಕುವ ಉದ್ದೇಶವನ್ನು ಈ ಮಸೂದೆ ಹೊಂದಿದೆ. ಮೇಲ್ನೋಟಕ್ಕೆ ಕ್ರಾಂತಿಕಾರಿ ಎನಿಸಿರುವ ಈ ಮಸೂದೆಯ ಹಿಂದೆ ವಿರೋಧ ಪಕ್ಷಗಳನ್ನು ಹಣಿಯುವ ದುರುದ್ದೇಶ ಇರುವುದು ಸ್ಪಷ್ಟವಾಗಿದೆ.

ರಾಜಕೀಯ ಅಪರಾಧೀಕರಣ ಮತ್ತು ಚುನಾವಣೆಯಲ್ಲಿ ಹಣದ ಪ್ರಭಾವವನ್ನು ನಿಯಂತ್ರಣ ಮಾಡುವ ಪ್ರಾಮಾಣಿಕ ಆಶಯವನ್ನು ಕೇಂದ್ರ ಸರ್ಕಾರ ಹೊಂದಿದ್ದರೆ, ಎ.ಬಿ. ವಾಜಪೇಯಿ ಸರ್ಕಾರದ ಅವಧಿಯಲ್ಲಿಯೇ ಕಾನೂನು ಆಯೋಗ (1999) ಮತ್ತು ಸಂವಿಧಾನ ಪುನರ್ ಪರಿಶೀಲನಾ ಆಯೋಗ (2001) ನೀಡಿರುವ ಶಿಫಾರಸನ್ನು ಜಾರಿಗೆ ತರಬೇಕು. ಇದರ ಪ್ರಕಾರ, ಐದು ವರ್ಷಗಳ ಜೈಲು ಶಿಕ್ಷೆಗೆ ಈಡಾಗಿರುವ ಆರೋಪಿಯ ವಿರುದ್ಧ ನ್ಯಾಯಾಲಯಗಳಲ್ಲಿ ಮೇಲ್ಮನವಿ ಇತ್ಯರ್ಥವಾಗಲು ಬಾಕಿ ಇದ್ದರೂ ಅಂತಹವರು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ.

ಕನಿಷ್ಠ ಈ ಒಂದು ಸುಧಾರಣಾ ಕ್ರಮ ಜಾರಿಗೆ ಬಂದರೆ, ಒಂದೇ ಏಟಿನಲ್ಲಿ ಈಗಿನ ಲೋಕಸಭೆಯ 153 ಸ್ಥಾನಗಳು ಮತ್ತು ವಿಧಾನಸಭೆಗಳ 1,203 ಸದಸ್ಯರ ಸ್ಥಾನಗಳು ಖಾಲಿಯಾಗುತ್ತವೆ. ಪ್ರಭುತ್ವ ದಮ್ಮು-ತಾಕತ್ತು ತೋರಿಸಬೇಕಾಗಿರುವುದು ಇದರಲ್ಲಿ.

ವಾಚಕರ ವಾಣಿ

ವಿ.ವಿ ಅಸಡ್ಡೆ: ವಿದ್ಯಾರ್ಥಿಗಳಿಗೆ ಪೇಚಾಟ

ಕಳೆದ ಕೆಲವು ವರ್ಷಗಳಿಂದ ಎಂಜಿನಿಯರಿಂಗ್‌ನ ವಾಸ್ತುಶಿಲ್ಪಶಾಸ್ತ್ರ ವಿಷಯದ ಪರೀಕ್ಷೆಗಳು ಸರಿಯಾಗಿ ನಡೆಯುತ್ತಿಲ್ಲ ಮತ್ತು ಸಕಾಲದಲ್ಲಿ ಫಲಿತಾಂಶವೂ ಪ್ರಕಟವಾಗುತ್ತಿಲ್ಲ. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಯುವಿಸಿಇ ಜವಾಬ್ದಾರಿ ಇಲ್ಲದೆ ವರ್ತಿಸುತ್ತಿವೆ. ಇದರಿಂದ ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕಾಲೇಜಿಗೆ ಅಲೆದಾಡುತ್ತಿದ್ದಾರೆ. ಅವರಿಗೆ ಉದ್ಯೋಗದ ಮತ್ತು ಉನ್ನತ ಶಿಕ್ಷಣದ ಅವಕಾಶಗಳು ಕೈತಪ್ಪುವ ಆತಂಕವಿದೆ. ಜೊತೆಗೆ, ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶವೂ ಇಲ್ಲದಂತಾಗಿದೆ.

ವಿಜಯಲಕ್ಷ್ಮಿ, ಬೆಂಗಳೂರು

ಮಾನವೀಯ ಮೌಲ್ಯಗಳು ಪಠ್ಯವಾಗಲಿ

ಸಾಮಾಜಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಉಳ್ಳವರು, ಚಿಂತಕರು 'ಸಂವಿಧಾನ' ಎಂಬ ಶಬ್ದವನ್ನು ಬಳಸಿದಷ್ಟು ಬೇರೆ ಯಾವ ಶಬ್ದವನ್ನೂ ಬಹುಶಃ ಬಳಸಿಲ್ಲ. ಸಂವಿಧಾನದ ಪೀಠಿಕೆಯನ್ನು ಎಲ್ಲ ಆಚರಣೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಓದಿದ್ದೇ ಓದಿದ್ದು. ಆದರೆ, ನಮ್ಮ ನಡತೆ, ನಿತ್ಯದ ಆಚರಣೆಯಲ್ಲಿ ಮಾತ್ರ ಶೂನ್ಯ.

ಸಂವಿಧಾನ ಮತ್ತು ಪ್ರಜಾಸತ್ತೆ ದೇಶದ ಎರಡು ಕಣ್ಣುಗಳು. ಒಂದಿಲ್ಲದೆ ಇನ್ನೊಂದನ್ನು ಯೋಚಿಸಲು ಸಾಧ್ಯವಿಲ್ಲ. ಶಿಕ್ಷಣ ತಜ್ಞ ನಿರಂಜನಾರಾಧ್ಯ ಅವರು, 'ಅರಿವೇ ಪ್ರಜಾಸತ್ತೆಯ ಜೀವಜಲ' (ಪ್ರ.ವಾ., ಅ. 6) ಎಂಬುದನ್ನು ಸಮರ್ಥಿಸುತ್ತಲೇ, ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ಅವಿನಾಭಾವ ಸಂಬಂಧವನ್ನು ಶಿಕ್ಷಣ ತಜ್ಞರ ಮಾತುಗಳ ಉಲ್ಲೇಖಗಳೊಂದಿಗೆ ತಮ್ಮ ಬರಹದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಈ 'ಅರಿವು' ನಾವು ಪ್ರಸ್ತಾಪಿಸುತ್ತಿರುವ ಮಾನವೀಯ ಮೌಲ್ಯಗಳ ಎಲ್ಲಾ ಸಂಬಂಧಗಳ ಕೇಂದ್ರಬಿಂದು. ನಮ್ಮ ಜಡ್ಡುಗಟ್ಟಿದ ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಕಡ್ಡಾಯವಾಗಿ ಒಂದು ಪ್ರತ್ಯೇಕ ಪಠ್ಯವನ್ನಾಗಿ (ಗಣಿತ, ವಿಜ್ಞಾನದ ಪಠ್ಯ ಇರುವ ಹಾಗೆ) ಮಾಡಿದರೆ ಮಾತ್ರ ಸಮಾಜವನ್ನು ಚಿಂತನೆಗೆ ಹಚ್ಚಲು ಸಾಧ್ಯ. ಈ ಸಂದೇಶವು ಸಮಾಜದ ಎಲ್ಲಾ ವರ್ಗದವರಿಗೆ ಬಿಸಿ ಮುಟ್ಟಿಸುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ. ಈ ಬಗ್ಗೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ನೆನಪಿಸಿಕೊಂಡರೆ ಒಳಿತು.

ನಾ. ದಿವಾಕರ, ಪು.ಸೂ. ಲಕ್ಷ್ಮೀನಾರಾಯಣ ರಾವ್, ಸಿದ್ರಾಮಪ್ಪ ದಿನ್ನಿ, ಸತೀಶ್ ಜಿ.ಕೆ. ತೀರ್ಥಹಳ್ಳಿ, ವಿವೇಕಾನಂದ ಎಚ್.ಕೆ., ಟಿ.ಜೆ. ರೇಣುಕಾ ಪ್ರಸಾದ್, ಸಿರಿಮನೆ ನಾಗರಾಜ್

ಋತುಚಕ್ರ ರಜೆ: ಚಾರಿತ್ರಿಕ ನಿರ್ಧಾರ

ರಾಜ್ಯ ಸರ್ಕಾರವು ಋತುಚಕ್ರದ ರಜೆ ಘೋಷಿಸಿರುವುದು ಮಹಿಳೆಯರ ಗೌರವ ಮತ್ತು ಆರೋಗ್ಯದ ದೃಷ್ಟಿಯಿಂದ ಕೈಗೊಂಡಿರುವ ಐತಿಹಾಸಿಕ ನಿರ್ಧಾರ. ಋತುಚಕ್ರದ ಅವಧಿಯಲ್ಲಿ ಹೆಣ್ಣುಮಕ್ಕಳು ದೈಹಿಕ ಹಾಗೂ ಮಾನಸಿಕ ಅಸೌಕರ್ಯ ಅನುಭವಿಸುತ್ತಾರೆ. ವೃತ್ತಿನಿರತ ಮಹಿಳೆಯರು ಈ ಸಂದರ್ಭದಲ್ಲಿ ವಿಶ್ರಾಂತಿಯ ಅಗತ್ಯವಿದ್ದರೂ, ಕೌಟುಂಬಿಕ ಹಾಗೂ ವೃತ್ತಿಜೀವನದ ಒತ್ತಡದ ಮಧ್ಯೆ ಕರ್ತವ್ಯ ನಿರ್ವಹಿಸುತ್ತಲೇ ಇರುತ್ತಾರೆ.

ಈಗ ಸರ್ಕಾರವು ನೀಡಿರುವ ಋತುಚಕ್ರ ರಜೆ ಮಹಿಳೆಯರಿಗೆ ಒಂದು ಮಹತ್ವದ ಉಡುಗೊರೆ. ಈ ನಿರ್ಧಾರದಿಂದ ಮಹಿಳೆಯರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಇನ್ನಷ್ಟು ಸದೃಢರಾಗಿ, ಕ್ರಿಯಾಶೀಲರಾಗಿ ತಮ್ಮ ಅಮೂಲ್ಯ ಸೇವೆಯನ್ನು ರಾಷ್ಟ್ರದ ಅಭಿವೃದ್ಧಿಗೆ ನೀಡಲು ಸಾಧ್ಯವಾಗಲಿದೆ.

ಶ್ರೀಮತಿ ಎಸ್.ಕೆ. ಗಡಿಯಪ್ಪನವರ, ಬಿದರಕುಂದಿ

ಜಾತಿ ಘಟಸರ್ಪಕ್ಕೆ ಸಂಕೋಲೆ ತೊಡಿಸಿ

ದೇಶದ ನ್ಯಾಯದೇವತೆಯ ಪೀಠಕ್ಕೆ ಜಾತಿ ಎಂಬ ಮನುವಾದದ ಭೂತ ಅಪ್ಪಳಿಸಿದೆ. ಕೆಳವರ್ಗದ ಜನರು ಉನ್ನತ ಶಿಕ್ಷಣ ಪಡೆದು ಆರ್ಥಿಕವಾಗಿ ಸಬಲರಾದರೂ, ಅಧಿಕಾರದ ಚುಕ್ಕಾಣಿ ಹಿಡಿದರೂ ಜಾತಿಯ ಮಾಯೆ ಬಿಡದೆ ಕಾಡುತ್ತಿದೆ.

ಈ ಮಾಯೆಯ ಬಲಿಯಿಂದ ಹೊರಬರಬೇಕಾದರೆ ಬುದ್ಧನ ಕವಚಧಾರಣೆ ಮಾಡಲೇಬೇಕು. ಆಗಷ್ಟೇ ಜಾತಿಯ ಘಟಸರ್ಪಕ್ಕೆ ಸಂಕೋಲೆ ತೊಡಿಸಲು ಸಾಧ್ಯ.

ವಿಜಯಲಕ್ಷ್ಮಿ ದೊಡ್ಡಮನಿ, ಕಲಬುರಗಿ

ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ವಿಳಂಬ ಸಲ್ಲ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗುತ್ತಿದೆ. ಆದರೂ, ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಗಮನಹರಿಸಿಲ್ಲ. ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಉಪಸಮಿತಿ ರಚಿಸಿ ತಿಂಗಳುಗಳೇ ಕಳೆದಿವೆ. ಸಮಿತಿಯು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಚುರುಕು ಮುಟ್ಟಿಸುವಲ್ಲಿ ನಿರ್ಲಕ್ಷ್ಯ ತೋರಿದೆ.

ಸದ್ಯ ಪರಿಶಿಷ್ಟ ಜಾತಿಯ ಒಳಮೀಸಲಾತಿ ಗೊಂದಲ ಬಗೆಹರಿದಿದೆ. ಇನ್ನಾದರೂ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಪ್ರಕಟಣೆಗೆ ಅಧಿಸೂಚನೆ ಪ್ರಕಟಿಸಬೇಕಿದೆ.

ಪ್ರಶಾಂತ್ ಬುಳ್ಳಣ್ಣವರ, ಉಗರಗೋಳ

ನಿರುದ್ಯೋಗಿ ಯುವಜನರ ಗೋಳು ಆಲಿಸಿ

ರಾಜ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧ್ಯಯನ ಮಾಡುತ್ತಿರುವವರ ಪರಿಸ್ಥಿತಿ ಹೇಳತೀರದಾಗಿದೆ. ಲಕ್ಷಾಂತರ ಹುದ್ದೆಗಳು ಖಾಲಿಯಿದ್ದರೂ ಸರ್ಕಾರ ನೇಮಕಾತಿಗೆ ಹಿಂದೇಟು ಹಾಕುತ್ತಿದೆ.

ಇದರಿಂದ ಯುವಜನರ ಬದುಕು ಸಂಕಷ್ಟದ ಕುಲುಮೆಗೆ ಸಿಲುಕಿದೆ. ಧಾರವಾಡದಲ್ಲಿ ಇತ್ತೀಚೆಗೆ ಜರುಗಿದ ಉದ್ಯೋಗಾಕಾಂಕ್ಷಿಗಳ ಹೋರಾಟವು ಇಡೀ ದೇಶದ ಗಮನ ಸೆಳೆದಿದೆ. ಆದರೂ, ನೇಮಕಾತಿಗೆ ಸರ್ಕಾರ ಆಸಕ್ತಿ ತೋರುತ್ತಿಲ್ಲ.

ಸೋಮನಾಥ ಎಚ್. ಜಂಪಾ, ಕಕ್ಕೇರಾ

ಹೊರಗಿಡುವ ಧಾರ್ಷ್ಟ್ಯ!

ಮತ್ತೊಂದು ದೇಶಕ್ಕೆ ಭೇಟಿ ಕೊಟ್ಟು, ಅಲ್ಲಿನ ಪತ್ರಕರ್ತೆಯರನ್ನು ಹೊರಗಿಡುವ 'ಧಾರ್ಷ್ಟ್ಯ' ಗಮನಿಸಿ! ಇದನ್ನು ಸಹಿಸಲು ಹೇಗೆ ಸಾಧ್ಯವಾಗುತ್ತದೆ? ನಮ್ಮಲ್ಲಿ ಇದಕ್ಕೆ ಹೇಗೆ ಅವಕಾಶ ನೀಡಲಾಯಿತು? ಇಲ್ಲಿ ಬಂದು ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡುವ ಒಂದು ಬಡ, ಛಿದ್ರಗೊಂಡ ದೇಶದ ನಾಯಕನಿಗೆ ಇಷ್ಟು ಧೈರ್ಯ ಬರಲು ಹೇಗೆ ಸಾಧ್ಯ?

ರೇಣುಕಾ ಮಂಜುನಾಥ್, ಲೇಖಕಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಆರ್‌ಎಸ್‌ಎಸ್ ಪ್ರತಿಪಾದಿಸುವ ಮೂಲಭೂತವಾದಿ ಸಿದ್ಧಾಂತದ ಪರಿಣಾಮದಿಂದಲೇ ಇಂದು ನ್ಯಾಯಾಂಗದ ಮುಖ್ಯಸ್ಥರ ಮೇಲೆ ಶೂ ಎಸೆಯುವಂತಹ ವಾತಾವರಣ ಸೃಷ್ಟಿಯಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನಿಂದಿಸುವ ಮನಃಸ್ಥಿತಿ ಬೆಳೆದಿದೆ.

ಪ್ರಿಯಾಂಕ್ ಖರ್ಗೆ, ಐ.ಟಿ.– ಬಿ.ಟಿ. ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 13-10-2000

• ನರಸಿಂಹ ರಾವ್, ಬೂಟಾಸಿಂಗ್‌ಗೆ 3 ವರ್ಷ ಕಠಿಣ ಜೈಲುಶಿಕ್ಷೆ

ನವದೆಹಲಿ, ಅ. 12– ತಮ್ಮ ಸರ್ಕಾರವನ್ನು ಅವಿಶ್ವಾಸ ಗೊತ್ತುವಳಿಯಿಂದ ರಕ್ಷಿಸಲು ಜಾರ್ಖಂಡ್ ಮುಕ್ತಿ ಮೋರ್ಚಾದ ಲೋಕಸಭಾ ಸದಸ್ಯರಿಗೆ ಲಂಚ ನೀಡಿದ ಹಗರಣದಲ್ಲಿ ಅಪರಾಧಿಗಳೆಂದು ಸಾಬೀತಾಗಿರುವ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಮಾಜಿ ಸಚಿವ ಬೂಟಾ ಸಿಂಗ್ ಅವರಿಗೆ, ವಿಶೇಷ ನ್ಯಾಯಾಲಯ ಇಂದು ತಲಾ ಮೂರು ವರ್ಷಗಳ ಕಠಿಣ ಜೈಲು ವಾಸ ಹಾಗೂ ಎರಡು ಲಕ್ಷ ರೂಪಾಯಿ ದಂಡ ವಿಧಿಸಿತು.

ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಸಲುವಾಗಿ ನವೆಂಬರ್ 8ರವರೆಗೆ ಇಬ್ಬರಿಗೂ ತಲಾ ಎರಡು ಲಕ್ಷ ರೂಪಾಯಿ ವೈಯಕ್ತಿಕ ಬಾಂಡಿನ ಭದ್ರತೆಯ ಮೇಲೆ ಜಾಮೀನು ನೀಡಲಾಗಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 13-10-1950

• ಜ್ಯೋತಿಷ್ಯ ಸುಳ್ಳೆ?

ಶ್ರೀನಗರ, ಅ. 12– ಕಾಶ್ಮೀರದಲ್ಲಿ ಮಂಗಳವಾರ ಭಾರಿ ಭೂಕಂಪವಾಗುವುದೆಂದು ಭವಿಷ್ಯ ನುಡಿದು ಪೆಟ್ಟು ತಿಂದ ಶ್ರೀನಗರದ ಜ್ಯೋತಿಷ್ಯರು, ಕಾಶ್ಮೀರಕ್ಕೆ 1,500 ಮೈಲಿ ದೂರದ ಶಿಲಾಂಗಿನಲ್ಲಾದ ಭೂಕಂಪದ ಸುದ್ದಿಯ ಕಡೆ ಕೈತೋರಿಸುತ್ತ ನಿನ್ನೆ ತಮ್ಮ ಮನಸ್ಸಿಗೆ ಸಮಾಧಾನ ತಂದುಕೊಳ್ಳಲು ಹೆಣಗುತ್ತಿದ್ದರು.

ಚುರುಮುರಿ

ಶಾಂತಿ ಭಜನೆ

• ಸುಮಂಗಲಾ

'ನೊಬೆಲ್ ಕಪ್ ಸಿಗದಿದ್ದರೂ ಶಾಂತಿ ಸ್ಥಾಪನೆ ಕೆಲಸ ಮುಂದುವರಿಸ್ತೀನಿ ಅಂತ ಟ್ರಂಪಣ್ಣ ಘೋಷಣೆ ಮಾಡ್ಯಾನೆ. ಇನ್ಮುಂದೆ ಭೂಲೋಕದಲ್ಲಿ ಎಲ್ಲೂ ಜಗಳಾ ಅನ್ನೂದೆ ಇರಂಗಿಲ್ಲ!' ಬೆಕ್ಕಣ್ಣ ಅಭಿಮಾನದಿಂದ ಹೇಳಿತು.

'ಸೋತು ಕೆಳಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅನ್ನೂ ಮಂದಿ ಅಂವಾ' ಎಂದೆ ನಾನು.

'ಅಂವಾ ಎಲ್ಲಿ ಕೆಳಕ್ಕೆ ಬಿದ್ದಾನೆ? ಅಂವಾ ಅಗದಿ ಭಯಂಕರ ಮ್ಯಾಲೆ ಅದಾನೆ! ವೆನಿಜುವೆಲಾದ ಮಚಾದೊ ತನಗೆ ಕೊಟ್ಟ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಟ್ರಂಪಣ್ಣನಿಗೇ ಸಮರ್ಪಣೆ ಮಾಡ್ಯಾಳೆ! ರಷ್ಯಾದ ಪುಟಿನಂಕಲ್ಲೂ ನಮ್ ಟ್ರಂಪಣ್ಣನ್ನ ಹೊಗಳ್ಯಾನೆ.' ಬೆಕ್ಕಣ್ಣ ಬಲು ಉತ್ಸಾಹದಿಂದ ವರ್ಣಿಸಿತು.

'ಹಂಗಾರೆ ಟ್ರಂಪಣ್ಣ ಉಕ್ರೇನ್-ರಷ್ಯಾ ಯುದ್ಧನೂ ನಿಲ್ಲಿಸತಾನೇನು?' ನಾನು ಕೆಣಕಿದೆ.

'ಖಂಡಿತಾ ನಿಲ್ಲಸತಾನೆ!' ಬೆಕ್ಕಣ್ಣ ಭರವಸೆಯಿಂದ ನುಡಿಯಿತು.

'ಊರ ಚಿಂತಿ ಮಾಡಿ ಮುಲ್ಲಾ ಸೊರಗಿದನಂತ. ಈಗ ಊರ ಉಸಾಬರಿ ಬಿಡು. ನಮ್ ದೇಶದಾಗೆ ಶಾಂತಿ ಸ್ಥಾಪನೆ ಮಾಡೋರು ಯಾರು ಅಂತ ವಿಚಾರ ಮಾಡೂಣು' ಎಂದೆ.

'ನಮ್ ದೇಶದಾಗೆ ಎಲ್ಲಿ ಸಂಘರ್ಷ ನಡೆದೈತಿ? ಯಾರು ಜಗಳಾ ಮಾಡಾಕೆ ಹತ್ಯಾರೆ? ಕಳೆದ ಹನ್ನೊಂದು ವರ್ಷದಿಂದ ಎಲ್ಲಾ ಕಡಿಗಿ ಶಾಂತೀನೆ ತಾಂಡವವಾಡತೈತಿ! ಜಗಳ, ಸಂಘರ್ಷ ಇಂತಾವೆಲ್ಲ ಈಗ ಬರೇ ಶಬ್ದಕೋಶದ ಪದಗಳು!' ಬೆಕ್ಕಣ್ಣ ವಾದಿಸಿತು.

'ಸಿಎಎ ಕಾಯ್ದೆ ವಿರೋಧಿಸಿ ದಿಲ್ಲೀವಳಗೆ ಹೋರಾಟ ನಡೆಸಿದ್ರು. ಹೊಸ ಕೃಷಿ ಕಾಯ್ದೆ ಪ್ರತಿಭಟಿಸಿ ರೈತರು ವರ್ಷಾನುಗಟ್ಟಲೆ ಹೋರಾಟ ಮಾಡಿದ್ರು. ಮಣಿಪುರ ಸಂಘರ್ಷ ಇನ್ನಾ ಬಗೆಹರಿದಿಲ್ಲ. ಇಷ್ಟಲ್ಲದೇ ಚಿಕ್ಕಪುಟ್ಟ ಸಂಘರ್ಷಗಳು ಎಲ್ಲಾ ರಾಜ್ಯದಾಗೆ ನಡೀತಾನೆ ಇರತಾವು.' ನಾನೂ ಬಿಡದೇ ವಾದಿಸಿದೆ.

'ಮನಿ ಅಂದ್ ಮ್ಯಾಲೆ ಸಣ್ಣಪುಟ್ಟ ಮನಸ್ತಾಪ ಇರೂದೆ. ಇವೆಲ್ಲ ವಿಪಕ್ಷಗಳ ಹುನ್ನಾರ ಅಷ್ಟೇ' ಎಂದ ಬೆಕ್ಕಣ್ಣ 'ಚಿಂತ್ಯಾಕ ಮಾಡುತ್ತಿದ್ದಿ, ವಿಶ್ವಗುರುವಿದ್ದಾನೆ' ಎಂದು ಭಜನೆ ಹಾಡಿತು!

ಸಂಗತ

ಪರಭಾಷಿಕರ ಕನ್ನಡ ಕಲಿಕೆ: ಕನ್ನಡಿಗರೇ ಅಡ್ಡಿ

ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಪರಭಾಷಿಕರಿಗೆ ಇಲ್ಲಿ ಕನ್ನಡದ ಅಗತ್ಯವೇ ಬೀಳುವುದಿಲ್ಲ. ಅವರು ಕನ್ನಡದಿಂದ ದೂರವಿರಲು ಕನ್ನಡಿಗರೇ ಕಾರಣಕರ್ತರು!

• ಸಿದ್ದಯ್ಯ ಹಿರೇಮಠ

ದಾವಣಗೆರೆಯಲ್ಲಿರುವ ಒಂದು ಖಾನಾವಳಿಗೆ ಊಟಕ್ಕೆ ಹೋದಾಗ, ಬಿಹಾರ ಮತ್ತು ಉತ್ತರಪ್ರದೇಶ ಮೂಲದ ಕಾರ್ಮಿಕರು ರೊಟ್ಟಿ ಊಟ ಉಣಬಡಿಸಿದರು.

ಸಾಮಾನ್ಯವಾಗಿ ಪಬ್‌ಗಳಲ್ಲಿ, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ, ತಳ್ಳುವಗಾಡಿಗಳಲ್ಲಿನ ಪಾನಿಪೂರಿ ಅಂಗಡಿಗಳಲ್ಲಿ, ಕಟ್ಟಡ ಮತ್ತು ಇತರ ನಿರ್ಮಾಣ ವಲಯದಲ್ಲಿ ಕಂಡುಬರುತ್ತಿದ್ದ ಉತ್ತರ ಭಾರತ ಮೂಲದ ಕಾರ್ಮಿಕರು ಈಗ ಖಾನಾವಳಿಯಲ್ಲೂ ಕೆಲಸಕ್ಕೆ ಸೇರಿರುವುದನ್ನು ಕಂಡು ಅಚ್ಚರಿಯಾಯಿತು.

'ಮೊದಲು ನಾವು ಬಾರ್ ಮತ್ತಿತರ ಕಡೆಗಳಲ್ಲಿ ಕೆಲಸಕ್ಕಿದ್ದೆವು. ತಡರಾತ್ರಿವರೆಗಿನ ಕೆಲಸಕ್ಕೆ ಬೇಸತ್ತು ಈ ಕೆಲಸಕ್ಕೆ ಸೇರಿಕೊಂಡಿದ್ದೇವೆ. ಹೊಸ ಕೆಲಸದ ಜಾಗದಲ್ಲೂ ಅಷ್ಟೇ ಸಂಬಳ ಸಿಗುತ್ತಿದೆ. ಟಿಪ್ಸ್ ಸಿಗುವುದಿಲ್ಲ ಎಂಬ ಕೊರಗೊಂದನ್ನು ಬಿಟ್ಟರೆ ನೆಮ್ಮದಿ ಇದೆ. ರಾತ್ರಿ 10.30ರವರೆಗೆ ಕೆಲಸ ಇರುತ್ತದೆ. 11 ಗಂಟೆಗೆಲ್ಲ ಮಲಗಿಬಿಡುತ್ತೇವೆ. ಬಾರ್‌ಗಳಲ್ಲಾಗಿದ್ದರೆ ತಡರಾತ್ರಿ 1ರವರೆಗೂ ಕೆಲಸ ಇರುತ್ತಿತ್ತು. ರಾತ್ರಿ 12ರ ನಂತರ ನಶೆಯಲ್ಲಿ ಇರುವವರೊಂದಿಗೆ ಮಾತಿನ ಚಕಮಕಿ, ಜಗಳದಿಂದಾಗಿ ಕಿರಿಕಿರಿ ಆಗುತ್ತಿತ್ತು' ಎಂದು ಆ ಕಾರ್ಮಿಕ ಹಿಂದಿಯಲ್ಲಿ ವಿವರಿಸಿದ.

'ಕರ್ನಾಟಕಕ್ಕೆ ಬಂದು ಎಷ್ಟು ವರ್ಷವಾಯಿತು?' ಎಂದು ಪ್ರಶ್ನಿಸಿದೆ. '7 ವರ್ಷ ಕಳೆಯಿತು' ಕಾರ್ಮಿಕ ಉತ್ತರಿಸಿದ. 'ಇಷ್ಟು ವರ್ಷಗಳು ಕಳೆದರೂ ಕನ್ನಡ ಕಲಿತಿಲ್ಲವೇ?' ಎಂದೆ. 'ಸ್ವಲ್ಪಸ್ವಲ್ಪ ಕಲಿತಿದ್ದೇವೆ. ನಿಮ್ಮಂತೆಯೇ ಎಲ್ಲರೂ ನಮ್ಮೊಂದಿಗೆ ಹಿಂದಿಯಲ್ಲೇ ಮಾತಾಡುವುದರಿಂದ ಕಲಿಯುವ ಅನಿವಾರ್ಯತೆ ಎದುರಾಗಿಲ್ಲ' ಎಂದಾತ ಮುಖಕ್ಕೆ ಹೊಡೆದಂತೆ ಉತ್ತರಿಸಿದ.

'ಇಲ್ಲಿಗೆ ಬಂದ ಹೊಸತರಲ್ಲಿ ನಾನು ಬೆಂಗಳೂರಿನಲ್ಲಿ ಪಾನಿಪೂರಿ ಅಂಗಡಿಯಲ್ಲಿ ಕೆಲಸಕ್ಕಿದ್ದೆ. ಅಲ್ಲಿ ಬರುವ ಗ್ರಾಹಕರು ಅಲ್ಪಸ್ವಲ್ಪ ಅಥವಾ ಪೂರ್ಣ ಹಿಂದಿಯಲ್ಲೇ ವ್ಯವಹರಿಸುತ್ತಿದ್ದರು. ಅಪರೂಪಕ್ಕೆ ಕೆಲವರು ಕನ್ನಡದಲ್ಲಿ ಮಾತಾಡುತ್ತಿದ್ದರು. ಕೆಲವು ದಿನ ಉತ್ತರ ಭಾರತದ ಊಟ ಸಿಗುವ ದೊಡ್ಡ ಹೋಟೆಲ್ ಒಂದರಲ್ಲಿ ಕೆಲಸಕ್ಕಿದ್ದೆ. ಅಲ್ಲಿ ಶ್ರೀಮಂತರೇ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಯಾರೊಬ್ಬರೂ ಕನ್ನಡದಲ್ಲಿ ವ್ಯವಹರಿಸಲೇ ಇಲ್ಲ. ಖಾನಾವಳಿಗೆ ಬರುವ ಅರ್ಧದಷ್ಟು ಜನ ಕನ್ನಡದಲ್ಲಿ ಮಾತು ಆರಂಭಿಸುತ್ತಾರೆ. ನಾವು ಹಿಂದಿಯವರು ಎಂದು ಗೊತ್ತಾಗುತ್ತಿದ್ದಂತೆಯೇ ಕೆಲವರು ಹಿಂದಿಯಲ್ಲೇ ಮಾತಿಗಿಳಿಯುತ್ತಾರೆ. ಹಾಗಾಗಿ ನಾವು ಕನ್ನಡ ಕಲಿಯುವ ಗೋಜಿಗೆ ಹೋಗಿಲ್ಲ' ಎಂದಾತ ವಿವರಿಸಿದ.

'ನಮ್ಮ ಕೆಲವು ಸಂಬಂಧಿಗಳು, ಸ್ನೇಹಿತರು ಮಹಾರಾಷ್ಟ್ರ, ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಗೋವಾದಲ್ಲಿದ್ದಾರೆ. ಮಹಾರಾಷ್ಟ್ರ ಮತ್ತು ಗೋವಾ ಹೊರತುಪಡಿಸಿ ಮಿಕ್ಕ ಕಡೆ ಇರುವವರೆಲ್ಲ ಆಯಾ ರಾಜ್ಯಭಾಷೆ ಕಲಿತಿದ್ದಾರೆ. ಕರ್ನಾಟಕದಲ್ಲಿರುವ ನಾವು ಬೆಂಗಳೂರು ಸೇರಿ ಯಾವುದೇ ಜಿಲ್ಲೆಗೆ ಹೋದರೂ ಅಲ್ಲಿನ ಜನ ಹಿಂದಿ ಮಾತನಾಡುತ್ತಾರೆ. ಹಾಗಾಗಿ ನಮಗೆ ಪೂರ್ಣ ಪ್ರಮಾಣದಲ್ಲಿ ಕನ್ನಡ ಕಲಿಯಲಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ.

'ಕೆಜಿಎಫ್ ಸಿನಿಮಾ ನೋಡಿದ ನಂತರ ನಾವು ಯಶ್ ಅಭಿಮಾನಿಗಳಾಗಿದ್ದೇವೆ. ಪುನೀತ್ ರಾಜ್‌ಕುಮಾರ್ ಅವರ ಸಿನಿಮಾಗಳನ್ನೂ ನೋಡುತ್ತಿದ್ದೆವು. ಕನ್ನಡ ಸಿನಿಮಾಗಳನ್ನು ಅರ್ಥೈಸಿಕೊಳ್ಳಲು ಕನ್ನಡ ಕಲಿಯಬೇಕೆಂಬ ಆಸೆ ಇದೆ. ಆದರೆ, ಅವಕಾಶವೇ ಆಗುತ್ತಿಲ್ಲ. ದಕ್ಷಿಣದ ಬೇರೆ ರಾಜ್ಯಗಳಲ್ಲಿರುವ ನಮ್ಮವರು ತಿಳಿಸುವಂತೆ, ಅವರು ಆ ರಾಜ್ಯಭಾಷೆಯನ್ನು ಕಲಿಯದಿದ್ದರೆ ಸಂವಹನ ಸಮಸ್ಯೆ ತೀವ್ರವಾಗಿ ಕಾಡುತ್ತದೆಯಂತೆ. ಆಗ ಅಲ್ಲಿರುವುದು ದುಸ್ತರ ಎಂಬ ಸ್ಥಿತಿ ಇರುವುದರಿಂದ ಕಷ್ಟಪಟ್ಟು ಆಯಾ ಭಾಷೆ ಕಲಿಯುತ್ತಾರಂತೆ' ಎಂದು ಆತ ಹೇಳಿದ್ದನ್ನು ಕೇಳಿದಾಗ, 'ಕರ್ನಾಟಕಕ್ಕೆ ಉದ್ಯೋಗ ಅರಸಿ ಬರುವ ಅನ್ಯ ಭಾಷಿಕರು ಕನ್ನಡ ಕಲಿಯಲು ಇರುವ ತೊಡಕು ನಾವೇ' ಅನ್ನಿಸಿತು.

ನಮ್ಮ ಗ್ರಾಮೀಣ ಭಾಗದಲ್ಲಿರುವ ಅನೇಕ ಬ್ಯಾಂಕ್‌ಗಳಲ್ಲಿ ಉತ್ತರ ಭಾರತದವರೂ, ಆಂಧ್ರ, ತೆಲಂಗಾಣ ಮೂಲದವರೂ ನೇಮಕಗೊಂಡಿದ್ದಾರೆ. ಗ್ರಾಮೀಣರು ಬ್ಯಾಂಕ್ ಸಿಬ್ಬಂದಿ ಬಳಸುವ ಹಿಂದಿ ಅಥವಾ ತೆಲುಗಿನಲ್ಲಿ ಮಾತನಾಡದೇ ಕನ್ನಡವನ್ನೇ ಬಳಸುತ್ತಾರೆ. ಅಂತೆಯೇ ಆ ಸಿಬ್ಬಂದಿ ಅನಿವಾರ್ಯತೆಗೆ ಒಳಗಾಗಿ ಕೆಲವು ದಿನಗಳಲ್ಲೇ ಕನ್ನಡ ಕಲಿತಿದ್ದಾರೆ. ಆದರೆ, ರಾಜ್ಯದ ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ಕೆಲಸ ಅರಸಿ ಬರುವ ಅನ್ಯ ರಾಜ್ಯದವರಿಗೆ, ಬೆಂಗಳೂರಿನಲ್ಲಿ ಐ.ಟಿ.-ಬಿ.ಟಿ. ಕಂಪನಿಗಳಲ್ಲಿ ಕೆಲಸ ಮಾಡುವ ಉತ್ತರ ಭಾರತೀಯರೂ, ದಕ್ಷಿಣದ ಇತರ ರಾಜ್ಯಗಳವರಿಗೂ ನಾವು ಕನ್ನಡವನ್ನು ಪರಿಚಯಿಸದಿರುವುದು ತಲೆ ತಗ್ಗಿಸುವಂಥ ವಿಷಯ.

ತಮಿಳುನಾಡು, ಕೇರಳ, ತೆಲಂಗಾಣ ಅಥವಾ ಬೆಳಗಾವಿಯ ಗಡಿಯಲ್ಲಿರುವ ಮಹಾರಾಷ್ಟ್ರದ ಕೆಲವು ಊರುಗಳಿಗೆ ಹೋದಾಗ ಅಲ್ಲಿನವರು ನಮ್ಮೊಂದಿಗೆ ತಮ್ಮ ಭಾಷೆಯಲ್ಲೇ ಮಾತನಾಡುವುದನ್ನು ಕಂಡಿದ್ದೇನೆ. ದಾರಿ, ವಿಳಾಸ ಅಥವಾ ಇನ್ನೇನಾದರೂ ಮಾಹಿತಿ ಕೇಳಿದರೆ ಕನ್ನಡ ಗೊತ್ತಿದ್ದರೂ ಮಾತನಾಡದೇ ಸಂಜ್ಞೆಯ ಮೂಲಕ ಉತ್ತರಿಸುವುದನ್ನು ಕಂಡು ತಬ್ಬಿಬ್ಬಾಗಿದ್ದೇನೆ. ಆದರೆ, ಕರ್ನಾಟಕದಲ್ಲಿ ಬೇರೆ ರಾಜ್ಯದಿಂದ ಬರುವ ಪ್ರವಾಸಿಗರೊಂದಿಗೆ ಅವರ ಭಾಷೆಯಲ್ಲಿ ಮಾತಾಡುವುದೇ ಹೆಮ್ಮೆ ಎಂಬಂತೆ ನಾವು ಬೀಗುತ್ತೇವೆ. ಈ ಮೂಲಕ, ಅನ್ಯಭಾಷಿಕರು ಕನ್ನಡ ಕಲಿಯುವುದಕ್ಕೆ ಕನ್ನಡಿಗರಾದ ನಾವೇ ಅಡ್ಡಿಯಾಗಿದ್ದೇವೆ; ಅವರನ್ನು ಕನ್ನಡ ಕಲಿಯುವುದರಿಂದ ವಂಚಿತರಾಗುವಂತೆ ಮಾಡುತ್ತಿದ್ದೇವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಾಲಿಬಾನ್: ಪಾಕ್‌ಗೆ ದೂರ ಭಾರತಕ್ಕೆ ಇನ್ನಷ್ಟು ಹತ್ತಿರ

ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರು ನವದೆಹಲಿಯಲ್ಲಿ ಶುಕ್ರವಾರ ವಿದೇಶಾಂಗ ಸಚಿವ ಜೈ ಶಂಕರ್ ಅವರನ್ನು ಭೇಟಿ ಮಾಡಿದರು —ಎಎಫ್‌ಪಿ ಚಿತ್ರ

ಭಾರತ ಮತ್ತು ಪಾಕಿಸ್ತಾನ ಹಾಗೂ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದ ನಡುವಿನ ಸಂಬಂಧ ಹಳಸಿರುವ ಸಂದರ್ಭದಲ್ಲಿ ತಾಲಿಬಾನ್ ಸಚಿವರು ಭಾರತಕ್ಕೆ ಭೇಟಿ ನೀಡಿರುವುದು ಭೌಗೋಳಿಕ ರಾಜಕೀಯದ ದೃಷ್ಟಿಯಿಂದ ಮಹತ್ವ ಪಡೆದಿದೆ. ಭಾರತವು ಅಫ್ಗನ್‌ನಲ್ಲಿರುವ ತಾಲಿಬಾನ್ ಆಡಳಿತವನ್ನು ಇನ್ನೂ ಅಂಗೀಕರಿಸಿಲ್ಲ. ಆದರೆ, ಅನೌಪಚಾರಿಕ ಸಂಬಂಧ ಹೊಂದಿದೆ. ಈಗ ಎರಡೂ ದೇಶಗಳು ತಮ್ಮ ರಾಜತಾಂತ್ರಿಕ ಸಂಬಂಧವನ್ನು ವೃದ್ಧಿಸಲು ಮುಂದಾಗಿವೆ. ಇದು ನೆರೆಯ ಪಾಕಿಸ್ತಾನದ ಕಣ್ಣು ಕೆಂಪಾಗಿಸಿದೆ

ಪ್ರಜಾವಾಣಿ ವಾರ್ತೆ

ಕೆಲವೇ ವರ್ಷಗಳ ಹಿಂದೆ ಊಹಿಸಿಕೊಳ್ಳಲೂ ಅಸಾಧ್ಯವಾಗಿದ್ದ ವಿದ್ಯಮಾನ ನಡೆದಿದೆ. ಅಫ್ಗಾನಿಸ್ತಾನದಲ್ಲಿ ಅಧಿಕಾರ ನಡೆಸುತ್ತಿರುವ ತಾಲಿಬಾನ್ ಸರ್ಕಾರದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಪ್ರವಾಸಕ್ಕಾಗಿ ಭಾರತಕ್ಕೆ ಬಂದಿದ್ದಾರೆ. ವಾರದವರೆಗೆ ಅವರು ಇಲ್ಲಿ ಇರಲಿದ್ದಾರೆ. ಭಾರತದೊಂದಿಗೆ ರಾಜತಾಂತ್ರಿಕ, ವ್ಯಾಪಾರ ಮತ್ತು ಆರ್ಥಿಕ ಒಪ್ಪಂದಗಳ ಬಗ್ಗೆ ಅವರು ಕೇಂದ್ರ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚೆಗಳನ್ನು ನಡೆಸುತ್ತಿದ್ದಾರೆ.

ಇದು ವಿಶೇಷ ವಿದ್ಯಮಾನ ಎನ್ನಲು ಕಾರಣಗಳಿವೆ; 1994ರಲ್ಲಿ ತಾಲಿಬಾನ್ ಹುಟ್ಟು ಪಡೆದಾಗ ಅದು ಪಾಕಿಸ್ತಾನಿ ಬೆಂಬಲಿತ ಮತ್ತೊಂದು ಭಯೋತ್ಪಾದಕ ಗುಂಪು ಎಂದೇ ಭಾರತ ಭಾವಿಸಿತ್ತು. ಭಾರತವು ಇರಾನ್ ಮತ್ತು ರಷ್ಯಾದೊಂದಿಗೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ವಿರೋಧಿಗಳನ್ನು ಬೆಂಬಲಿಸುತ್ತಿತ್ತು. 2001ರಲ್ಲಿ ಅಮೆರಿಕವು ಅಫ್ಗನ್ ಮೇಲೆ ಹಿಡಿತ ಸಾಧಿಸಿ, ಅಲ್ಲಿ ಅಮೆರಿಕ ಬೆಂಬಲಿತ ಸರ್ಕಾರ ರಚನೆಯಾದ ಮೇಲೆ ಭಾರತ ನಿರಂತರ 20 ವರ್ಷ ಆ ಸರ್ಕಾರವನ್ನು ಬೆಂಬಲಿಸಿತು. 1999ರಲ್ಲಿ ಭಾರತದ ವಿಮಾನವನ್ನು ಅಪಹರಿಸಿದ್ದವರಿಗೆ ತಾಲಿಬಾನ್ ಆಶ್ರಯ ನೀಡಿದೆ ಎಂದು ಭಾರತ ಭಾವಿಸಿತ್ತು. ಜತೆಗೆ, ತನ್ನ ನಾಲ್ವರು ಅಧಿಕಾರಿಗಳ ಸಾವಿಗೆ ಕಾರಣವಾಗಿದ್ದ 2008ರ ಕಾಬೂಲ್ ಉಗ್ರ ದಾಳಿಯ ಬಗ್ಗೆಯೂ ಭಾರತ ಅಸಮಾಧಾನ ವ್ಯಕ್ತಪಡಿಸಿತ್ತು. ಹೀಗೆ ವಿವಿಧ ಕಾರಣಗಳಿಂದ ತಾಲಿಬಾನ್ ಮತ್ತು ಭಾರತದ ನಡುವಿನ ಸಂಬಂಧ ಹಳಸಿತ್ತು.

2021ರಲ್ಲಿ ತಾಲಿಬಾನ್ ಸಂಘಟನೆಯು ಅಫ್ಗಾನಿಸ್ತಾನದ ಸರ್ಕಾರವನ್ನು ಪದಚ್ಯುತಗೊಳಿಸಿ ಅಧಿಕಾರವನ್ನು ಕೈವಶ ಮಾಡಿಕೊಂಡ ನಂತರ ಅಲ್ಲಿನ ಭಾರತದ ರಾಯಭಾರ ಕಚೇರಿಯನ್ನು ಮುಚ್ಚಲಾಗಿತ್ತು. ವೀಸಾ ನೀಡುವುದನ್ನು ಸ್ಥಗಿತಗೊಳಿಸಿತ್ತು. ಅನಿವಾರ್ಯ ಕಾರಣಗಳಿಗಾಗಿ ಕೆಲವೇ ಕೆಲವು ಸಿಬ್ಬಂದಿಯನ್ನು ಮಾತ್ರ ಅಲ್ಲಿ ನಿಯೋಜಿಸಲಾಗಿತ್ತು. ಮೇಲಾಗಿ, ತಾಲಿಬಾನ್ ಸರ್ಕಾರವನ್ನು ಇದುವರೆಗೂ ಭಾರತ ಅಂಗೀಕರಿಸಿಯೇ ಇಲ್ಲ. ಇಂಥ ಹಿನ್ನೆಲೆ ಇದ್ದರೂ ಮುತ್ತಾಕಿ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ. ಈ ಭೇಟಿ ಎರಡೂ ದೇಶಗಳ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹತ್ವ ಪಡೆದಿದೆ. ತಾಲಿಬಾನ್ ಸಚಿವರೊಬ್ಬರು ಭಾರತಕ್ಕೆ ಭೇಟಿ ನೀಡುತ್ತಿರುವುದೇ ಇದೇ ಮೊದಲು.

ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರವನ್ನು ಸಂಪೂರ್ಣವಾಗಿ ಅಂಗೀಕರಿಸಿರುವುದು ರಷ್ಯಾ ಒಂದೇ. ಅಮೆರಿಕವು ಮುತ್ತಾಕಿ ಅವರ ಪ್ರಯಾಣದ ಮೇಲೆ ನಿರ್ಬಂಧ ವಿಧಿಸಿರುವುದರಿಂದ ರಷ್ಯಾ ಮೂಲಕವೇ ಅವರು ಭಾರತಕ್ಕೆ ಬಂದಿದ್ದಾರೆ. ಮುತ್ತಾಕಿ ಅವರ ಭೇಟಿಯಿಂದ ದೇಶದ ಅಭಿವೃದ್ಧಿ, ಪ್ರಾದೇಶಿಕ ಸ್ಥಿರತೆಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಇನ್ನೊಂದೆಡೆ, ಭಾರತವನ್ನು ತನ್ನ ಆಪ್ತ ಸ್ನೇಹಿತ ಎಂದು ಬಣ್ಣಿಸಿರುವ ಮುತ್ತಾಕಿ, ಎರಡೂ ದೇಶಗಳ ಸಂಬಂಧ ವೃದ್ಧಿಗೆ ಈ ಭೇಟಿ ನೆರವಾಗಲಿದೆ ಎಂದಿದ್ದಾರೆ.

ಶತ್ರುವಿನ ಶತ್ರು ಮಿತ್ರ: ವಾಸ್ತವವಾಗಿ, ಭಾರತವು ತಾಲಿಬಾನ್‌ನೊಂದಿಗೆ ಸ್ನೇಹಹಸ್ತ ಚಾಚಲು ಮುಖ್ಯ ಕಾರಣ, ಪಾಕಿಸ್ತಾನ. ಪಾಕಿಸ್ತಾನವು ತಾಲಿಬಾನ್‌ನ ಮೊದಲ ಆಡಳಿತ ಅವಧಿಯಲ್ಲಿ (1996–2001) ಅದರೊಂದಿಗೆ ಉತ್ತಮ ಸಂಬಂಧ ಹೊಂದಿತ್ತು. ಆದರೆ, ಎರಡನೇ ಅವಧಿಯಲ್ಲಿ ಅವರ ಸಂಬಂಧದಲ್ಲಿ ಬಿರುಕು ಮೂಡಿ, ಅದು ಹಿರಿದಾಗುತ್ತಲೇ ಸಾಗಿತು. ಪಾಕಿಸ್ತಾನದ ರಕ್ಷಣಾ ಸಚಿವರು 'ಅಫ್ಗಾನಿಸ್ತಾನ ನಮ್ಮ ಶತ್ರು ದೇಶ' ಎಂದು ಕರೆಯುವ ಮಟ್ಟಿಗೆ ಸಂಬಂಧ ಹಳಸಿತು. ಪಾಕಿಸ್ತಾನದೊಂದಿಗೆ ದೂರವಾದಷ್ಟೂ ತಾಲಿಬಾನ್, ಭಾರತಕ್ಕೆ ಹತ್ತಿರವಾಗತೊಡಗಿತು.

ಹಾಗೆಂದು ತಾಲಿಬಾನ್ ಸಚಿವರ ಭಾರತ ಭೇಟಿ ತೀರಾ ಆಕಸ್ಮಿಕವೇನಲ್ಲ. ಭಾರತವು ಹಂತಹಂತವಾಗಿ ತಾಲಿಬಾನ್ ಜತೆಗಿನ ಸಂಬಂಧವನ್ನು ಉತ್ತಮಪಡಿಸುತ್ತಿದೆ. 2021ರಿಂದ, ತಾಲಿಬಾನ್ ಸರ್ಕಾರವನ್ನು ಅಂಗೀಕರಿಸದಿದ್ದರೂ, ಮಾನವೀಯತೆಯ ಆಧಾರದಲ್ಲಿ ಆರಂಭದಿಂದಲೂ ನೆರವು ನೀಡುತ್ತಿದೆ. 2021ರಲ್ಲಿ ಅಫ್ಗನ್‌ನೊಂದಿಗೆ ಎಲ್ಲ ಸಂಪರ್ಕ ಕಡಿದುಕೊಂಡಿದ್ದ ಭಾರತವು 2022ರ ಜೂನ್‌ನಲ್ಲಿ ಅದರೊಂದಿಗೆ ಸಣ್ಣ ಮಟ್ಟದ ಸಂವಹನ ಆರಂಭಿಸಿತ್ತು. ನಂತರ ವೀಸಾ ನೀಡಲು ಆರಂಭಿಸಿತು. ಕಳೆದ ನವೆಂಬರ್‌ನಲ್ಲಿ ದೆಹಲಿಯಲ್ಲಿ ರಾಜತಾಂತ್ರಿಕ ಅಧಿಕಾರಿಯನ್ನು ನೇಮಿಸಿದ ತಾಲಿಬಾನ್, ಮೊದಲು ಮುಂಬೈ, ನಂತರ ಹೈದರಾಬಾದ್‌ನಲ್ಲಿ ಕಾನ್ಸಲ್ ಕಚೇರಿಗಳನ್ನೂ ಆರಂಭಿಸಿತು. ಇದರ ಜತೆಗೆ, ಮೂರು ವರ್ಷಗಳಿಂದಲೂ ಎರಡು ದೇಶಗಳ ಪ್ರತಿನಿಧಿಗಳು ಹೊರದೇಶಗಳಲ್ಲಿ ಹಲವು ಬಾರಿ ಭೇಟಿ ಮಾಡಿ ಸಂಬಂಧ ಸುಧಾರಣೆಯ ಬಗ್ಗೆ ಮಾತುಕತೆ ನಡೆಸಿದ್ದರು. ಈಗ ತಾಲಿಬಾನ್ ಸರ್ಕಾರದ ಸಚಿವರೇ ಭಾರತ ಭೇಟಿಗೆ ಆಗಮಿಸಿದ್ದಾರೆ.

ಆಧಾರ: ಪಿಟಿಐ, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್

ತಾಲಿಬಾನ್ ಜತೆ ಸ್ನೇಹಕ್ಕೆ ವಿರೋಧ

ಭಾರತವು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರದ ಜತೆಗೆ ಸಂಬಂಧವೃದ್ಧಿಯ ಪ್ರಯತ್ನಗಳನ್ನು ನಡೆಸುತ್ತಿರುವುದಕ್ಕೆ ಕೆಲವರು ವಿರೋಧ ವ್ಯಕ್ತವಾಗಿದೆ. ಹಿಂದೂ ರಾಷ್ಟ್ರೀಯವಾದಿ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರವು ತಾಲಿಬಾನ್‌ನಂಥ ಮತೀಯವಾದಿ ಮುಸ್ಲಿಂ ಸರ್ಕಾರದೊಂದಿಗೆ ಕೈಜೋಡಿಸುತ್ತಿರುವುದರ ಬಗ್ಗೆ ಕಳವಳವೂ ವ್ಯಕ್ತವಾಗಿದೆ. ದೆಹಲಿಯ ಅಫ್ಗಾನಿಸ್ತಾನದ ರಾಯಭಾರ ಕಚೇರಿಯಲ್ಲಿ ನಡೆದ ಮಾಧ್ಯಮಗೋಷ್ಠಿಗೆ ಪತ್ರಕರ್ತೆಯರನ್ನು ನಿರ್ಬಂಧಿಸಲಾಗಿತ್ತು. ಅದರ ಬಗ್ಗೆಯೂ ಕೇಂದ್ರ ಸರ್ಕಾರ ಟೀಕೆಗೆ ಗುರಿಯಾಗಿದೆ.

ಸಂದೇಹದಿಂದಲೇ ಕಂಡಿದ್ದ ಭಾರತ

ಭಾರತ ಮತ್ತು ತಾಲಿಬಾನ್ ಸಂಬಂಧ ಯಾವತ್ತೂ ಉತ್ತಮವಾಗಿರಲಿಲ್ಲ. 1996–2001ರ ನಡುವೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವಿದ್ದಾಗ ಭಾರತ ಅದರೊಂದಿಗೆ ರಾಜತಾಂತ್ರಿಕ ಸಂಬಂಧ ಹೊಂದಿರಲಿಲ್ಲ. ಅಮೆರಿಕ ನೇತೃತ್ವದ ಪಡೆಗಳು 2001ರಲ್ಲಿ ತಾಲಿಬಾನ್‌ನಿಂದ ಅಧಿಕಾರ ಕಸಿದುಕೊಂಡು ಪ್ರಜಾಸತ್ತಾತ್ಮಕವಾಗಿ ಹೊಸ ಸರ್ಕಾರ ರಚನೆಯಾದಾಗ, ಭಾರತ ಹೊಸ ಸರ್ಕಾರವನ್ನು ಬೆಂಬಲಿಸಿತ್ತು. ಅಲ್ಲದೇ 2001ರ ಬಳಿಕ 300 ಕೋಟಿ ಡಾಲರ್‌ನಷ್ಟು (ಈಗಿನ ಮೌಲ್ಯದ ಪ್ರಕಾರ ಅಂದಾಜು ₹26,600 ಕೋಟಿ) ವ್ಯಯಿಸಿ ಹೊಸ ಅಫ್ಗಾನಿಸ್ತಾನ ನಿರ್ಮಾಣಕ್ಕೆ ನೆರವಾಗಿತ್ತು. 2021ರಲ್ಲಿ ಮತ್ತೆ ತಾಲಿಬಾನ್ ಅಧಿಕಾರಕ್ಕೆ ಬಂದಾಗಲೂ ಅದರೊಂದಿಗಿನ ರಾಜತಾಂತ್ರಿಕ ಸಂಬಂಧ ಕಡಿದುಕೊಂಡಿತ್ತು. ಮಾನವೀಯ ನೆರವಿನಂತಹ ಸಾಮಾಜಿಕ ಕಾರ್ಯಗಳಿಗಷ್ಟೇ ಒತ್ತು ನೀಡಿತ್ತು.

ತಾಲಿಬಾನ್ ಸಂಘಟನೆಯು ಪಾಕಿಸ್ತಾನದೊಂದಿಗೆ ಉತ್ತಮ ಒಡನಾಟ ಹೊಂದಿದ್ದು ಭಾರತವು ಅದರಿಂದ ಅಂತರ ಕಾಯ್ದುಕೊಳ್ಳಲು ಪ್ರಮುಖ ಕಾರಣ. ತಾಲಿಬಾನ್, ಪಾಕಿಸ್ತಾನದ ಇನ್ನೊಂದು ಮುಖ ಎಂಬ ಸಂದೇಹ ಭಾರತಕ್ಕೆ ಇತ್ತು. ತನ್ನ ಮೇಲೆ ಹಗೆ ಸಾಧಿಸಲು ಪಾಕಿಸ್ತಾನವು ತಾಲಿಬಾನ್ ಸಂಘಟನೆಯನ್ನು ಬಳಸಬಹುದು ಎಂಬ ಅನುಮಾನವೂ ಅದಕ್ಕಿತ್ತು.

ಬದಲಾದ ನೀತಿ: ಈಗ ಚಿತ್ರಣ ಬದಲಾಗಿದೆ. ಅದರೊಂದಿಗೆ ಅಫ್ಗಾನಿಸ್ತಾನ ಕುರಿತಂತೆ ಭಾರತದ ನೀತಿಯೂ ಬದಲಾದಂತೆ ಕಾಣುತ್ತಿದೆ.

ತಾಲಿಬಾನ್–ಪಾಕಿಸ್ತಾನದ ಸಂಬಂಧ ಹಳಸಿದೆ. ಐಎಸ್, ಅಲ್‌ಖೈದಾದಂತಹ ಉಗ್ರ ಸಂಘಟನೆಗಳು ಭಾರತದ ಮೇಲೆ ದಾಳಿ ನಡೆಸಲು ಅಫ್ಗಾನಿಸ್ತಾನದ ನೆಲವನ್ನು ಬಳಸಬಹುದು ಎಂಬ ಆತಂಕ ಭಾರತಕ್ಕೆ ಇದೆ. ಆದರೆ, ಬೇರೆ ದೇಶಗಳ ಮೇಲೆ ದಾಳಿ ನಡೆಸಲು ತನ್ನ ನೆಲವನ್ನು ಬಳಸಿಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ತಾಲಿಬಾನ್ ಆಡಳಿತ ಸ್ಪಷ್ಟವಾಗಿ ಹೇಳಿದೆ. ಅಲ್ಲದೇ ಅದು ಸ್ನೇಹ ಹಸ್ತವನ್ನೂ ಚಾಚಿದೆ. ಚೀನಾ ಮತ್ತು ಪಾಕಿಸ್ತಾನ ಪ್ರಭಾವವನ್ನು ಕಡಿಮೆಗೊಳಿಸಲು ಇರಾನ್ ಮತ್ತು ಮಧ್ಯ ಏಷ್ಯಾ ರಾಷ್ಟ್ರಗಳೊಂದಿಗೆ ಸಂಪರ್ಕ ಸಾಧಿಸಲು ಅಫ್ಗಾನಿಸ್ತಾನ ಮುಖ್ಯ. ಹೀಗಾಗಿ, ತಾಲಿಬಾನ್ ಆಡಳಿತವನ್ನು ಅಧಿಕೃತವಾಗಿ ಅಂಗೀಕರಿಸದಿದ್ದರೂ ಅದರೊಂದಿಗಿನ ರಾಜತಾಂತ್ರಿಕ ಬಾಂಧವ್ಯವನ್ನು ಸುಧಾರಿಸುವ ದಿಸೆಯಲ್ಲಿ ಭಾರತ ಎಚ್ಚರಿಕೆ ಇಟ್ಟಿದೆ ಎಂದು ವಿಶ್ಲೇಷಿಸಲಾಗುತ್ತಿದೆ.



ಅಂದು ಪರಮಾಪ್ತ, ಇಂದು ಬದ್ಧವೈರಿ

ಪಾಕಿಸ್ತಾನ ಮತ್ತು ತಾಲಿಬಾನ್ ಹಿಡಿತದಲ್ಲಿದ್ದ ಅಫ್ಗಾನಿಸ್ತಾನ ಒಂದು ಕಾಲದಲ್ಲಿ ಆಪ್ತ ರಾಷ್ಟ್ರಗಳು. ಆದರೆ, ಈಗ ಇವೆರಡೂ ವೈರಿ ದೇಶಗಳಾಗಿ ಮಾರ್ಪಟ್ಟಿವೆ. ತಾಲಿಬಾನ್ ಈಗ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದುತ್ತಿರುವುದು ಪಾಕಿಸ್ತಾನದ ಕೆಂಗಣ್ಣಿಗೆ ಗುರಿಯಾಗಿದೆ. ಇದೇ ಹೊತ್ತಿನಲ್ಲಿ, ಎರಡೂ ರಾಷ್ಟ್ರಗಳ ನಡುವೆ ಸೇನಾ ಸಂಘರ್ಷವೂ ಆರಂಭವಾಗಿದೆ. ಹಾಗಾಗಿ, ಅಫ್ಗನ್ ಜೊತೆಗಿನ ಅದರ ಸಂಬಂಧ ಸರಿಪಡಿಸಲಾಗದಷ್ಟು ಹದಗೆಟ್ಟಿದೆ.

1996-2001ರ ನಡುವೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವಿದ್ದಾಗ ಪಾಕಿಸ್ತಾನವು ಅದರೊಂದಿಗೆ ಉತ್ತಮ ಬಾಂಧವ್ಯ ಹೊಂದಿತ್ತು. 2001ರಲ್ಲಿ ಅದರ ಆಡಳಿತ ಪತನಗೊಂಡ ನಂತರವೂ ಪಾಕಿಸ್ತಾನ ತಾಲಿಬಾನ್‌ನೊಂದಿಗೆ ಉತ್ತಮ ಸಂಬಂಧವನ್ನು ಮುಂದುವರಿಸಿತ್ತು. 2021ರಲ್ಲಿ ತಾಲಿಬಾನ್ ಮತ್ತೆ ಅಧಿಕಾರಕ್ಕೆ ಬಂದ ನಂತರ ಆರಂಭದಲ್ಲಿ ಉತ್ತಮ ಸಂಬಂಧ ಇದ್ದರೂ ಇತ್ತೀಚಿನ ವರ್ಷಗಳಲ್ಲಿ ಅದು ಹಳಸಿದೆ.

ತಾಲಿಬಾನ್ ಆಡಳಿತವನ್ನು ಸದಾ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು ಎಂಬ ಲೆಕ್ಕಾಚಾರದಲ್ಲಿ ಪಾಕಿಸ್ತಾನ ಇತ್ತು. ಆದರೆ, ಎರಡನೇ ಬಾರಿ ಅಧಿಕಾರಕ್ಕೆ ಏರಿದ ನಂತರ ತಾಲಿಬಾನ್, ಭಾರತ ಸೇರಿದಂತೆ ಇತರ ದೇಶಗಳೊಂದಿಗೆ ಉತ್ತಮ ರಾಜತಾಂತ್ರಿಕ ಬಾಂಧವ್ಯ ಹೊಂದಲು ಯತ್ನಿಸುತ್ತಿದೆ. ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುತ್ತಿದೆ. ನೆರೆ ರಾಷ್ಟ್ರದ ಒತ್ತಡಕ್ಕೆ ಮಣಿಯುತ್ತಿಲ್ಲ. ಅಲ್ಲದೇ ಅದರ ಕೈಗೊಂಬೆಯಾಗಿ ಇರಲು ಒಪ್ಪುತ್ತಿಲ್ಲ. ಇದು ಪಾಕಿಸ್ತಾನದ ಅಸಮಾಧಾನಕ್ಕೆ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ.

ಜೊತೆಗೆ, ತೆಹ್ರಿಕ್–ಇ–ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಭಯೋತ್ಪಾದಕ ಸಂಘಟನೆಯು ಪಾಕಿಸ್ತಾನದ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿದೆ. ಈ ಸಂಘಟನೆಗೆ ತಾಲಿಬಾನ್ ಬೆಂಬಲ ನೀಡುತ್ತಿದ್ದು, ಅದರ ಮುಖಂಡರಿಗೆ ಅಫ್ಗಾನಿಸ್ತಾನದಲ್ಲಿ ಆಶ್ರಯ ನೀಡಿದೆ. ತನ್ನ ನೆಲದಲ್ಲಿ ದುಷ್ಕೃತ್ಯಗಳನ್ನು ಎಸಗಲು ನೆರವು ನೀಡುತ್ತಿದೆ ಎಂಬುದು ಪಾಕಿಸ್ತಾನದ ಆರೋಪ. ಈ ಸಂಘಟನೆಯು ಒಂದು ವರ್ಷದಲ್ಲಿ ಪಾಕ್ ನೆಲದಲ್ಲಿ ಕನಿಷ್ಠ 600 ದಾಳಿಗಳನ್ನು ಸಂಘಟಿಸಿದೆ ಎಂದು ಅಂದಾಜಿಸಲಾಗಿದೆ. ದಾಳಿಯಲ್ಲಿ ಸೈನಿಕರು ಹಾಗೂ ನಾಗರಿಕರು ಭಾರಿ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ.

ಈಗ ತಾಲಿಬಾನ್ ಆಡಳಿತವು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸುವತ್ತ ಹೆಜ್ಜೆ ಹಾಕಿರುವುದು ಅದನ್ನು ಇನ್ನಷ್ಟು ಕೆರಳಿಸಿದೆ. ಶುಕ್ರವಾರ ಅಲ್ಲಿನ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಮತ್ತು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದ ನಂತರ ಬಿಡುಗಡೆ ಮಾಡಿದ ಜಂಟಿ ಹೇಳಿಕೆಯಲ್ಲಿ ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಮತ್ತು ಭಯೋತ್ಪಾದನೆ ಪಾಕ್‌ನ ಆಂತರಿಕ ವಿಚಾರ ಎಂದು ಹೇಳಿರುವುದಕ್ಕೆ ಪಾಕಿಸ್ತಾನವು ತನ್ನಲ್ಲಿರುವ ಅಫ್ಗನ್ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡು ಪ್ರತಿಭಟನೆ ದಾಖಲಿಸಿದೆ. ಈ ಭೇಟಿಯ ಹೊತ್ತಿನಲ್ಲೇ ಕಾಬೂಲ್ ಮೇಲೆ ವಾಯುದಾಳಿ ನಡೆಸಿದೆ. ಗಡಿಯಲ್ಲಿ ಎರಡೂ ಸೇನೆಗಳ ನಡುವೆ ಭಾರಿ ಕಾಳಗ ಆರಂಭವಾಗಿದೆ.

ರಾಷ್ಟ್ರೀಯ

ದೇಶದಲ್ಲಿ ಲಕ್ಷಕ್ಕೂ ಅಧಿಕ ಏಕೋಪಾಧ್ಯಾಯ ಶಾಲೆಗಳು

ನವದೆಹಲಿ (ಪಿಟಿಐ): ದೇಶದಲ್ಲಿ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ಒಂದು ಲಕ್ಷಕ್ಕೂ ಅಧಿಕ. ಇಂಥ ಶಾಲೆಗಳಲ್ಲಿ 33 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಆಂಧ್ರಪ್ರದೇಶದಲ್ಲಿ ಇಂಥ ಶಾಲೆಗಳ ಸಂಖ್ಯೆ ಹೆಚ್ಚು ಇದ್ದು, ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಉತ್ತರ ಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ, ಕರ್ನಾಟಕ ಹಾಗೂ ಲಕ್ಷದ್ವೀಪ ಇವೆ. ಶಿಕ್ಷಣ ಸಚಿವಾಲಯವು ಬಿಡುಗಡೆ ಮಾಡಿರುವ 2024–25ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದ ದತ್ತಾಂಶದಲ್ಲಿ ಈ ಮಾಹಿತಿ ಇದೆ.

ಏಕೋಪಾಧ್ಯಾಯ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ, ಉತ್ತರ ಪ್ರದೇಶ ಅಗ್ರಸ್ಥಾನದಲ್ಲಿದ್ದು, ನಂತರದ ಸ್ಥಾನಗಳಲ್ಲಿ ಜಾರ್ಖಂಡ್, ಪಶ್ಚಿಮ ಬಂಗಾಳ ಹಾಗೂ ಮಧ್ಯಪ್ರದೇಶ ಇವೆ ಎಂದು ಸಚಿವಾಲಯ ತಿಳಿಸಿದೆ.

ಪ್ರಮುಖ ಅಂಶಗಳು

- ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆಯಲ್ಲಿ ಇಳಿಕೆ ಆಗಿದೆ. 2022–23ನೇ ಸಾಲಿನಲ್ಲಿ 1,18,190 ಇದ್ದ ಇಂಥ ಶಾಲೆಗಳ ಸಂಖ್ಯೆ 2023–24ನೇ ಸಾಲಿನಲ್ಲಿ 1,10,971 ಇತ್ತು. ಶೇ 6ರಷ್ಟು ಇಳಿದಿದೆ
- ದೆಹಲಿಯಲ್ಲಿ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ 9 ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ 4
- ಕೇಂದ್ರಾಡಳಿತ ಪ್ರದೇಶಗಳಾದ ಪುದುಚೇರಿ, ಲಡಾಖ್, ದಾದ್ರಾ ಮತ್ತು ನಗರ ಹವೇಲಿ, ದಮನ್–ದಿಯು ಹಾಗೂ ಚಂಡೀಗಢದಲ್ಲಿ ಇಂಥ ಶಾಲೆಗಳೇ ಇಲ್ಲ
- ಏಕೋಪಾಧ್ಯಾಯ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ವಿಚಾರದಲ್ಲಿ ಕರ್ನಾಟಕವು ದೇಶದಲ್ಲಿಯೇ 5ನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಇಂಥ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 2,23,142
- ಪ್ರತಿ ಶಾಲೆಯಲ್ಲಿ ಪ್ರವೇಶ ಪಡೆಯುವ ಮಕ್ಕಳ ಸರಾಸರಿ ಸಂಖ್ಯೆ ದೃಷ್ಟಿಯಿಂದ ಚಂಡೀಗಢ ಮತ್ತು ದೆಹಲಿಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿರುವುದು ಕಂಡುಬಂದಿದೆ. ಇಲ್ಲಿ ಪ್ರತಿಶಾಲೆಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸರಾಸರಿ ಸಂಖ್ಯೆ ಕ್ರಮವಾಗಿ 1,222 ಮತ್ತು 808

ಸಚಿವಾಲಯ ಹೇಳುವುದೇನು?

- ಬೋಧನಾ ಗುಣಮಟ್ಟ ಸುಧಾರಣೆಗೆ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಶಾಲೆಗಳ ವಿಲೀನದಂತಹ ಕ್ರಮಗಳ ಮೂಲಕ 'ಶಾಲೆಗಳ ಮರುಹೊಂದಾಣಿಕೆ' ಕಾರ್ಯ ಜಾರಿಗೊಳಿಸಲಾಗಿದೆ
- ಏಕೋಪಾಧ್ಯಾಯ ಶಾಲೆಗಳು ಬೋಧನೆ–ಕಲಿಕೆ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡುತ್ತವೆ. ಶೂನ್ಯ ದಾಖಲಾತಿ ಇರುವ ಶಾಲೆಗಳ ಶಿಕ್ಷಕರನ್ನು ಏಕೋಪಾಧ್ಯಾಯ ಶಾಲೆಗಳಿಗೆ ನಿಯೋಜನೆ ಮಾಡಲಾಗುತ್ತಿದೆ

ಡೀಪ್‌ಫೇಕ್, ಎ.ಐ ನಿಯಂತ್ರಣಕ್ಕೆ ಕಾನೂನು ಅಗತ್ಯ: ನ್ಯಾ. ನಾಗರತ್ನ

ನಾಗರತ್ನ

ನವದೆಹಲಿ (ಪಿಟಿಐ): ಡೀಪ್‌ಫೇಕ್ ಮತ್ತು ಎ.ಐ ಮೂಲಕ ಮಕ್ಕಳ ಮೇಲೆ ನಡೆಯಬಹುದಾದ ದೌರ್ಜನ್ಯಗಳ ನಿಗ್ರಹಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು ಅತ್ಯಗತ್ಯವಾಗಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ ನಾಗರತ್ನ ಅವರು ಭಾನುವಾರ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಸೂಕ್ತ ಮುನ್ನೆಚ್ಚರಿಕೆಯ ಮೂಲಕ ನಾವು ದೌರ್ಜನ್ಯ ಮತ್ತು ಮಕ್ಕಳ ಕಳ್ಳಸಾಗಾಣಿಕೆಯನ್ನು ತಡೆಯಲು ಸಾಧ್ಯವಿದೆ' ಎಂದು ತಿಳಿಸಿದರು.

'ವಿಕಾಸಗೊಳ್ಳುತ್ತಿರುವ ಹೊಸ ತಂತ್ರಜ್ಞಾನಗಳು ಉಂಟು ಮಾಡುತ್ತಿರುವ ಅಪಾಯಗಳು ಜಗತ್ತಿಗೆ ತೂಗುಗತ್ತಿಯಂತಾಗಿವೆ. ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ವಿಚಾರಗಳ ಮೇಲೆ ನಿಗಾ ಇಡಲು ಮತ್ತು ಆನ್‌ಲೈನ್ ವೇದಿಕೆಗಳಲ್ಲಿ ವಯಸ್ಸಿನ ಮಿತಿ ಹೇರಲು ಕಾನೂನು ರೂಪಿಸಬೇಕು' ಎಂದರು.

'ಎಐ ಮತ್ತು ಇತರ ತಂತ್ರಜ್ಞಾನಗಳು ಹೆಣ್ಣುಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಮತ್ತು ಅವುಗಳನ್ನು ಹೇಗೆ ನಿಗ್ರಹಿಸಬಹುದು ಎಂಬುವುದರ ಕುರಿತು ಅಧ್ಯಯನಕ್ಕೆ 'ಹೆಣ್ಣುಮಕ್ಕಳ ವಿರುದ್ಧದ ಎ.ಐ ಸೈಬರ್ ಅಪರಾಧಗಳ ನಿಗ್ರಹ ಸಲಹಾ ಸಮಿತಿ' ರಚನೆಯ ಸಾಧ್ಯತೆಯನ್ನು ಸುಪ್ರೀಂ ಕೋರ್ಟ್ ಪರಿಗಣಿಸಬಹುದು' ಎಂದು ತಿಳಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಐಸಿಸಿ ಮಹಿಳಾ ವಿಶ್ವಕಪ್‌ಗೆ ಸಂಬಂಧಿಸಿದ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಐಸಿಸಿ ಮಹಿಳಾ ವಿಶ್ವಕಪ್‌ನ 2025 ಅ.5ರ ಪಂದ್ಯದ ವೇಳೆ ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕಿ ಫಾತಿಮಾ ಸನಾ ಅವರು ಭಾರತ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರ ಮುಂದೆ ಮೊಣಕಾಲೂರಿ ಅವರ ಪಾದ ಸ್ಪರ್ಶಿಸಿದರು ಎಂದು ಚಿತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

2025ರ ಅ.5ರಂದು ಭಾರತ–ಪಾಕಿಸ್ತಾನದ ನಡುವೆ ನಡೆದ ಪಂದ್ಯದ ನೇರ ಪ್ರಸಾರವಾಗಿದ್ದ ದೃಶ್ಯಾವಳಿಯನ್ನು ಪರಿಶೀಲನೆ ಮಾಡಿದಾಗ, ಫಾತಿಮಾ ಸನಾ ಅವರು ಸ್ಮೃತಿ ಮಂದಾನ ಅವರ ಪಾದ ಮುಟ್ಟಿದ ಘಟನೆ ನಡೆದಿರುವುದು ಕಾಣಲಿಲ್ಲ. ಪಂದ್ಯದ ಟಾಸ್ ಹಾಕಿದಾಗ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಪಾಕಿಸ್ತಾನದ ನಾಯಕಿ ಫಾತಿಮಾ ಸನಾ ಪರಸ್ಪರ ಕೈಕುಲುಕಲಿಲ್ಲ. ನಂತರವೂ ಎರಡೂ ತಂಡಗಳ ಆಟಗಾರ್ತಿಯರ ನಡುವೆ ಹಸ್ತಲಾಘವ ನಡೆಯಲಿಲ್ಲ. ಚಿತ್ರವನ್ನು ಕೃತಕ ಬುದ್ಧಿಮತ್ತೆ ಪತ್ತೆ ಸಾಧನಗಳಾದ ಎಐ ಆರ್ ನಾಟ್, ಸೈಟ್‌ಎಂಜಿನ್ ಮತ್ತು ಅನ್‌ಡಿಟೆಕ್ಟಬಲ್ ಎಐ ಮೂಲಕ ಪರಿಶೀಲನೆ ಮಾಡಿದಾಗ, ಅದು ಎಐ ನಿರ್ಮಿತ ಇರಬಹುದು ಎನ್ನುವುದರ ಕುರುಹುಗಳು ಸಿಕ್ಕವು. ಎಐ ನಿರ್ಮಿತ ಚಿತ್ರವನ್ನು ಹಂಚಿಕೊಳ್ಳುವುದರ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹೇಗಿರಬೇಕು ಮಕ್ಕಳು–ಪೋಷಕರ ಸಂಬಂಧ?

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಮಹಾಭಾರತದಲ್ಲಿ ಧೃತರಾಷ್ಟ್ರ ಪಾಂಡವರ ಬಗೆಗೆ ಬಹಿರಂಗದಲ್ಲಿ ಎಷ್ಟೇ ಪ್ರೀತಿ ಪ್ರಕಟಿಸಿದರೂ ಒಳಗೊಳಗೆ ತನ್ನ ಕೌರವ ಸಂತಾನ ಕುರಿತ ಪ್ರೇಮವನ್ನು ಬಚ್ಚಿಡಲಾಗುವುದಿಲ್ಲ. ಅದರಲ್ಲೂ ಭೀಮನನ್ನು ಕುರಿತಾದ ಅವನ ಅಸಹನೆ ವಿಪರೀತವಾದುದು. ಅದು ಅವನ ನೆಮ್ಮದಿಗೆ ಅಡ್ಡಿ. ಅವನೊಬ್ಬನೇ ತನ್ನ ಕುರುಸಂತತಿಗೆ ಕಂಟಕಪ್ರಾಯ ಎಂದೇ ಭಾವಿಸಿ ಭೀಮನನ್ನು ಮುಗಿಸಲು ಹೊಂಚು ಹಾಕುತ್ತಾನೆ. ಕೃಷ್ಣನ ದೂರದೃಷ್ಟಿ ಅವನನ್ನು ಕಾಪಾಡುತ್ತದೆ. ಹುಟ್ಟುಕುರುಡನಾದ ಧೃತರಾಷ್ಟ್ರ ನ್ಯಾಯ ಅನ್ಯಾಯಗಳ ವಿವೇಚನೆಯನ್ನು ಕಳೆದುಕೊಂಡು ಹೃದಯಹೀನನಾಗುವುದನ್ನು ಮಹಾಭಾರತ ಸೂಚ್ಯವಾಗಿ ತಿಳಿಸುತ್ತದೆ.

ಧೃತರಾಷ್ಟ್ರ ತಂದೆ ಮಾತ್ರವಲ್ಲ, ದೊರೆ. ರಾಷ್ಟ್ರವನ್ನು ಆಳುವವನಿಗೆ ಹೊರಗಣ್ಣು ಕುರುಡಾಗಿದ್ದರೂ ಸತ್ಯಾಸತ್ಯಗಳ ವಿಷಯದಲ್ಲಿ ಒಳಗಣ್ಣು ಸದಾ ಜಾಗೃತವಾಗಿರಬೇಕಾಗುತ್ತದೆ. ಸಾಮ್ರಾಟನಿಗೆ ಸಾಮಾನ್ಯ ಪ್ರಜೆಗಳಿಗಿಂತ ಮಕ್ಕಳು, ಪರಿವಾರದ ಮೇಲೆ ವಿಶೇಷ ಮಮತೆ ಇರಕೂಡದು. ಅದರಲ್ಲೂ ಮಕ್ಕಳ ದರ್ಪ ಮತ್ತಿತರ ಅವಿವೇಕಗಳ ವಿಷಯದಲ್ಲಿ ರಾಜಿಯಾಗಕೂಡದು. ಹಾಗೆ ನಿಷ್ಠುರವಾಗಿ ವರ್ತಿಸಿದ ಚಕ್ರವರ್ತಿಯನ್ನು ಚರಿತ್ರೆ ಮುಕ್ತಕಂಠದಿಂದ ಶ್ಲಾಘಿಸಿದೆ. ದುರಂತವೆಂದರೆ ಇತಿಹಾಸದ ಬಹುತೇಕ ರಾಜರು ಧೃತರಾಷ್ಟ್ರನ ಹಾಗೆ ಮಕ್ಕಳ ಅನೈತಿಕ ವರ್ತನೆಯನ್ನು ಆಳದಲ್ಲಿ, ಬಹಿರಂಗದಲ್ಲಿ ಬೆಂಬಲಿಸಿದವರೇ ಆಗಿದ್ದಾರೆ. ವರ್ತಮಾನದ ನೈತಿಕ ಅಧಃಪತನದ ಮೂಲ ಇಂತಹ ಚರಿತ್ರೆಯ ಗರ್ಭದಲ್ಲಿದೆ. ಈ ಹೊತ್ತಿನ ತಂದೆ ತಾಯಿಯರು ಮಕ್ಕಳ ಮೇಲೆ ತೋರುವ ಅತಿಯಾದ ಪ್ರೀತಿ ಅವರನ್ನು ಕುರುಡಾಗಿಸಿದೆ. ಅಥವಾ ಮಕ್ಕಳು ಮಾಡುವ ತಪ್ಪುಗಳಿಗೆ ಆ ಪ್ರೀತಿಯೇ ಪರೋಕ್ಷ ಪ್ರೋತ್ಸಾಹವಾಗಿದೆ. ಸುಳ್ಳು, ಕಳ್ಳತನ, ವಂಚನೆ, ಚಾಡಿ ಮತ್ತು ದುಷ್ಟ ಚಟಗಳಿಗೆ ಒಲಿದ ಮಕ್ಕಳನ್ನು ಸರಿದಾರಿಗೆ ತರಲಾಗದ ಅಸಹಾಯಕತೆಯಲ್ಲಿ ಕೆಲವರಾದರೂ ಪೋಷಕರು ನರಳುತ್ತಿದ್ದಾರೆ. ಮತ್ತೆ ಕೆಲವರು ಮಕ್ಕಳ ತಪ್ಪುಗಳ ಕೆಟ್ಟ ಸಮರ್ಥನೆಗೆ ಇಳಿದು ಅಚ್ಚರಿ ಹುಟ್ಟಿಸುತ್ತಾರೆ.

ಅನಕ್ಷರಸ್ಥ ತಂದೆ–ತಾಯಂದಿರು ಯಾವುದು ಸರಿ ಯಾವುದು ತಪ್ಪು, ಯಾವುದರ ಪರ ಇರಬೇಕು ಎಂಬುದನ್ನು ಮುಂದಿನ ಪೀಳಿಗೆಗೆ ಸಲೀಸಾಗಿ ದಾಟಿಸಬಲ್ಲರು. ತಮ್ಮ ನೈತಿಕ ಮೌಲ್ಯ ಪರಂಪರೆಯನ್ನು ಗಟ್ಟಿಗೊಳಿಸಬಲ್ಲರು. ಆದರೆ, ವಿದ್ಯಾವಂತ ತಂದೆ ತಾಯಿಯರಿಗೆ ಇದು ಸಾಧ್ಯವಾಗದೆ ಒಂದಿಡೀ ಪೀಳಿಗೆಯನ್ನು ಅನೈತಿಕ ಚಟುವಟಿಕೆಗಳ ಆರಾಧಕರನ್ನಾಗಿಸುವುದನ್ನು ಕಾಣುತ್ತಿದ್ದೇವೆ. ಹಾಗಾದರೆ, ನಮ್ಮ ಶಿಕ್ಷಣ ಎಲ್ಲಿ ಸೋಲುತ್ತಿದೆ? ಅಧಿಕಾರ ಗ್ರಹಣ ಮತ್ತು ಸಂಪತ್ತಿನ ಸಂಗ್ರಹಣೆಯ ಮಾರ್ಗಗಳನ್ನು ಕಲಿಸುವ ಅಕ್ಷರಗಳು ಬದುಕಿನ ಮೌಲ್ಯಗಳನ್ನು ಮನದಟ್ಟು ಮಾಡದಿದ್ದರೆ ಹೇಗೆ? ಕೋಟಿ ಸಂಪಾದಿಸುವ ಮಕ್ಕಳು ಹೇಳಿದ್ದೆಲ್ಲಾ ಸತ್ಯ, ಮಾಡಿದ್ದೆಲ್ಲಾ ಪುಣ್ಯ ಎಂದು ನಂಬಿದ ಎಷ್ಟೋ ತಂದೆ ತಾಯಂದಿರು ಸೋದರ ಸಂಬಂಧವನ್ನು ಕಡೆಗಣಿಸಿ ಕೊನೆಗಾಲದಲ್ಲಿ ದಿಕ್ಕಿಲ್ಲದವರಾಗಿದ್ದಾರೆ.

ಇದನ್ನು ಸರಿಪಡಿಸಿಕೊಳ್ಳಬಹುದು. ಮಕ್ಕಳನ್ನು ಉನ್ನತ ನೈತಿಕ ಮೌಲ್ಯಗಳ ವಕ್ತಾರರನ್ನಾಗಿ ಮಾಡಲು ಅವರ ವರ್ತನೆ ಹಾಗೂ ಚಟುವಟಿಕೆಗಳನ್ನು ನಿರ್ಮಮಕಾರದಿಂದ ತೂಗುವ ವಿಮರ್ಶಾತ್ಮಕ ಅಂತರವನ್ನು ಪಾಲಿಸಬೇಕು. ಮಕ್ಕಳ ಹಾಗೂ ಪೋಷಕರ ಆರೋಗ್ಯಕರ ಸಂಬಂಧಕ್ಕೆ ಇದು ಉಪಕಾರಿಯಾದುದು. ಸಂಪತ್ತಿನ ಸಂಗ್ರಹಣೆ ಹೆಚ್ಚಾದಂತೆ ಅದು ಸಮುದ್ರದ ನೀರಿನಂತಾಗಬಹುದು. ನದಿಯ ಸವಿಯನ್ನೆಲ್ಲಾ ಅರಗಿಸಿಕೊಂಡ ಸಾಗರದಂತೆ ಉಪ್ಪುಪ್ಪಾದ ನೀರು ತೀರ್ಥಕ್ಕೂ ಸಲ್ಲ ಪಾನಕ್ಕೂ ಒಲ್ಲ. ಹಾಗೆಯೇ ಧೃತರಾಷ್ಟ್ರ ಪ್ರೇಮ ನಡೆನುಡಿಗೆ ಸಲ್ಲ ನಾಡಿಗೆ ಹೊಲ್ಲ.

ಪದಬಂಧ 6192

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಪದವಿಟ್ಟರೆ ಮೋಕ್ಷವೇ ಸಿಗುವುದು! (5)
4.ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ! (3)
5.ಪದಗಳ ಅರ್ಥವನ್ನು ಹೇಳುವ ಪುಸ್ತಕ (3)
6.ಸರ ನೀಡಿ ಪ್ರಾರಂಭಿಸಿದ ಸಲ್ಲಾಪ (3)
10.ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
11.ಜೀವಿಸಿದರೂ ಶವದಂತೆ ಇರುವವನು (4)
12.ಒಳ್ಳೆಯ ದಿನವಿದು (3)
14.ಭವನದ ಹತ್ತಿರವಿರುವ ಗಂಡ (3)
16.ಕೋಟೆಯ ಮೇಲಿನ ಕೊತ್ತಳ (3)
17.ಬೆಂಗಳೂರಿನಲ್ಲಿರುವ ಭವ್ಯಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ
1.ಹದಿನೈದು ದಿನಗಳ ಅವಧಿ (2)
2.ಸವಿಯಾದುದು ಇದು (3)
3.ಇಂಪಾದ ಸ್ವರವಿದು (2)
6.ಮಧುರವಾದ ಸ್ವಪ್ನ (5)
7.ಜೊತೆಯಲ್ಲಿ ಬಾಳುವುದು (5)
8.ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸ್ತುಗಳು (3)
9.ಬಿಳಿಯ ಬಣ್ಣವನ್ನು ಹೀಗೂ ಹೇಳುತ್ತಾರೆ (3)
13.ದಿನದಲ್ಲಿ ಬಂದಿರುವ ಮಂತ್ರಿ (3)
15.ಸಂಸಾರ ಬಂಧನಕ್ಕೆ ಒಳಗಾದವನು (2)
16.ನವಗ್ರಹಗಳಲ್ಲಿ ಇದೊಂದು (2)



6191ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪದಕ 3.ಗಂಡಭೇರುಂಡ 6.ಶೆವೇ 8.ಕಸ 10.ದಶಮ 12.ರಸಿಕ 14.ಪಲ್ಲಂಗ 16.ತವಕ 17.ಕರಿ 20.ಟಪ 22.ನಂಜನಗೂಡು 23.ತಿಗರಿ

ಮೇಲಿಂದ ಕೆಳಕ್ಕೆ:
1.ಪಥಿಕ 2.ಕಳೆ 4.ಭೇಟಿ 5.ಡಬರಿ 7.ವೇದಪಾರಂಗತ 9.ಸಮಾರೋಪ 11.ಮರಣಸಂಕಟ 13.ಕರ್ನಾಟಕ 15.ಕೆಬಿನಂ 18.ರಿಪೇರಿ 19.ಸ್ನಾನ 21.ಪತಿ

ಸುಡೊಕು 6576

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8	7			2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

6575 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಅಕ್ಟೋಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಸಪ್ತಮಿ ಗಂ. 12-25 ನಕ್ಷತ್ರ: ಆರ್ದ್ರಾ ಗಂ. 12-27 ಯೋಗ: ಪರಿಘ ಗಂ. 8-10 ನಂತರ ಶಿವ ಗಂ.29-55 ಕರಣ: ಬವ ಗಂ. 12-25 ಕನ್ಯಾ ಮಾಸದ 26 ನೇ ದಿನ. ಮಳೆ ನಕ್ಷತ್ರ : ಚಿತ್ತಾ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 09-00, ಸೂರ್ಯೋದಯ : 06-24 ಸೂರ್ಯಾಸ್ತ : 06-02, ಮುಸ್ಲಿಂ ದಿನಾಂಕ : 20 ರಬಿಯುಸ್ಸಾನಿ, ಅದೃಷ್ಟ ಸಂಖ್ಯೆ : 8, 10

ಮೇಷ: ವಾಸಸ್ಥಾನದ ಬದಲಾವಣೆ ಬಯಸಿದ ನಿಮಗೆ ಹರ್ಷದ ಸಮಯವಾಗಿದೆ. ಇಷ್ಟದ ದೇವಾಲಯ ಅಥವಾ ಮನೆದೇವರ ಸ್ಥಾನಗಳಿಗೆ ಭೇಟಿ ಕೊಡುವ ಯೋಗವಿದೆ. ತವರಿನ ಸೆಳೆತ ಹೆಚ್ಚಾಗುತ್ತದೆ.

ವೃಷಭ: ನಿಮ್ಮ ಪಾತ್ರವನ್ನು ಬಹಳವಾಗಿ ಪ್ರಶಂಸಿಸಿ ಜನರು ಮಾತನಾಡುವರು. ಹೊಸ ಹಿಂಬಾಲಕರನ್ನು ಸಂಪಾದಿಸುವಿರಿ. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪಾಠ ಕಲಿಯುವಿರಿ.

ಮಿಥುನ: ಸಣ್ಣ ಸಣ್ಣ ಸಮಸ್ಯೆಗಳನ್ನು ದೊಡ್ಡ ಸಮಸ್ಯೆಯನ್ನಾಗಿ ಮಾಡಿಕೊಂಡು ಪರಿಹಾರವನ್ನು ಕ್ಲಿಷ್ಟಕರವನ್ನಾಗಿ ಮಾಡಿಕೊಳ್ಳದಿರಿ. ಸಾಕಿದ ಜಾನುವಾರು ಆರೋಗ್ಯ ನಿರ್ವಹಣೆಗೋಸ್ಕರ ಹಣವನ್ನು ವಿನಿಯೋಗ ಮಾಡುವಿರಿ.

ಕರ್ಕಾಟಕ: ಅರಣ್ಯ ಚಾರಣಿಗರಿಗೆ ಬಯಸಿದ ಸ್ಥಾನಕ್ಕೆ ತೆರಳುವ ಅವಕಾಶವು ಸಿಗದೆ ಬಹಳ ಬೇಸರವಾಗುತ್ತದೆ. ಅವಘಡವನ್ನು ಸರಿಪಡಿಸಿಕೊಂಡು ಮರೆಯಲು ಹೆಚ್ಚಿನ ಸಮಯ ಹಿಡಿಯಬಹುದು.

ಸಿಂಹ: ಆತ್ಮೀಯರ ಅಗಲಿಕೆಯಿಂದಾಗಿ ಕ್ಷಣವು ಸಹ ಯುಗಗಳನ್ನು ಕಳೆದ ಅನುಭವವಾಗಬಹುದು. ಭೂಮಿ ಖರೀದಿ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂದೀತು. ದಿನನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ.

ಕನ್ಯಾ: ಶೈಕ್ಷಣಿಕ ಹಾಗೂ ಸಾಂಸಾರಿಕ ಪರೀಕ್ಷೆಗಳೆರಡರಲ್ಲೂ ಫಲಿತಾಂಶವನ್ನು ಪಡೆಯಲು ಪ್ರಯತ್ನ ಈಗಿನದ್ದಕ್ಕಿಂತ ಹೆಚ್ಚು ಅಗತ್ಯವಿದೆ. ಮಾಡಿದ ಪ್ರಯಾಣದ ಪರಿಣಾಮವಾಗಿ ದೇಹಾಯಾಸ ಹಾಗೂ ನೋವನ್ನು ಅನುಭವಿಸುವಿರಿ.

ತುಲಾ: ಗೆಲುವು ಅತ್ಯಂತ ಸಮೀಪ ಇರುವುದು, ದೂರ ಇದ್ದಂತೆ ಭಾಸವಾಗಿ ಬೇಸರಗೊಂಡು ಕೈಬಿಡದಿರಿ. ಕೆಲಸಗಾರರ ಸಮಸ್ಯೆಗಳಿಗೆ ಸ್ಪಂದಿಸುವುದು ಅನಿವಾರ್ಯ. ಸ್ಥಿರಾಸ್ತಿಗೆ ಸಂಬಂಧಿಸಿದ ವ್ಯವಹಾರಗಳಿಂದ ಲಾಭವಿರುವುದು.

ವೃಶ್ಚಿಕ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ನೆರವಿಗೆ ನಿಲ್ಲುವರು. ಮನಸ್ಸಿಗೆ ಕಡಿವಾಣ ಹಾಕುವುದು ಉತ್ತಮ. ಭಾರತಿದೇವಿಯ ಸದ್ಪರಂಪರೆಯಲ್ಲಿ ಇರುವುದಕ್ಕೆ ಹೆಮ್ಮೆಪಡುವಂತೆ ಆಗುತ್ತದೆ.

ಧನು: ಇಂಪಾದ ವಾದ್ಯ ಸಂಗೀತ ಕದಡಿದ ನಿಮ್ಮ ಮನಸ್ಸನ್ನು ತಿಳಿಗೊಳಿಸುವಲ್ಲಿ ಸಹಕಾರಿ. ವ್ಯವಹಾರದ ಪಾರದರ್ಶಕತೆ ಶುಭವನ್ನುಂಟು ಮಾಡುತ್ತದೆ. ಹೆಚ್ಚು ಜ್ಞಾನ ಪಡೆಯುವ ಮನಸ್ಸಿನಿಂದ ಪರ ಊರಿಗೆ ತೆರಳುವ ಸಾಧ್ಯತೆ ಇದೆ.

ಮಕರ: ಕುಟುಂಬದ ವ್ಯಕ್ತಿಗಳ ನಿರೀಕ್ಷೆಗಳನ್ನು ಸೂಕ್ಷ್ಮವಾಗಿ ತಿಳಿದು ಅದರಂತೆ ಬದುಕುವುದು ಸರ್ವಕ್ಷೇಮ. ಮಕ್ಕಳ ಆಟಿಕೆ ಸಾಮಾನು ಮಾರಾಟಗಾರರಿಗೆ ಲಾಭ. ವಿವಿಧ ಹೊಸ ಮೂಲಗಳಿಂದ ಧನಾಗಮವಾಗುವುದು.

ಕುಂಭ: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪುವಂಥ ಘಟನೆ ನಡೆದ ಕಾರಣದಿಂದಾಗಿ ಮನಸ್ಸಿಗೆ ಸಮಾಧಾನವಾಗುವುದು. ಉತ್ತರ ತಿಳಿಯದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಗೋಜಿನಲ್ಲಿ ವಾಸ್ತವವನ್ನು ಮರೆಯದಿರಿ.

ಮೀನ: ಸಸ್ಯಶಾಸ್ತ್ರಜ್ಞರು ಶಿಲೀಂಧ್ರಗಳ ಅಧ್ಯಯನ ನಡೆಸುವುದಿದ್ದಲ್ಲಿ ಹೆಚ್ಚಿನ ಮುಂಜಾಗ್ರತೆ ವಹಿಸುವುದು ಸೂಕ್ತ. ಮನೆಯ ದುರಸ್ತಿ ಕಾರ್ಯಗಳು ಅಥವಾ ನೂತನ ಮನೆಯ ನಿರ್ಮಾಣವನ್ನು ಬೇಗ ಮುಗಿಸುವುದು ಸೂಕ್ತ.

ಗುಂಡಣ್ಣ

ಪ್ರಯಾಣಿಕ ವಾಹನಗಳ ರಿಟೇಲ್ ಮಾರುಕಟ್ಟೆ
ಟಾಟಾ, ಮಾರುತಿ ಪಾಲು ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತಿಂಗಳಲ್ಲಿ ಪ್ರಯಾಣಿಕ ವಾಹನಗಳ ರಿಟೇಲ್ ಮಾರುಕಟ್ಟೆಯಲ್ಲಿ ಟಾಟಾ ಮೋಟರ್ಸ್ ಮತ್ತು ಮಾರುತಿ ಸುಜುಕಿ ಇಂಡಿಯಾ ಕಂಪನಿ ಪಾಲು ಹೆಚ್ಚಳವಾಗಿದೆ.

ಇದೇ ಅವಧಿಯಲ್ಲಿ ಹುಂಡೈ ಮೋಟರ್ ಇಂಡಿಯಾ ಮತ್ತು ಟೊಯೋಟ ಕಿರ್ಲೋಸ್ಕರ್ ಮೋಟರ್‌ನ ಪಾಲು ಕಡಿಮೆಯಾಗಿದೆ ಎಂದು ಪ್ರಯಾಣಿಕ ವಾಹನಗಳ ನೋಂದಣಿ ದತ್ತಾಂಶ ತಿಳಿಸಿದೆ.

ಒಟ್ಟಾರೆ ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟದಲ್ಲಿ ಶೇ 6ರಷ್ಟು ಹೆಚ್ಚಳವಾಗಿ, 2,99,369 ವಾಹನಗಳು ಸೆಪ್ಟೆಂಬರ್‌ನಲ್ಲಿ ಮಾರಾಟವಾಗಿವೆ. ಕಿಯಾ ಇಂಡಿಯಾದ 16,727 ವಾಹನಗಳು ಮಾರಾಟವಾಗಿದ್ದು, ಮಾರುಕಟ್ಟೆಯಲ್ಲಿ ಶೇ 6.78ರಷ್ಟು ಪಾಲು ಹೊಂದಿದೆ. ದ್ವಿಚಕ್ರ ವಾಹನಗಳ ಮಾರಾಟವು ಶೇ 6.5ರಷ್ಟು ಹೆಚ್ಚಳವಾಗಿ, 12.87 ಲಕ್ಷ ವಾಹನಗಳು ಮಾರಾಟವಾಗಿವೆ.

ಪ್ರಯಾಣಿಕ ವಾಹನ ಕಂಪನಿಗಳ ಮಾರುಕಟ್ಟೆ ಪಾಲು

ಕಂಪನಿ	2025ರ ಸೆಪ್ಟೆಂಬರ್	2024ರ ಸೆಪ್ಟೆಂಬರ್
	(ಶೇಕಡವಾರು)	
ಮಾರುತಿ ಸುಜುಕಿ ಇಂಡಿಯಾ	41.17	40.83
ಟಾಟಾ ಮೋಟರ್ಸ್	13.75	11.52
ಮಹೀಂದ್ರ ಆ್ಯಂಡ್ ಮಹೀಂದ್ರ	12.58	12.67
ಹುಂಡೈ ಮೋಟರ್ ಇಂಡಿಯಾ	11.96	13.72
ಟೊಯೋಟ ಕಿರ್ಲೋಸ್ಕರ್ ಮೋಟರ್	6.78	7.35
ದ್ವಿಚಕ್ರ ವಾಹನಗಳ ವಿಭಾಗ		
ಹಿರೊ ಮೋಟೊಕಾರ್ಪ್	25.10	22.48
ಹೋಂಡಾ ಮೋಟರ್‌ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾ	25.05	27.7
ಟಿವಿಎಸ್ ಮೋಟರ್	19.11	18.36

ಕನಸಿನ ಮನೆ ಖರೀದಿ ಕಹಿ ಆಗದಿರಲಿ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ರಜತ್ (ಹೆಸರು ಬದಲಾಯಿಸಲಾಗಿದೆ) 2017ರಲ್ಲಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಿರ್ಮಾಣ ಹಂತದಲ್ಲಿರುವ ಅಪಾರ್ಟ್‌ಮೆಂಟ್ ಒಂದನ್ನು ಬುಕ್ ಮಾಡಿದರು. ಆ ಅಪಾರ್ಟ್‌ಮೆಂಟ್ ಕಟ್ಟಡವನ್ನು ಮೂರು ವರ್ಷಗಳಲ್ಲಿ ಪೂರ್ಣಗೊಳಿಸಿ ಗ್ರಾಹಕರಿಗೆ ಹಸ್ತಾಂತರ ಮಾಡಿಕೊಡುವುದಾಗಿ ಕಟ್ಟಡ ನಿರ್ಮಾಣ ಸಂಸ್ಥೆ ಹೇಳಿತ್ತು. ರಜತ್ ಖಾಸಗಿ ಬ್ಯಾಂಕ್ ಒಂದರಲ್ಲಿ ₹35 ಲಕ್ಷ ಸಾಲಕ್ಕೆ ಅರ್ಜಿ ಸಲ್ಲಿಸಿ, ಕಟ್ಟಡ ನಿರ್ಮಾಣ ಪ್ರಗತಿ ಸಾಧಿಸಿದಂತೆಲ್ಲಾ ವಿವಿಧ ಹಂತಗಳಲ್ಲಿ ಹಣ ಬಿಡುಗಡೆ ಮಾಡುವಂತೆ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡರು.

ಅದಾಗಿ ಈಗ 8 ವರ್ಷಗಳು ಕಳೆದಿವೆ. ಬ್ಯಾಂಕ್‌ನಿಂದ ಸಾಕಷ್ಟು ಹಣ ಬಿಲ್ಡರ್ ಖಾತೆಗೆ ಹರಿದಿದೆ. ಆದರೆ ಇವರೆಗೂ ರಜತ್‌ಗೆ ಅವರ ಕನಸಿನ ಮನೆ ಸಿಕ್ಕಿಲ್ಲ. ಯಾವಾಗ ಮನೆ ಸಿಗುತ್ತದೆ ಎಂದು ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಕೇಳಿದರೆ 'ಆರು ತಿಂಗಳು, ಒಂದು ವರ್ಷ' ಎಂಬ ಉತ್ತರ ಬರುತ್ತದೆ. ಇನ್ನೂ ಸ್ವಲ್ಪ ದಬಾಯಿಸಿ ಕೇಳಿದರೆ 'ನಮ್ಮ ಹತ್ತಿರ ಬಂಡವಾಳ ಇಲ್ಲ, ನಿರ್ಮಾಣ ತಡವಾಗುತ್ತೆ, ದೂರು ನೀಡಿ ಹೋಗಿ' ಎಂಬ ಉಡಾಫೆಯ ಉತ್ತರ ಸಿಗುತ್ತದೆ. ಇದು ರಜತ್ ಒಬ್ಬರ ಅನುಭವಿಸುತ್ತಿರುವ ಸಮಸ್ಯೆಯಲ್ಲ, ಬೆಂಗಳೂರಿನಲ್ಲಿ ಹಲವರು ಹೀಗೆ ವಿಶ್ವಾಸಕ್ಕೆ ಅರ್ಹವಲ್ಲದ ಸಂಸ್ಥೆಗಳಿಂದ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್‌ಗಳನ್ನು/ ಕಟ್ಟಡಗಳನ್ನು ಖರೀದಿಸಲು ಹೋಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಅತ್ತ ಸಾಲ ಮಾಡಿ, ಇತ್ತ ಮನೆ ಸಿಗದೆ, ಬಾಡಿಗೆ ಮನೆಯಲ್ಲಿ ವಾಸಿಸುತ್ತಾ ಜೀವನ ಸಾಗಿಸುವ ಪರಿಸ್ಥಿತಿ ಅವರಿಗೆ ಎದುರಾಗಿದೆ. ಹೀಗಿರುವಾಗ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್ ಅಥವಾ ಮನೆ ಖರೀದಿಸುವಾಗ ಯಾವೆಲ್ಲ ಅಂಶಗಳನ್ನು ಗಮನಿಸಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಕನಸಿನ ಮನೆ ಖರೀದಿ ಕಹಿ ಆಗಬಾರದು ಅಂದರೆ ಏನು ಮಾಡಬೇಕು ಎಂಬುದನ್ನು ವಿವರವಾಗಿ ತಿಳಿಯೋಣ.

2,600 ಯೋಜನೆಗಳು ವಿಳಂಬ: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ-ರೇರಾ) ಮೂಲಗಳಿಂದ ಸಿಗುವ ಮಾಹಿತಿ ಪ್ರಕಾರ 2025ರ ಆರಂಭದಲ್ಲಿ ಕರ್ನಾಟಕದಾದ್ಯಂತ ಸುಮಾರು 2,600 ಕಟ್ಟಡ ನಿರ್ಮಾಣ ಯೋಜನೆಗಳು ವಿಳಂಬವಾಗಿವೆ. ಈ ಪೈಕಿ 1,301 ಯೋಜನೆಗಳು ಬೆಂಗಳೂರಿನ ವ್ಯಾಪ್ತಿಯಲ್ಲಿವೆ. ಅನೇಕರು ನಿರ್ಮಾಣ ಸಂಸ್ಥೆಗಳ ವಿರುದ್ಧ ಕಾನೂನು ಸಮರ ಸಾರಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನ ಆಗಿಲ್ಲ.

ಖರೀದಿಸುವಾಗ ಗಮನಿಸಬೇಕಾದ ಅಂಶಗಳು:

ರೇರಾ ನೋಂದಣಿ ಪರಿಶೀಲಿಸಿ: ಯಾವುದೇ ವಸತಿ ಕಟ್ಟಡ ನಿರ್ಮಾಣವಾಗುತ್ತಿದ್ದರೂ ಅದಕ್ಕೆ ರೇರಾ ಸಂಖ್ಯೆ ಇರಲೇಬೇಕು. ರೇರಾ ಅನುಮತಿ ಇದೆಯೇ, ಯೋಜನೆಯ ವಿವರಗಳು ಸರಿ ಇವೆಯೇ, ಯಾವಾಗ ನಿರ್ಮಾಣ ಪೂರ್ಣಗೊಳ್ಳುತ್ತದೆ, ಎಲ್ಲಾ ಅನುಮೋದನೆಗಳನ್ನು ಪಡೆದಿದ್ದಾರೆಯೇ ಎನ್ನುವುದನ್ನು ಅಧಿಕೃತ ರೇರಾ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿ. ರೇರಾ ನೋಂದಣಿ ಇಲ್ಲದ ಆಸ್ತಿ ಖರೀದಿ ಬೇಡ.

ನಿರ್ಮಾಣ ಸಂಸ್ಥೆಯ ಹಿನ್ನೆಲೆ: ಯಾವುದೇ ಕಟ್ಟಡ ನಿರ್ಮಾಣ ಸಂಸ್ಥೆಯಿಂದ ಆಸ್ತಿ ಖರೀದಿಸಲು ಮುಂದಾಗುವಾಗ ಈ ಹಿಂದೆ ಅದು ಹೇಗೆ ಕಾರ್ಯನಿರ್ವಹಿಸಿದೆ, ಸಮಯಕ್ಕೆ ಸರಿಯಾಗಿ ಯೋಜನೆಗಳನ್ನು ಪೂರ್ಣಗೊಳಿಸಿದೆಯೇ, ಸಂಸ್ಥೆಯ ಬಗ್ಗೆ ಏನಾದರೂ ದೂರುಗಳಿವೆಯೇ ಎನ್ನುವುದನ್ನು ರೇರಾ ವೆಬ್‌ಸೈಟ್ ಮೂಲಕ ಪರಿಶೀಲಿಸಿ.

ಹಣಕಾಸಿನ ಆರೋಗ್ಯ ಹೇಗಿದೆ?: ಆಸ್ತಿ ಖರೀದಿಸುವ ಮೊದಲು, ಕಟ್ಟಡ ನಿರ್ಮಾಣ ಸಂಸ್ಥೆಯ ಆರ್ಥಿಕ ಸ್ಥಿತಿಗತಿ ಬಗ್ಗೆ ಅವಲೋಕನ ಮಾಡಿ. ವಾಣಿಜ್ಯ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಿರುವ ಲಾಭ-ನಷ್ಟದ ವಿವರಣೆಯನ್ನು ಪೂರ್ತಿಯಾಗಿ ಗಮನಿಸಿ. ಸಂಸ್ಥೆಗೆ ಏನಾದರೂ ಹಣದ ಅಡಚಣೆ ಇದ್ದರೆ ಅದರಿಂದ ದೂರ ಉಳಿಯಿರಿ.

ಕರಾರು ಪತ್ರ ಸರಿಯಾಗಿ ಓದಿ: ಕಟ್ಟಡ ನಿರ್ಮಾಣ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವಾಗ ಕರಾರು ಪತ್ರವನ್ನು ಸರಿಯಾಗಿ ಓದಿಕೊಳ್ಳಿ. ಆಸ್ತಿಯ ಖರೀದಿ ಹೇಗೆ ಆಗಿದೆ, ಜಮೀನನ್ನು ಹೇಗೆ ಸ್ವಾಧೀನ ಮಾಡಿಕೊಳ್ಳಲಾಗಿದೆ, ನಕ್ಷೆ ಮಂಜೂರಾತಿ ಮುಂತಾದ ಅಗತ್ಯ ಮಾಹಿತಿ ಅದರಲ್ಲಿರುತ್ತದೆ. ಒಂದಷ್ಟು ಸಮಯ ಕೊಟ್ಟು ಅದನ್ನೆಲ್ಲ ಗಮನಿಸಿದ ಮೇಲೆ ಸಮಾಧಾನವಾದರೆ ಖರೀದಿಸುವ ಬಗ್ಗೆ ತೀರ್ಮಾನಕ್ಕೆ ಬನ್ನಿ.

ನಿಯಮ ಉಲ್ಲಂಘನೆ: ಆಸ್ತಿಯ ಪ್ರದೇಶದಲ್ಲಿ ಹೈಟೆನ್ಷನ್ ವಯರ್ ಇದೆಯೇ, ರಾಜಕಾಲುವೆ ಸಮೀಪದಲ್ಲಿದೆಯೇ, ಬಫರ್ ಜೋನ್‌ನಲ್ಲಿ ಜಮೀನು ಇದೆಯೇ ಎಂಬ ವಿವರ ಪಡೆಯಿರಿ. ಮಾಸ್ಟರ್ ಪ್ಲಾನ್ ಪ್ರಕಾರ ಕಟ್ಟಡ ಹೇಗೆ ನಿರ್ಮಾಣವಾಗುತ್ತದೆ, ಎಷ್ಟು ಕ್ಲಬ್‌ಹೌಸ್‌ಗಳು ಬರುತ್ತವೆ, ವಾಹನ ನಿಲುಗಡೆಗೆ ಎಷ್ಟು ಜಾಗ ಇದೆ, ಮಕ್ಕಳಿಗೆ ಆಟಕ್ಕೆ ಜಾಗ ಮೀಸಲಿಡಲಾಗಿದೆಯೇ, ವಿದ್ಯುತ್ ಸರಬರಾಜು, ನೀರು ಸರಬರಾಜು, ಎಸ್‌ಟಿಪಿ, ಅಗ್ನಿ ಸುರಕ್ಷತೆ... ಹೀಗೆ ಎಲ್ಲ ಆಯಾಮಗಳಲ್ಲೂ ಪರಿಶೀಲಿಸುವುದನ್ನು ಮರೆಯಬೇಡಿ. ಎಲ್ಲದಕ್ಕಿಂತ ಮುಖ್ಯವಾಗಿ ಆಸ್ತಿಯ ಟೈಟಲ್ ಕಾನೂನುಬದ್ಧವಾಗಿದೆಯೇ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ.

ಜಂಟಿಯಾಗಿ ಆಸ್ತಿ ಅಭಿವೃದ್ಧಿ ಆಗುತ್ತಿದೆಯೇ ಅಥವಾ ಒಬ್ಬರೇ ಮಾಲೀಕರು ಆಸ್ತಿ ನಿರ್ಮಾಣ ಮಾಡುತ್ತಿದ್ದಾರೆಯೇ ನೋಡಿಕೊಳ್ಳಿ. ಒಟ್ಟಾರೆಯಾಗಿ ಆಸ್ತಿ ವಿವಾದ ರಹಿತವಾಗಿರುವುದನ್ನು ಖಚಿತ ಪಡಿಸಿಕೊಳ್ಳಿ. ಆಸ್ತಿ ಕೊಳ್ಳುವ ತೀರ್ಮಾನಕ್ಕೆ ಬರುವ ಮುನ್ನ ಆಸ್ತಿ ದಾಖಲೆಗಳ ಪರಿಶೀಲನೆಯಲ್ಲಿ ಪಕ್ವತೆ ಹೊಂದಿರುವ ಕಾನೂನು ತಜ್ಞರ ನೆರವು ಪಡೆಯಿರಿ.

ರೇರಾ ನೋಂದಾಯಿತ ನಿರ್ಮಾಣ ಸಂಸ್ಥೆಯಿಂದ ಆಸ್ತಿ ಖರೀದಿಸುವುದರಿಂದ ಆಗುವ ಲಾಭವೇನು?

ರೇರಾದಲ್ಲಿ ನೋಂದಣಿಯಾಗಿರುವ ಸಂಸ್ಥೆಗಳಿಂದ ಆಸ್ತಿ ಖರೀದಿಸಿದಾಗ ಪಾರದರ್ಶಕತೆ ಮತ್ತು ಜವಾಬ್ದಾರಿಯಿಂದ ನಿರ್ಮಾಣ ಸಂಸ್ಥೆ ವರ್ತಿಸಬೇಕಾಗುತ್ತದೆ. ರೇರಾ ಅಡಿಯಲ್ಲಿನ ಕಟ್ಟಡ ನಿರ್ಮಾಣ ಸಂಸ್ಥೆಯು ಆಸ್ತಿ ಖರೀದಿದಾರರಿಂದ ಪಡೆದ ಶೇ 70ರಷ್ಟು ಮೊತ್ತವನ್ನು ಯೋಜನೆಗಾಗಿ ತೆರೆದ ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಇರಿಸಬೇಕಾಗುತ್ತದೆ. ಖಾತೆಯಲ್ಲಿರುವ ಹಣವನ್ನು ನಿರ್ದಿಷ್ಟ ಮತ್ತು ಸೂಚಿತ ಆಸ್ತಿಯ ಅಭಿವೃದ್ಧಿಗೆ ಮಾತ್ರ ಬಳಸಬೇಕಾಗುತ್ತದೆ. ಹೀಗಿದ್ದಾಗ ಬಿಲ್ಡರ್‌ಗಳಿಂದ ಹಣದ ದುರ್ಬಳಕೆ ತಪ್ಪುತ್ತದೆ. ಇದಲ್ಲದೆ ರೇರಾ ಅಡಿಯಲ್ಲಿ ನಿರ್ದಿಷ್ಟ ಯೋಜನೆಯನ್ನು ಅಭಿವೃದ್ಧಿಪಡಿಸುವಾಗ ಅದರ ನೋಂದಣಿ ಸಹ ಕಡ್ಡಾಯ.

ವಾಣಿಜ್ಯ ಮತ್ತು ವಸತಿ ಕಟ್ಟಡಗಳಿಗೂ ರೇರಾ ಅನ್ವಯಿಸುತ್ತದೆ. ಕಟ್ಟಡ ನಿರ್ಮಾಣವಾದ 5 ವರ್ಷಗಳಲ್ಲಿ ಏನಾದರೂ ಗಂಭೀರ ದೋಷಗಳು ಕಂಡುಬಂದರೆ ನಿರ್ಮಾಣ ಸಂಸ್ಥೆ ಅದರ ಹೊಣೆ ಹೊರಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಆಸ್ತಿಯನ್ನು ಖರೀದಿದಾರರಿಗೆ ಹಸ್ತಾಂತರಿಸುವ ಜವಾಬ್ದಾರಿಯೂ ರೇರಾ ವ್ಯಾಪ್ತಿಗೆ ಬರುತ್ತದೆ. ಯೋಜನೆ ಮತ್ತು ಒಪ್ಪಂದದಲ್ಲಿ ಪೂರ್ವಾನುಮತಿಯಿಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. ರೇರಾ ಅಡಿ ನೋಂದಾಯಿತ ಬಿಲ್ಡರ್‌ಗಳು ಎಲ್ಲ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಕಟ್ಟಡ ನಿರ್ಮಾಣ ವಿಳಂಬವಾದಲ್ಲಿ ಗ್ರಾಹಕರಿಗೆ ಮೊತ್ತ ವಾಪಸ್ ಮಾಡಬೇಕಾಗುತ್ತದೆ. ಇದರ ಜೊತೆ ದೊಡ್ಡ ಮೊತ್ತದ ದಂಡ ಕಟ್ಟಬೇಕಾಗುತ್ತದೆ. ರೇರಾ ನೋಂದಾಯಿತ ಆಸ್ತಿ ಖರೀದಿಸುವುದರಿಂದ ವಂಚನೆಗಳನ್ನು ತಡೆಯುವ ಜೊತೆಗೆ ಆಸ್ತಿಗಳ ಹಸ್ತಾಂತರದಲ್ಲಿನ ವಿಳಂಬ ನಿಯಂತ್ರಿಸಲು ಸಾಧ್ಯ.

ಬಿಯರ್ ಉದ್ಯಮಕ್ಕೆ ಅಲ್ಯುಮಿನಿಯಂ ಕ್ಯಾನ್ ಕೊರತೆ

ನವದೆಹಲಿ (ಪಿಟಿಐ): ಅಲ್ಯುಮಿನಿಯಂ ಕ್ಯಾನ್‌ಗಳ ತೀವ್ರ ಕೊರತೆಯನ್ನು ಎದುರಿಸುತ್ತಿರುವ ದೇಶಿ ಬಿಯರ್ ಉದ್ಯಮವು ಅಲ್ಪ ಅವಧಿಗೆ ನಿಯಮ ಸಡಿಲಿಸಿ, ವಿದೇಶಗಳಿಂದ ಅಲ್ಯುಮಿನಿಯಂ ಆಮದು ಅಡ್ಡಿಗಳಿಲ್ಲದೆ ಆಗುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಅಲ್ಯುಮಿನಿಯಂ ಕೊರತೆಯು ಬಿಯರ್ ಉದ್ಯಮದ ಬೆಳವಣಿಗೆಗೆ ತೊಂದರೆ ಉಂಟುಮಾಡಬಹುದು ಎಂಬ ಭೀತಿಯು ಉದ್ಯಮದ ಪ್ರಮುಖರಿಗೆ ಎದುರಾಗಿದೆ.

500 ಮಿ.ಲೀ. ಸಾಮರ್ಥ್ಯದ ಅಲ್ಯುಮಿನಿಯಂ ಕ್ಯಾನ್‌ಗಳ ಕೊರತೆಯು ಬಿಯರ್ ಉದ್ಯಮಕ್ಕೆ ವಾರ್ಷಿಕ 12 ಕೋಟಿಯಿಂದ 13 ಕೋಟಿಯಷ್ಟು ಇದೆ. ವಾರ್ಷಿಕ ಬಿಯರ್ ಮಾರಾಟದಲ್ಲಿ ಶೇ 20ರಷ್ಟು ಇಷ್ಟು ಕ್ಯಾನ್‌ಗಳ ಮೂಲಕ ಆಗುತ್ತದೆ. ಅಲ್ಲದೆ, ಅಲ್ಯುಮಿನಿಯಂ ಕೊರತೆಯಿಂದಾಗಿ ಸರ್ಕಾರಗಳ ವರಮಾನದಲ್ಲಿ ₹1,300 ಕೋಟಿಯಷ್ಟು ಕೊರತೆ ಎದುರಾಗಬಹುದು ಎಂದು ಬ್ರೀವರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಅಂದಾಜಿಸಿದೆ.

2025ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಅಲ್ಯುಮಿನಿಯಂ ಕ್ಯಾನ್‌ಗಳಿಗೆ ಕಡ್ಡಾಯವಾಗಿ ಬಿಐಎಸ್ (ಭಾರತೀಯ ಮಾನಕ ಬ್ಯೂರೊ) ಪ್ರಮಾಣಪತ್ರ ಪಡೆಯಬೇಕಿದೆ. ಹೀಗಾಗಿ ಬಿಯರ್ ಮತ್ತು ಇತರ ಪೇಯಗಳ ಉದ್ಯಮಕ್ಕೆ ಅಲ್ಪಾವಧಿಗೆ ಅಲ್ಯುಮಿನಿಯಂ ಕ್ಯಾನ್‌ಗಳ ಕೊರತೆ ಎದುರಾಗಿದೆ.

ಪೇಯಗಳನ್ನು ತುಂಬಿಸುವ ಅಲ್ಯುಮಿನಿಯಂ ಕ್ಯಾನ್‌ಗಳನ್ನು ಪೂರೈಕೆ ಮಾಡುವ ಪ್ರಮುಖ ಎರಡು ಕಂಪನಿಗಳು ಮುಂದಿನ ಆರರಿಂದ 12 ತಿಂಗಳವರೆಗೆ ಪೂರೈಕೆ ಹೆಚ್ಚಿಸಲು ತಮ್ಮಿಂದ ಸಾಧ್ಯವಿಲ್ಲ ಎಂಬುದನ್ನು ತಿಳಿಸಿವೆ.

ಗುಣಮಟ್ಟದ ವಿಚಾರವಾಗಿ ನಿಯಮ ಬಿಗಿಗೊಳಿಸಿರುವ ಪರಿಣಾಮವಾಗಿ ಬಿಯರ್ ಉದ್ಯಮವು ಕ್ಯಾನ್‌ಗಳನ್ನು ವಿದೇಶಗಳಿಂದ ತರಿಸಿಕೊಳ್ಳುವುದಕ್ಕೆ ಹಲವು ತಿಂಗಳು ಬೇಕಾಗುತ್ತದೆ. ಹೀಗಾಗಿ ನಿಯಮವನ್ನು ಒಂದು ವರ್ಷದ ಮಟ್ಟಿಗೆ ತುಸು ಸಡಿಲಗೊಳಿಸುವಂತೆ ಕೋರಿ ಬಿಎಐ ಸರ್ಕಾರದ ಕದ ತಟ್ಟಿದೆ.

ಒಂದು ವರ್ಷದ ಮಟ್ಟಿಗೆ ವಿನಾಯಿತಿ ದೊರೆತರೆ ಸ್ಥಳೀಯ ಪೂರೈಕೆದಾರರಿಗೆ ಕ್ಯಾನ್ ತಯಾರಿಕೆಯನ್ನು ಹೆಚ್ಚು ಮಾಡಲು ಆಗುತ್ತದೆ ಎಂಬುದು ಉದ್ಯಮದ ವಾದ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹323-633
ದ್ವಿತಳಿ (ಬಿ.ವಿ)	₹466-773

ಮಹಿಳಾ ಉದ್ಯೋಗಿಗಳ ಪ್ರಮಾಣ ಶೇ 30ಕ್ಕೆ ಹೆಚ್ಚಿಸುವ ಗುರಿ: ಎಸ್‌ಬಿಐ

ನವದೆಹಲಿ (ಪಿಟಿಐ): ಮುಂದಿನ ಐದು ವರ್ಷದೊಳಗೆ ತನ್ನ ಮಹಿಳಾ ಉದ್ಯೋಗಿಗಳ ಪ್ರಮಾಣವನ್ನು ಶೇ 30ಕ್ಕೆ ಹೆಚ್ಚಿಸುವ ಗುರಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹೊಂದಿದೆ.

ಗ್ರಾಹಕರೊಂದಿಗೆ ನೇರವಾಗಿ ಸಂವಹನ ನಡೆಸುವ ಬ್ಯಾಂಕ್‌ನ ಸಿಬ್ಬಂದಿಯಲ್ಲಿ ಮಹಿಳಾ ಉದ್ಯೋಗಿಗಳ ಪ್ರಮಾಣವು ಈಗ ಶೇ 33ರಷ್ಟಿದೆ. ಆದರೆ, ಒಟ್ಟು ಸಿಬ್ಬಂದಿಯಲ್ಲಿ ಮಹಿಳೆಯರ ಪ್ರಮಾಣ ಶೇ 27ರಷ್ಟಿದೆ. ಹೀಗಾಗಿ, ಮಹಿಳಾ ಉದ್ಯೋಗಿಗಳ ಪ್ರಮಾಣವನ್ನು ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಬ್ಯಾಂಕ್‌ನ ಉಪ ವ್ಯವಸ್ಥಾಪಕ ನಿರ್ದೇಶಕ (ಮಾನವ ಸಂಪನ್ಮೂಲ ವಿಭಾಗ) ಮತ್ತು ಮುಖ್ಯ ಅಭಿವೃದ್ಧಿ ಅಧಿಕಾರಿ (ಸಿಡಿಒ) ಕಿಶೋರ್ ಕುಮಾರ್ ಪೋಲುದಾಸು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಈಗ ಎಸ್‌ಬಿಐನಲ್ಲಿ ಒಟ್ಟು 2.4 ಲಕ್ಷಕ್ಕೂ ಹೆಚ್ಚು ಸಿಬ್ಬಂದಿ ಇದ್ದಾರೆ. ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅತಿಹೆಚ್ಚು ಸಿಬ್ಬಂದಿ ಹೊಂದಿರುವ ಕಂಪನಿ ಇದಾಗಿದೆ.

ಬ್ಯಾಂಕ್‌ನ ಒಟ್ಟು ಶಾಖೆಗಳ ಪೈಕಿ 340ಕ್ಕೂ ಹೆಚ್ಚು ಶಾಖೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಮಹಿಳಾ ಉದ್ಯೋಗಿಗಳಿದ್ದು, ಅವರೇ ಬ್ಯಾಂಕ್‌ನ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದಾರೆ. ಈ ಪ್ರಮಾಣ ಮುಂದಿನ ದಿನಗಳಲ್ಲಿ ಹೆಚ್ಚಾಗಲಿದೆ ಎಂದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

19ನೇ ವಾರ್ಷಿಕ ಪುಣ್ಯಸ್ಮರಣೆ

ಕೆ.ಜಿ. ಶಾರದಮ್ಮ
ಲೇ|| ಶ್ರೀ ಕೆ. ಗುರುಮೂರ್ತಿ ಇವರ ಧರ್ಮಪತ್ನಿ
12.02.1938 - 13.10.2006
ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ ಡಾ. ವನಜಾಕ್ಷಿ ಮತ್ತು ಜಿ. ಶೀಲ ರವರ ಕುಟುಂಬವರ್ಗದವರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹560
12 ಕ್ಕೆ	₹75
ಮೈಸೂರು: 100 ಕ್ಕೆ	₹570

'ಶಬರಿಮಲೆ ಚಿನ್ನ ಕಳ್ಳತನ: ದಾನಿಗೆ ಶಾಶ್ವತ ಆದಾಯವಿಲ್ಲ'

ಕೊಚ್ಚಿ (ಪಿಟಿಐ): ಶಬರಿಮಲೆ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚದ ತೂಕ ಕಡಿಮೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ದೇಣಿಗೆ ನೀಡಿದ್ದ ವ್ಯಕ್ತಿಯು ಯಾವುದೇ ಶಾಶ್ವತ ಆದಾಯದ ಮೂಲಗಳನ್ನು ಹೊಂದಿರಲಿಲ್ಲ ಎಂಬುದು ಗೊತ್ತಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿರುವ ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ವಿಚಕ್ಷಣ ವಿಭಾಗವು, ದೇವಾಲಯದಲ್ಲಿ ಹಲವಾರು ಚಿನ್ನ ಲೇಪಿತ ದೇಣಿಗೆ ಕೆಲಸಗಳನ್ನು ಪ್ರಾಯೋಜಿಸಿದ್ದ ಬೆಂಗಳೂರಿನ ಉದ್ಯಮಿಯು ಶಾಶ್ವತ ಆದಾಯವನ್ನು ಹೊಂದಿರಲಿಲ್ಲ ಎಂದು ಹೇಳಿದೆ.

ಪ್ರಾಥಮಿಕ ವಿಚಾರಣೆಯಲ್ಲಿ ವಿಚಕ್ಷಣ ವಿಭಾಗವು, 2017ರಿಂದ 2025ರವರೆಗೆ ಉದ್ಯಮಿ ಉಣ್ಣಿಕೃಷ್ಣನ್ ಪೋಟಿ ಅವರ ಆದಾಯ ತೆರಿಗೆ ಸಲ್ಲಿಕೆ ದಾಖಲೆಗಳನ್ನು ಪರಿಶೀಲಿಸಿದೆ. ವರದಿಯನ್ನು ಕೇರಳ ಹೈಕೋರ್ಟ್‌ಗೆ ಸಲ್ಲಿಸಲಾಗಿದ್ದು, ನ್ಯಾಯಾಲಯವು ಪ್ರಾಥಮಿಕ ತನಿಖೆಗೆ ಆದೇಶಿಸಿದೆ.

ಹೈಕೋರ್ಟ್ ನಿರ್ದೇಶನದ ಮೇರೆಗೆ ರಚಿಸಲಾಗಿರುವ ತನಿಖಾ ತಂಡವು ತನಿಖೆಯನ್ನು ಮುಂದುವರಿಸಿದೆ.

'ಉಣ್ಣಿಕೃಷ್ಣನ್ ಅವರ ಯಾವುದೇ ಶಾಶ್ವತ ಆದಾಯದ ಮೂಲಗಳು ಬಹಿರಂಗಗೊಂಡಿಲ್ಲ. 2025–26ರ ಸಾಲಿನಲ್ಲಿ ಕಾಮಾಕ್ಷಿ ಎಂಟರ್‌ಪ್ರೈಸಸ್, ಇತರ ಸಾಮಾಜಿಕ ಹಾಗೂ ಸಮುದಾಯ ಸೇವೆ ಅಡಿಯಲ್ಲಿ ₹10.85 ಲಕ್ಷ ಹಣವನ್ನು ಉಣ್ಣಿಕೃಷ್ಣನ್ ಅವರ ಖಾತೆಗೆ ಜಮೆ ಮಾಡಿದೆ' ಎಂದು ವರದಿ ಹೇಳಿದೆ.

ಶ್ರೀಕೋವಿಲ್ ದ್ವಾರದ ದುರಸ್ತಿ ಮತ್ತು ಚಿನ್ನದ ಲೇಪನವನ್ನು ಉಣ್ಣಿಕೃಷ್ಣನ್ ಕೊಡುಗೆ ನೀಡಿದ್ದಾರೆ ಎನ್ನಲಾಗಿದೆ. ಆದರೆ, ವಾಸ್ತವವಾಗಿ ಬಳ್ಳಾರಿಯ ಉದ್ಯಮಿ ಗೋವರ್ಧನ್ ಅವರು ಇದಕ್ಕೆ ಹಣ ನೀಡಿದ್ದಾರೆ ಎಂದು ಗೊತ್ತಾಗಿದೆ. ಅಲ್ಲದೇ ದ್ವಾರದ ಚೌಕಟ್ಟಿನ ಚಿನ್ನದ ಲೇಪನವನ್ನೂ ಉಣ್ಣಿಕೃಷ್ಣನ್ ಮಾಡಿದ್ದಾರೆ ಎನ್ನಲಾಗಿದೆ. ಆದರೆ ಬೆಂಗಳೂರಿನ ಉದ್ಯಮಿ ಅಜಿತ್‌ಕುಮಾರ್ ಅವರು ಅದನ್ನು ಪ್ರಾಯೋಜಿಸಿದ್ದಾರೆ ಎಂಬುದು ಪತ್ತೆಯಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/- ದಿಂದ 86,000/- .(ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ
Travel

08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2025 08.12.20225 ದುಬೈ,ಅಬುದಾಬಿ 5 ದಿನಗಳು. 24.12.2025 ಭೂತಾನ್ 8 ದಿನಗಳು. 26.11.2025 21.12.2025 ಗುಜರಾತ್ 8 ದಿನಗಳು. 26.11.2025 12.12.2025 ರಾಜಸ್ಥಾನ 9 ದಿನಗಳು. 22.11.2025 ಅಸ್ಸಾಂ,ಮೇಘಾಲಯ 9 ದಿನಗಳು. 11.11.2025 01.12.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

★24.10.20258ದಿನಗಳು★ ಪಂಡರಾಪುರ,ಕೊಲ್ಲಾಪುರ,ಶಿರಡಿ ಗಾಣಗಾಪುರ. 27.10.2025 11ದಿನಗಳು ಸಂಪೂರ್ಣ ರಾಜಸ್ಥಾನ.15.11.2025 6ದಿನಗಳು ಕಾಶಿ,ಗಯಾ ಅಯೋಧ್ಯಾ.11.11.2025 15ದಿನಗಳು ಅಷ್ಟ ಜ್ಯೋತಿರ್ಲಿಂಗ 18.11.2025 8ದಿನಗಳು ಮಧ್ಯಪ್ರದೇಶ,ಮಹಾರಾಷ್ಟ್ರ 6 ಜ್ಯೋತಿರ್ಲಿಂಗ.18.11.2025 4ದಿನಗಳು ಉಜ್ಜಯಿನಿ,ಓಂಕಾರ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).9945445809/ 8861545809 / 9902433500

ಹೆಸರಾಂತ ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ಇಂದ ವಿಮಾನ/ಎಸಿ ಬಸ್ಸಿನಲ್ಲಿ 05.11.2025 ದ್ವಾರಕಾ ಸೋಮನಾಥ್ ನಾಗೇಶ್ವರ ಮಹಾಕಾಳೇಶ್ವರ ಓಂಕಾರೇಶ್ವರ, 14.11.2025 ಕಾಶಿ,ಅಯೋಧ್ಯ ಅಲಹಾಬಾದ್ ಬುದ್ಧಗಯಾ, 22.12.2025 ರಾಮೇಶ್ವರ ಮಧುರೈ,ಕನ್ಯಾಕುಮಾರಿ ನವಗ್ರಹಗಳು, 25.12.2025 ಶಿರಡಿ ಪಂಡರಾಪುರದ ತ್ರ್ಯಂಬಕೇಶ್ವರ ಕೊಲ್ಹಾಪುರ. 26574131 8431888138 8317446683 9686708171

ದಾವಣಗೆರೆಯಲ್ಲಿ ಕ್ವಿಂಟಲ್‌ಗೆ ₹2,200 ದರ; ಮಳೆಯಿಂದಾಗಿ ಆಗುತ್ತಿಲ್ಲ ಕಟಾವು
ಮೆಕ್ಕೆಜೋಳ: ದರವಿದ್ದರೂ 'ಫಲ' ಸಿಗದ ಸ್ಥಿತಿ

• ರಾಮಮೂರ್ತಿ ಪಿ.

ದಾವಣಗೆರೆ: ಮೆಕ್ಕೆಜೋಳಕ್ಕೆ ಈಗ ಉತ್ತಮ ದರವಿದ್ದರೂ ಮಳೆಯಿಂದಾಗಿ ಬೆಳೆ ಕಟಾವು ಮಾಡಲಾಗದೆ ರೈತರು ಪರಿತಪಿಸುತ್ತಿದ್ದಾರೆ. ಕಟಾವು ಮುಗಿಯುವ ವೇಳೆಗೆ ಬೆಲೆ ಕುಸಿಯುವ ಆತಂಕ ಅವರನ್ನು ಕಾಡುತ್ತಿದೆ.

ಇಲ್ಲಿನ ಎಪಿಎಂಸಿಯಲ್ಲಿ ಮೆಕ್ಕೆಜೋಳಕ್ಕೆ ಕ್ವಿಂಟಲ್‌ಗೆ ₹2,200 ದರವಿದೆ. ಜಿಲ್ಲೆಯಲ್ಲಿ ಸದ್ಯ ಕಟಾವು ಪೂರ್ತಿಯಾಗಿ ಆರಂಭಗೊಂಡಿಲ್ಲ. ಎಪಿಎಂಸಿಗೆ ಸದ್ಯ ನಿತ್ಯ ಸರಾಸರಿ 9 ಸಾವಿರ ಕ್ವಿಂಟಲ್ ಆವಕವಾಗುತ್ತಿದೆ.

ಜಿಲ್ಲೆಯಲ್ಲಿ ಪ್ರಸಕ್ತ ಹಂಗಾಮಿನಲ್ಲಿ 1.20 ಲಕ್ಷ ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ. ಹಾವೇರಿ, ಶಿವಮೊಗ್ಗ, ಗದಗ, ಬಾಗಲಕೋಟೆ ಜಿಲ್ಲೆಗಳಲ್ಲೂ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗಿದೆ.

ಮಳೆಯಿಂದ ಹಲವೆಡೆ ಜಮೀನುಗಳಲ್ಲಿ ನೀರು ನಿಂತಿದೆ. ಇದರಿಂದ ಕಟಾವು ಯಂತ್ರಗಳು ತೆರಳಲು ಸಾಧ್ಯವಾಗುತ್ತಿಲ್ಲ. ಕೂಲಿ ಕಾರ್ಮಿಕರ ಅಲಭ್ಯತೆಯಿಂದಾಗಿಯೂ ಕಟಾವು ಮುಂದೂಡಲಾಗುತ್ತಿದೆ.

ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರು ಬಳಿ ಮೆಕ್ಕೆಜೋಳದ ಜಮೀನೊಂದರಲ್ಲಿ ನೀರು ನಿಂತಿದೆ

'ಮೆಕ್ಕೆಜೋಳಕ್ಕೆ ಒಳ್ಳೆ ದರ ಇದೆ. ದಲ್ಲಾಳಿಗಳು ಜಮೀನಿಗೆ ಬಂದು ಖರೀದಿಸುತ್ತಿದ್ದು, ಕ್ವಿಂಟಲ್‌ಗೆ ₹1,900ರಿಂದ ₹2,100 ಸಿಗುತ್ತಿದೆ' ಎಂದು ಚನ್ನಗಿರಿ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದ ರೈತ ಎಸ್.ಎಂ.ಮುನಿ ತಿಳಿಸಿದರು.

'ಕೆಲ ಜಮೀನಿನಲ್ಲಿ ನೀರು ನಿಂತಿರುವುದರಿಂದ ಕಟಾವು ಯಂತ್ರ ತೆರಳಾಗುತ್ತಿಲ್ಲ. ತಗ್ಗು ಭಾಗದಲ್ಲಿ ಬೆಳೆಯು ನೀರು ಪಾಲಾಗಿದೆ' ಎಂದು ಜಗಳೂರು ತಾಲ್ಲೂಕಿನ ಅಸಗೋಡುವಿನ ರಾಘವೇಂದ್ರ ಹೇಳಿದರು.

ಆರಂಭವಾಗದ ಖರೀದಿ ಕೇಂದ್ರ: ಮೆಕ್ಕೆಜೋಳಕ್ಕೆ ಈ ಬಾರಿ ಕೇಂದ್ರ ಸರ್ಕಾರವು ಕ್ವಿಂಟಲ್‌ಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ₹2,400 ಘೋಷಿಸಿದೆ. ಆದರೆ, ಇದುವರೆಗೂ ಖರೀದಿ ಕೇಂದ್ರಗಳನ್ನು ಆರಂಭಿಸಿಲ್ಲ.

'ರೈತರು ಮೆಕ್ಕೆಜೋಳವನ್ನು ದಲ್ಲಾಳಿಗಳಿಗೆ ಹಾಗೂ ಎಪಿಎಂಸಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಶೀಘ್ರವೇ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು' ಎಂದು ರೈತ ಮುಖಂಡ ತೇಜಸ್ವಿ ಪಟೇಲ್ ಒತ್ತಾಯಿಸಿದರು.

'ತಮಿಳುನಾಡಿನಲ್ಲಿ ಕಟಾವು ಶುರುವಾಗಿಲ್ಲ'

'ತಮಿಳುನಾಡು, ಬಿಹಾರ ಸೇರಿ ಕೆಲ ರಾಜ್ಯಗಳಲ್ಲಿ ಮೆಕ್ಕೆಜೋಳ ಬೆಳೆ ಕಟಾವು ಶುರುವಾಗಿಲ್ಲ. ಅಲ್ಲಿ ಕಟಾವು ಶುರುವಾದರೆ ಬೆಲೆ ಇಳಿಯುವ ಸಾಧ್ಯತೆ ಇದೆ' ಎಂದು ದಾವಣಗೆರೆ ಎಪಿಎಂಸಿಯ ಸಹಾಯಕ ನಿರ್ದೇಶಕ ಜೆ.ಪ್ರಭು ತಿಳಿಸಿದರು.

'ರಾಜ್ಯದಿಂದ ಹೆಚ್ಚಿನ ಪ್ರಮಾಣದ ಜೋಳವನ್ನು ತಮಿಳುನಾಡಿಗೆ ಪೂರೈಸಲಾಗುತ್ತಿದೆ. ಈ ಭಾಗದ ಸಕ್ಕರೆ ಕಾರ್ಖಾನೆಗಳು ಮೆಕ್ಕೆಜೋಳ ಬಳಸಿ ಎಥೆನಾಲ್ ತಯಾರಿಸುತ್ತಿವೆ. ಸಕ್ಕರೆ ಕಾರ್ಖಾನೆಗಳವರು ವ್ಯಾಪಾರಿಗಳ ಮೂಲಕ ಖರೀದಿಸುತ್ತಿದ್ದಾರೆ' ಎಂದರು.

> **ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ವಾರದೊಳಗೆ ಅನುಮತಿ ಸಿಗುವ ನಿರೀಕ್ಷೆ ಇದೆ**
> **ಮಧುಸೂದನ್ ಕೆ.ಪಿ.,** ಜಂಟಿ ನಿರ್ದೇಶಕ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

ಪಾಕ್– ಅಫ್ಗನ್ ಸಂಘರ್ಷ

ಒಂದನೇ ಪುಟದಿಂದ...

ಅಫ್ಗಾನಿಸ್ತಾನದ ಕಡೆಯಲ್ಲಿ ತಾಲಿಬಾನ್ ಹೋರಾಟಗಾರರು ಒಳಗೊಂಡಂತೆ 200ಕ್ಕೂ ಅಧಿಕ ಮಂದಿ ಬಲಿಯಾಗಿದ್ದಾರೆ ಎಂದಿದೆ.

ಅಫ್ಗನ್ ಪಡೆಗಳು ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿನ ಅಂಗೂರ್ ಅಡ್ಡಾ, ಬಾಜೌರ್, ಖುರ್ರಂ , ದೀರ್ ಮತ್ತು ಚಿತ್ರಾಲ್ ಹಾಗೂ ಬಲೂಚಿಸ್ತಾನದ ಬರಾಮ್ಚದಲ್ಲಿರುವ ಪಾಕಿಸ್ತಾನ ಸೇನೆಯ ಠಾಣೆಗಳನ್ನು ಗುರಿಯಾಗಿಸಿವೆ.

ಪಾಕಿಸ್ತಾನದ ಗೃಹ ಸಚಿವ ಮೊಹ್ಸಿನ್ ನಖ್ವಿ ಅವರು ಗಡಿ ಭದ್ರತಾ ಠಾಣೆಗಳ ಮೇಲಿನ ತಾಲಿಬಾನ್ ದಾಳಿಯನ್ನು 'ಅಪ್ರಚೋದಿತ' ಎಂದು ಹೇಳಿದ್ದು, 'ನಾಗರಿಕರ ಮೇಲೆ ಗುಂಡು ಹಾರಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

'ಅಫ್ಗನ್ ಪಡೆಗಳು ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿರುವುದು ಅಂತರರಾಷ್ಟ್ರೀಯ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಪಾಕ್ ಪಡೆಗಳು ತಕ್ಷಣದ ಮತ್ತು ಪರಿಣಾಮಕಾರಿ ಪ್ರತ್ಯುತ್ತರ ನೀಡಿದ್ದು, ಪ್ರಚೋದನೆ ಸಹಿಸುವುದಿಲ್ಲ' ಎಂದಿದ್ದಾರೆ.

ಪಾಕ್ ಸೇನೆ ದಾಳಿ ನಡೆಸಿರುವುದನ್ನು ತಾಲಿಬಾನ್ ಆಡಳಿತದ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಅದಕ್ಕೆ ಪ್ರತಿಯಾಗಿ ತನ್ನ ಪಡೆಗಳು 'ಪ್ರತೀಕಾರದ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಕೈಗೊಂಡಿವೆ' ಎಂದು ಹೇಳಿದೆ.

'ಪಾಕಿಸ್ತಾನವು ಮತ್ತೊಮ್ಮೆ ಅಫ್ಗಾನಿಸ್ತಾನದ ಭೌಗೋಳಿಕ ಸಮಗ್ರತೆಯನ್ನು ಉಲ್ಲಂಘಿಸಿದರೆ, ನಾವು ಸುಮ್ಮನಿರುವುದಿಲ್ಲ. ನಮ್ಮ ಸಶಸ್ತ್ರ ಪಡೆಗಳು ದೇಶದ ಗಡಿಯನ್ನು ರಕ್ಷಿಸಲು ಸಂಪೂರ್ಣ ಸಿದ್ಧವಾಗಿದ್ದು, ತಕ್ಕ ಪ್ರತಿಕ್ರಿಯೆ ನೀಡಲಿವೆ' ಎಂದು ತಿಳಿಸಿದೆ.

'ಗಡಿಯುದ್ದಕ್ಕೂ ಪಾಕಿಸ್ತಾನದ 20 ಭದ್ರತಾ ಠಾಣೆಗಳನ್ನು ನಾಶಪಡಿಸಲಾಗಿದ್ದು, ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಂಡಿದ್ದೇವೆ. ಕತಾರ್ ಮತ್ತು ಸೌದಿ ಅರೇಬಿಯಾದ ಮನವಿಯ ಮೇರೆಗೆ ಕಾರ್ಯಾಚರಣೆಯನ್ನು ಮಧ್ಯರಾತ್ರಿ ನಿಲ್ಲಿಸಲಾಯಿತು' ಎಂದು ತಾಲಿಬಾನ್ ಸರ್ಕಾರದ ವಕ್ತಾರ ಜಬೀವುಲ್ಲಾ ಮುಜಾಹಿದ್ ತಿಳಿಸಿದ್ದಾರೆ.

ಸಂಘರ್ಷದ ಬೆನ್ನಲ್ಲೇ ಗಡಿಯನ್ನು ಸಂಪೂರ್ಣ ಬಂದ್ ಮಾಡಲಾಗಿದ್ದು, ಉಭಯ ದೇಶಗಳ ನಡುವಿನ ಸಂಪರ್ಕ ಸ್ಥಗಿತಗೊಂಡಿದೆ. ಗಡಿಯ ಎರಡೂ ಕಡೆಗಳಲ್ಲಿ ಹೆಚ್ಚಿನ ಯೋಧರನ್ನು ನಿಯೋಜಿಸಲಾಗಿದೆ.

ಸಂಘರ್ಷಕ್ಕೆ ಏನು ಕಾರಣ?

- ಗುರುವಾರ ರಾತ್ರಿ ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನ ಹಲವೆಡೆ ಭಾರಿ ಸ್ಫೋಟ ಕೇಳಿಬಂದಿತ್ತು
- ಪಾಕ್ ಪಡೆಗಳು ಕಾಬೂಲ್ ಮೇಲೆ ವಾಯು ದಾಳಿ ನಡೆಸಿವೆ ಎಂದು ಅಫ್ಗಾನಿಸ್ತಾನ ಆರೋಪಿಸಿದೆ
- ಆದರೆ, ದಾಳಿ ನಡೆಸಿದ್ದನ್ನು ದೃಢಪಡಿಸಲು ಅಥವಾ ತನ್ನ ಪಾತ್ರವನ್ನು ಅಲ್ಲಗಳೆಯಲು ಪಾಕ್ ಸೇನೆ ನಿರಾಕರಿಸಿದೆ
- ಕಾಬೂಲ್ ಮೇಲಿನ ದಾಳಿಗೆ ಪ್ರತಿಯಾಗಿ ಅಫ್ಗನ್ ಪಡೆಗಳು ಶನಿವಾರ ರಾತ್ರಿ ಗಡಿಯಲ್ಲಿ ಪಾಕಿಸ್ತಾನದ ವಿರುದ್ಧ ದಾಳಿ ನಡೆಸಿವೆ
- ತಿರುಗೇಟು ನೀಡಿದ ಪಾಕ್ ಪಡೆಗಳು ಗಡಿಯಲ್ಲಿರುವ ಅಫ್ಗನ್ ಗಡಿ ಭದ್ರತಾ ಠಾಣೆಗಳನ್ನು ವಶಪಡಿಸಿಕೊಂಡಿವೆ
- ತೆಹ್ರೀಕ್ ಎ ತಾಲಿಬಾನ್ ಸಂಘಟನೆಯು ಅಫ್ಗನ್ ನೆಲ ಬಳಸಿಕೊಂಡು ಪಾಕಿಸ್ತಾನದ ಮೇಲೆ ಭಯೋತ್ಪಾದಕ ದಾಳಿ ನಡೆಸಿದ ಬಳಿಕ ಉಭಯ ದೇಶಗಳ ನಡುವಣ ಸಂಬಂಧ ಹದಗೆಟ್ಟಿದೆ

> **ಅಫ್ಗಾನಿಸ್ತಾನದ ಪ್ರಚೋದನೆಯನ್ನು ಬಲವಾಗಿ ಖಂಡಿಸುತ್ತೇನೆ. ಪ್ರತಿಯೊಂದು ಪ್ರಚೋದನೆಗೂ ಪಾಕಿಸ್ತಾನವು ಬಲವಾದ ಮತ್ತು ಪರಿಣಾಮಕಾರಿ ಪ್ರತಿಕ್ರಿಯೆ ನೀಡಲಿದೆ**
> **ಶೆಹಬಾಜ್ ಷರೀಫ್,** ಪಾಕ್ ಪ್ರಧಾನಿ

'ಶಾಂತಿಯುತ ಪರಿಹಾರ ಬಯಸುವೆವು'

ನವದೆಹಲಿ: ಅಫ್ಗಾನಿಸ್ತಾನವು ಪಾಕಿಸ್ತಾನದೊಂದಿಗಿನ ಪ್ರಸ್ತುತ ಸಂಘರ್ಷಕ್ಕೆ ಶಾಂತಿಯುತ ಪರಿಹಾರವನ್ನು ಬಯಸುತ್ತದೆ ಎಂದು ಭಾರತ ಪ್ರವಾಸದಲ್ಲಿರುವ ಅಫ್ಗನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಹೇಳಿದ್ದಾರೆ.

'ಯಾವುದೇ ಬಾಹ್ಯ ಅಕ್ರಮಣವನ್ನು ಎದುರಿಸಲು ನಮ್ಮ ದೇಶ ಒಗ್ಗಟ್ಟಾಗಿದೆ. ಸಂಘರ್ಷವನ್ನು ಶಾಂತಿಯುತವಾಗಿ ಕೊನೆಗೊಳಿಸುವ ಪ್ರಯತ್ನಗಳು ವಿಫಲವಾದರೆ, ನಾವು ಪರ್ಯಾಯ ಮಾರ್ಗ ಅನುಸರಿಸಬೇಕಾಗುತ್ತದೆ' ಎಂದಿದ್ದಾರೆ.

ನೇಪಾಳ ಮಾಜಿ ಸ್ಪೀಕರ್ ಬಂಧನ

ಕಠ್ಮಂಡು (ಪಿಟಿಐ): ನೇಪಾಳದ ಮಾಜಿ ಸ್ಪೀಕರ್ ಕೃಷ್ಣ ಬಹದ್ದೂರ್ ಮಹಾರಾ ಅವರನ್ನು ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಡಿ ಭಾನುವಾರ ಬಂಧಿಸಲಾಗಿದೆ.

'ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳದ ಉಪಾಧ್ಯಕ್ಷರೂ ಆಗಿರುವ ಮಹಾರಾ(67) ಅವರನ್ನು ಲಲಿತ್‌ಪುರದಲ್ಲಿನ ಅವರ ನಿವಾಸದಲ್ಲಿ ಸೆಂಟ್ರಲ್ ಇನ್‌ವೆಸ್ಟಿಗೇಷನ್ ಬ್ಯೂರೊ (ಸಿಐಬಿ) ಬಂಧಿಸಿದೆ' ಎಂದು ನೇಪಾಳ ಪೊಲೀಸರ ಪ್ರಕಟಣೆ ತಿಳಿಸಿದೆ.

ಮೂರು ವರ್ಷಗಳ ಹಿಂದೆ ಕಠ್ಮಂಡು ವಿಮಾನ ನಿಲ್ದಾಣದಲ್ಲಿ ವಶಪಡಿಸಿಕೊಳ್ಳಲಾಗಿದ್ದ ₹5.36 ಕೋಟಿ ಮೌಲ್ಯದ ಚಿನ್ನದ ಬಿಸ್ಕತ್ತುಗಳ ಮಾರಾಟದಲ್ಲಿ ಭಾಗಿಯಾಗಿರುವ ಆರೋಪ ಮಹಾರಾ ಅವರ ಮೇಲಿದೆ.

ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಒಳಗೆ ಚಿನ್ನದ ತುಂಡುಗಳನ್ನು ಇಟ್ಟು ಸಾಗಿಸುತ್ತಿದ್ದ ಚೀನಾದ ಪ್ರಜೆಯೊಬ್ಬನನ್ನು ಕಠ್ಮಂಡು ವಿಮಾನ ನಿಲ್ದಾಣದಲ್ಲಿ ಮೂರು ವರ್ಷಗಳ ಹಿಂದೆ ಬಂಧಿಸಲಾಗಿತ್ತು. ಈ ಚಿನ್ನದ ತುಂಡುಗಳನ್ನು ಮಾರಾಟ ಮಾಡಲು, ಕೆಲ ಗ್ಯಾಂಗ್‌ಗಳಿಗೆ ಮತ್ತು ವಿಮಾನ ನಿಲ್ದಾಣದ ಸಿಬ್ಬಂದಿಗೆ ಮಹಾರಾ ಸಲಹೆ ನೀಡುತ್ತಿದ್ದರು ಎಂದು ಆರೋಪಿಸಲಾಗಿದೆ.

ಪ್ರತಿ ದಿನ ಗಾಜಾ ಪ್ರವೇಶಿಸಲಿವೆ 600 ಟ್ರಕ್‌ಗಳು: ಇಸ್ರೇಲ್
ನೆರವು ಸಾಮಗ್ರಿ: ಗಾಜಾ ಪ್ರವೇಶಕ್ಕೆ ಸಿದ್ಧತೆ

ಕೈರೊ (ಎಪಿ): ಗಾಜಾ ಪಟ್ಟಿಯೊಳಗೆ ಹೆಚ್ಚಿನ ನೆರವು ಸಾಮಗ್ರಿಗಳನ್ನು ಕೊಂಡೊಯ್ಯುವ ಸಿದ್ಧತೆಗಳು ಭಾನುವಾರ ಆರಂಭಗೊಂಡಿವೆ. 'ಭಾನುವಾರದಿಂದ ಪ್ರತಿ ದಿನವು ನೆರವು ಸಾಮಗ್ರಿಗಳನ್ನು ಹೊತ್ತ 600 ಟ್ರಕ್‌ಗಳು ಗಾಜಾ ಪ್ರವೇಶಿಸಲಿವೆ' ಎಂದು ಇಸ್ರೇಲ್ ಹೇಳಿದೆ.

ಕದನ ವಿರಾಮದ ಒಪ್ಪಂದದಂತೆ ಸಕಲ ಸಿದ್ಧತೆ ನಡೆಯುತ್ತಿದೆ. 'ನಾವು ಸುಮಾರು 400 ಟ್ರಕ್‌ಗಳನ್ನು ಕಳುಹಿಸುತ್ತಿದ್ದೇವೆ' ಎಂದು ಈಜಿಪ್ಟ್ ಹೇಳಿದೆ. ಆದರೆ, ಇಸ್ರೇಲ್ ಸೇನೆಯ ಪರಿಶೀಲನೆ ಬಳಿಕವೇ ಎಲ್ಲ ಟ್ರಕ್‌ಗಳು ಗಾಜಾ ಪ್ರವೇಶಿಸಲಿವೆ.

ಇಸ್ರೇಲ್ ನೆರವು ಕೇಂದ್ರ ಧ್ವಂಸ: ವಿಶ್ವಸಂಸ್ಥೆಯ ನೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಇಸ್ರೇಲ್ ತನ್ನದೇ ನೆರವು ಕೇಂದ್ರಗಳನ್ನು ಸ್ಥಾಪಿಸಿತ್ತು. ಇದಕ್ಕೆ ಅಮೆರಿಕದ ಬೆಂಬಲವೂ ಇತ್ತು. ಇವುಗಳನ್ನು 'ಗಾಜಾ ಮಾನವೀಯ ನೆರವು ಫೌಂಡೇಶನ್' ನಿರ್ವಹಿಸುತ್ತಿತ್ತು.ಗಾಜಾ ಪಟ್ಟಿಯ ವಿವಿಧೆಡೆ ಸ್ಥಾಪಿಸಲಾಗಿದ್ದ ಈ ಕೇಂದ್ರಗಳನ್ನು ಜನರು ಕಿತ್ತುಹಾಕುತ್ತಿದ್ದಾರೆ. ಈ ಕೇಂದ್ರಕ್ಕೆ ಬರುವ ಜನರನ್ನು ನಿಯಂತ್ರಿಸುವ ಸಲುವಾಗಿ ಅಳವಡಿಸಲಾಗಿದ್ದ ಬೇಲಿಗಳನ್ನೂ ಕಿತ್ತೆಸೆದಿದ್ದಾರೆ.

'ನೆರವು ಕಾರ್ಯಗಳಲ್ಲಿ ಹಮಾಸ್ ಮಧ್ಯ ಪ್ರವೇಶಿಸುತ್ತಿತ್ತು, ಇದನ್ನು ತಡೆಯಲು ಇಂಥ ಕೇಂದ್ರಗಳನ್ನು ತೆರೆಯಲಾಗಿತ್ತು. ಇವುಗಳು ಉತ್ತಮ ಕೆಲಸ ಮಾಡಿವೆ' ಎಂದು ಇಸ್ರೇಲ್ ಮತ್ತು ಅಮೆರಿಕ ಹೊಗಳಿವೆ. ಈ ಕೇಂದ್ರದ ಮುಂದೆ ಆಹಾರಕ್ಕಾಗಿ ನಿಂತಿದ್ದ ನೂರಾರು ಜನರನ್ನು ಇಸ್ರೇಲ್ ಸೇನೆ ಹತ್ಯೆ ಮಾಡಿತ್ತು.

ಇಸ್ರೇಲ್‌ಗೆ ಟ್ರಂಪ್ ಭೇಟಿ

ಕದನ ವಿರಾಮ ಒಪ್ಪಂದಕ್ಕೆ ಬರುವಂತೆ ಇಸ್ರೇಲ್ ಮತ್ತು ಹಮಾಸ್ ಸಂಘಟನೆಯನ್ನು ಒತ್ತಾಯಿಸಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಇಸ್ರೇಲ್‌ಗೆ ಭೇಟಿ ನೀಡಲಿದ್ದಾರೆ. ಒತ್ತೆಯಾಳುಗಳ ಕುಟುಂಬಗಳನ್ನು ಅವರು ಇಸ್ರೇಲ್ ಸಂಸತ್ತಿನಲ್ಲಿ ಭೇಟಿ ಮಾಡಲಿದ್ದಾರೆ. ಶ್ವೇತಭವನವು ಬಿಡುಗಡೆ ಮಾಡಿದ ಅಧ್ಯಕ್ಷರ ಕಾರ್ಯಕ್ರಮ ಪಟ್ಟಿಯಲ್ಲಿ ಈ ಮಾಹಿತಿ ಇದೆ.

ಇಸ್ರೇಲ್ ಬಳಿಕ ಟ್ರಂಪ್ ಅವರು ಈಜಿಪ್ಟ್‌ಗೆ ಭೇಟಿ ನೀಡಲಿದ್ದಾರೆ. ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ನಾಯಕರು ಪಾಲ್ಗೊಳ್ಳುವ 'ಶಾಂತಿ ಶೃಂಗಸಭೆ'ಯಲ್ಲಿ ಟ್ರಂಪ್ ಸೋಮವಾರ ಭಾಗವಹಿಸಲಿದ್ದಾರೆ ಎಂದು ಈಜಿಪ್ಟ್ ಅಧ್ಯಕ್ಷ ಅಬ್ದುಲ್ ಫತ್ತಾಹ್ ಅಲ್ ಸೀಸಿ ಕಚೇರಿ ಮಾಹಿತಿ ನೀಡಿದೆ.

ಭಾರಿ ಮಳೆಯಿಂದಾಗಿ ಮೆಕ್ಸಿಕೊದ ಪೊಜಾ ರಿಕಾದಲ್ಲಿ ಮನೆಯೊಂದು ಸಂಪೂರ್ಣ ಹಾನಿಗೊಳಗಾಗಿದೆ – ಪಿಟಿಐ ಚಿತ್ರ

ಮೆಕ್ಸಿಕೊ: ಮಳೆಗೆ 41 ಸಾವು

ಪೊಜಾ ರಿಕಾ (ಮೆಕ್ಸಿಕೊ): ನಿರಂತರವಾಗಿ ಸುರಿದ ಮಳೆಯಿಂದ ಉಂಟಾದ ಭೂಕುಸಿತ ಮತ್ತು ಪ್ರವಾಹದಲ್ಲಿ ಮೆಕ್ಸಿಕೊದಲ್ಲಿ 41 ಮಂದಿ ಮೃತಪಟ್ಟಿದ್ದಾರೆ. ರಕ್ಷಣಾ ಕಾರ್ಯಾಚರಣೆಯು ಮುಂದುವರಿದಿದೆ.

ಅ.6ರಿಂದ 9ರವರೆಗೆ 540 ಮಿ.ಮೀ (21 ಇಂಚಿಗಿಂತ ಅಧಿಕ) ಮಳೆ ಸುರಿದಿದೆ. ಕಾಣೆಯಾಗಿರುವ ಹಲವಾರು ಮಂದಿಯ ಪತ್ತೆಗಾಗಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶನಿವಾರ 20ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದು, 16,000ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ. 150ಕ್ಕೂ ಹೆಚ್ಚು ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ರಸ್ತೆಗಳು ಹಾಗೂ ವಸತಿ ಪ್ರದೇಶಗಳು ಜಲಾವೃತಗೊಂಡಿದ್ದು, ಭೂಕುಸಿತದಿಂದಾಗಿ ಹಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ.

ದುನಿಯಾ ವಿಜಯ್

ತಮಿಳು ಚಿತ್ರದಲ್ಲಿ ದುನಿಯಾ ವಿಜಯ್

‘ಭೀಮ’ ಚಿತ್ರದ ಗೆಲುವಿನ ಬಳಿಕ ನಟ ದುನಿಯಾ ವಿಜಯ್ ಮಾರುಕಟ್ಟೆ ವ್ಯಾಪ್ತಿ ಇನ್ನಷ್ಟು ವಿಸ್ತಾರಗೊಂಡಿದೆ. ಇದೀಗ ಅವರು ನಯನತಾರ ನಟನೆಯ ‘ಮೂಕುತಿ ಅಮ್ಮನ್ 2’ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಂದರ್ ಸಿ. ನಿರ್ದೇಶನದ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದ್ದು ಇದರ ವಿಡಿಯೊವನ್ನು ವಿಜಯ್ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

‘ನನ್ನನ್ನು ತಮಿಳು ಚಿತ್ರರಂಗಕ್ಕೆ ಪರಿಚಯಿಸುತ್ತಿರುವ ಸುಂದರ್ ಸಿ. ಅವರಿಗೆ ಧನ್ಯವಾದಗಳು’ ಎಂದು ವಿಜಯ್ ಕೆಲ ದಿನಗಳ ಹಿಂದೆ ಹೇಳಿಕೊಂಡಿದ್ದರು. ನಯನತಾರ ಈ ಚಿತ್ರದಲ್ಲಿ ದೇವಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಕಳೆದ ಮಾರ್ಚ್‌ನಲ್ಲಿ ಚಿತ್ರ ಸೆಟ್ಟೇರಿತ್ತು. ವಿಜಯದಶಮಿಯಂದು ಚಿತ್ರತಂಡ ಚಿತ್ರದ ಮೊದಲ ಪೋಸ್ಟರ್ ಬಿಡುಗಡೆ ಮಾಡಿ, ಚಿತ್ರದಲ್ಲಿ ದುನಿಯಾ ವಿಜಯ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದನ್ನು ಅಧಿಕೃತಗೊಳಿಸಿತ್ತು. ಆದರೆ ಅವರ ಪಾತ್ರ ಏನು ಎಂಬ ಹೆಚ್ಚಿನ ಮಾಹಿತಿಯನ್ನು ಚಿತ್ರತಂಡ ಬಹಿರಂಗಪಡಿಸಿಲ್ಲ. ಯೋಗಿ ಬಾಬು, ಅಭಿನಯ ಮುಂತಾದವರು ಚಿತ್ರದಲ್ಲಿದ್ದಾರೆ.

‘ಮೂಕುತಿ ಅಮ್ಮನ್’ ಚಿತ್ರದಲ್ಲಿಯೂ ನಯನತಾರ ದೇವಿಯಾಗಿ ಕಾಣಿಸಿಕೊಂಡಿದ್ದರು. ಆರ್‌ಜೆ ಬಾಲಾಜಿ ನಿರ್ದೇಶನದ ಜೊತೆಗೆ ಪ್ರಮುಖ ಪಾತ್ರದಲ್ಲಿ ನಟಿಸಿರುವ ಚಿತ್ರಕ್ಕೆ ಈಶ್ವರಿ ಕೆ.ಗಣೇಶ್ ಬಂಡವಾಳ ಹೂಡಿದ್ದರು.

ಪುರಿ ಜಗನ್ನಾಥ್ ನಿರ್ದೇಶಿಸಿ ವಿಜಯ್ ಸೇತುಪತಿ ನಟಿಸುತ್ತಿರುವ ಚಿತ್ರದಲ್ಲಿಯೂ ದುನಿಯಾ ವಿಜಯ್ ನಟಿಸುತ್ತಿದ್ದಾರೆ. ಜಡೇಶ್ ಹಂಪಿ ನಿರ್ದೇಶನದಲ್ಲಿ ದುನಿಯಾ ವಿಜಯ್ ನಟನೆಯ ‘ಲ್ಯಾಂಡ್ ಲಾರ್ಡ್’ ಚಿತ್ರ ಬಿಡುಗಡೆಗೆ ಸಿದ್ಧವಿದ್ದು, ಈ ತಿಂಗಳ ಅಂತ್ಯದಲ್ಲಿ ತೆರೆಗೆ ಬರುವ ನಿರೀಕ್ಷೆಯಿದೆ. ವಿಜಯ್ ನಟಿಸಿ, ನಿರ್ದೇಶಿಸುತ್ತಿರುವ ‘ಸಿಟಿ ಲೈಟ್ಸ್’ ಚಿತ್ರದ ಚಿತ್ರೀಕರಣ ಮುಕ್ತಾಯ ಹಂತದಲ್ಲಿದೆ.

ಒಂದೇ ಒಂದು ಸಲ ಎಂದ ದರ್ಶನ್

ದರ್ಶನ್ ಅಭಿನಯದ ಬಹು ನಿರೀಕ್ಷಿತ ‘ದಿ ಡೆವಿಲ್’ ಚಿತ್ರದ ‘ಒಂದೇ ಒಂದು ಸಲ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರ ಡಿ.12ರಂದು ತೆರೆಗೆ ಬರಲಿದೆ.

ಗೀತೆಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ಕಪಿಲ್ ಕಪಿಲನ್ ಹಾಗೂ ಚಿನ್ಮಯಿ ಶ್ರೀಪಾದ ಧ್ವನಿಯಾಗಿದ್ದಾರೆ. ಬ್ಯಾಂಕಾಕ್‌ನ ಸಮುದ್ರ ತೀರದಂಚಿನಲ್ಲಿ ನಡೆಯುವ ಪ್ರೀತಿ ಸನ್ನಿವೇಶಗಳನ್ನು ಹೊಂದಿರುವ ಈ ಹಾಡಿನಲ್ಲಿ ದರ್ಶನ್ ಹಾಗೂ ರಚನಾ ರೈ ಹೆಜ್ಜೆ ಹಾಕಿದ್ದಾರೆ.

ಮಾಸ್ ಆ್ಯಕ್ಷನ್ ಕಥೆ ಹೊಂದಿರುವ ಚಿತ್ರವನ್ನು ಜೈಮಾತಾ ಕಂಬೈನ್ಸ್ ಅಡಿಯಲ್ಲಿ ಪ್ರಕಾಶ್ ವೀರ್ ನಿರ್ಮಿಸಿದ್ದಾರೆ. ತುಳಸಿ, ಅಚ್ಯುತಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಸುಧಾಕರ್ ಎಸ್.ರಾಜ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನವಿದೆ.

ದರ್ಶನ್, ರಚನಾ ರೈ



ಅಮೆಜಾನ್ ಪ್ರೈಮ್‌ನಲ್ಲಿ ರಿಪ್ಪನ್ ಸ್ವಾಮಿ

ವಿಜಯ್ ರಾಘವೇಂದ್ರ

ವಿಜಯ್ ರಾಘವೇಂದ್ರ ನಟನೆಯ ‘ರಿಪ್ಪನ್ ಸ್ವಾಮಿ’ ಚಿತ್ರ ಅಮೆಜಾನ್ ಪ್ರೈಮ್‌ನಲ್ಲಿ ಲಭ್ಯವಿದೆ. ಮರ್ಡರ್, ಮಿಸ್ಟ್ರಿ ಹೊಂದಿರುವ ಚಿತ್ರಕ್ಕೆ ಕಿಶೋರ್ ಮೂಡಬಿದ್ರೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೆಲ ದಿನಗಳ ಹಿಂದೆ ಚಿತ್ರಮಂದಿರಗಳಲ್ಲಿ ತೆರೆಕಂಡ ಚಿತ್ರ ಮಿಶ್ರ ಪ್ರತಿಕ್ರಿಯೆ ಪಡೆದಿತ್ತು. ‘ಒಬ್ಬ ಮನುಷ್ಯನಿಗೆ ಚಿಕ್ಕಂದಿನಲ್ಲಿಯೇ ಎದುರಾದ ಬೇಡದ ಸಂಬಂಧ ತನ್ನ ಮದುವೆಯಲ್ಲೂ ಮುಂದುವರೆದರೆ ಅವನ ಮನಸ್ಥಿತಿ ಹೇಗಾಗಬೇಡ? ಆತ ಪ್ರೀತಿ ಮಾಡಿದವಳನ್ನು ದ್ವೇಷಿಸಬೇಕಾ? ಕ್ಷಮಿಸಬೇಕಾ? ಎಂಬುದೇ ಸಿನಿಮಾ. ಸ್ವಾಮಿಯಾಗಿ ವಿಜಯ್ ರಾಘವೇಂದ್ರ ಅವರು ಎಲ್ಲರನ್ನೂ ಕಾಡುತ್ತಾರೆ’ ಎಂದಿದ್ದಾರೆ ನಿರ್ದೇಶಕರು.

ಪಂಚಾನನ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಸಿದ್ಧಗೊಂಡ ಚಿತ್ರದಲ್ಲಿ ವಿಜಯ್ ರಾಘವೇಂದ್ರ ಅವರಿಗೆ ಅಶ್ವಿನಿ ಜೋಡಿಯಾಗಿದ್ದಾರೆ. ಸ್ಯಾಮ್ಯುವೆಲ್ ಅಭಿ ಸಂಗೀತ, ರಂಗನಾಥ್ ಸಿ.ಎಂ ಛಾಯಾಚಿತ್ರಗ್ರಹಣ, ಶಶಾಂಕ್ ನಾರಾಯಣ್ ಸಂಕಲನವಿದೆ.

ಹೊಸಬರ ‘ಜೈ ಗದಾ ಕೇಸರಿ’

ಜೀವಿತಾ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಜೈ ಗದಾ ಕೇಸರಿ’ ಚಿತ್ರದ ಟೀಸರ್ ಮತ್ತು ಹಾಡುಗಳು ಇತ್ತೀಚೆಗಷ್ಟೆ ಬಿಡುಗಡೆಗೊಂಡಿವೆ. ಯತೀಶ್‌ಕುಮಾರ್.ವಿ ಮತ್ತು ಮಂಜು ಹೊಸಪೇಟೆ ಜಂಟಿಯಾಗಿ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಬಸವರಾಜ್ ಭಜಂತ್ರಿ ಬಂಡವಾಳ ಹೂಡಿದ್ದಾರೆ.

‘ರಾಮ ಮತ್ತು ಹನುಮಂತನ ಬಗೆಗಿನ ಸಾಕಷ್ಟು ವಿಚಾರಗಳು ಚಿತ್ರದಲ್ಲಿದೆ. ಆಂಜನೇಯನ ಗದೆಗೆ ಪ್ರಾಮುಖ್ಯ ನೀಡಲಾಗಿದ್ದು, ಇದರ ಸುತ್ತ ಸನ್ನಿವೇಶಗಳು ಸಾಗುತ್ತವೆ. ಊರಿನ ದೇವಸ್ಥಾನದಲ್ಲಿರುವ ಗದೆಯ ಮೇಲೆ ಆಕ್ರಮಣ ಮಾಡಲು ದುರುಳರು ಬಂದಾಗ, ಅದನ್ನು ರಕ್ಷಣೆ ಮಾಡಲು ಇಬ್ಬರು ಹುಡುಗರು ಮುಂದಾಗುತ್ತಾರೆ. ಆ ನಂತರ ಯಾವ ರೀತಿಯ ಬೆಳವಣಿಗೆಗಳು ಆಗುತ್ತವೆ ಎಂಬುದೇ ಚಿತ್ರ’ ಎಂದರು ನಿರ್ದೇಶಕರು.

ರಾಜ್ ಚರಣ್ ಬ್ರಹ್ಮಾವರ್ ಮತ್ತು ಈಶ್ವರ ಚಿತ್ರದ ನಾಯಕರು. ಜೀವಿತಾ ವಸಿಷ್ಠ ನಾಯಕಿ. ಅವಿನಾಶ್, ಹೊನ್ನವಳ್ಳಿ ಕೃಷ್ಣ, ಧರ್ಮ, ಅರವಿಂದರಾವ್, ಜಯರಾಮ್ ಮುಂತಾದವರು ನಟಿಸಿದ್ದಾರೆ.

ಕಾರ್ತಿಕ್ ವೆಂಕಟೇಶ್, ಪ್ರಸನ್ನ ಬೋಜಶೆಟ್ಟರ್ ಹಾಗೂ ಥಾಮಸ್ ಸ್ಯಾಮ್ ಸಂಗೀತ ಸಂಯೋಜಿಸಿದ್ದಾರೆ. ಶ್ಯಾಮ್ ಸಿಂಧನೂರು, ಎಸ್.ನಾಗರಾಜ್ ಛಾಯಾಚಿತ್ರಗ್ರಹಣವಿದೆ.

ಸಿ.ಎಂ ಯೋಗಿ ‘ನುಸುಳುಕೋರ’ ಅಖಿಲೇಶ್ ಯಾದವ್

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ‘ನುಸುಳುಕೋರ’ ಎಂದು ಕರೆದಿದ್ದು, ಅವರನ್ನು ಉತ್ತರಾಖಂಡಕ್ಕೆ ವಾಪಸ್ ಕಳುಹಿಸಬೇಕು ಎಂದು ಹೇಳಿದ್ದಾರೆ.

ಅಖಿಲೇಶ್

ಲಖನೌದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, ‘ಬಿಜೆಪಿ ಬಳಿ ಇರುವ ಅಂಕಿಅಂಶ ನಕಲಿಯಾಗಿವೆ. ಅವರ ಅಂಕಿಅಂಶ ನಂಬುವವರು ದಾರಿ ತಪ್ಪುತ್ತಾರೆ’ ಎಂದು ಟೀಕಿಸಿದ್ದಾರೆ.

‘ಬಿಜೆಪಿಯವರು ವಲಸಿಗರ ಕುರಿತು ತಪ್ಪು ಅಂಕಿಅಂಶ ನೀಡುತ್ತಿದ್ದಾರೆ. ಉತ್ತರ ಪ್ರದೇಶದಲ್ಲೂ ನಾವು ನುಸುಳುಕೋರರನ್ನು ಕಾಣಬಹುದು. ಮುಖ್ಯಮಂತ್ರಿ (ಯೋಗಿ) ಅವರು ಉತ್ತರಾಖಂಡದವರು. ಅವರನ್ನು ಉತ್ತರಾಖಂಡಕ್ಕೆ ಕಳುಹಿಸಬೇಕೆಂದು ನಾವು ಬಯಸುತ್ತೇವೆ. ಸೈದ್ಧಾಂತಿಕ ದೃಷ್ಟಿಕೋನದಿಂದಲೂ ಅವರೊಬ್ಬರು ನುಸುಳುಕೋರ’ ಎಂದಿದ್ದಾರೆ.

‘ಆದಿತ್ಯನಾಥ ಅವರು ಬಿಜೆಪಿಯ ಸದಸ್ಯರಾಗಿರಲಿಲ್ಲ. ಅವರು ಇನ್ನೊಂದು ಪಕ್ಷದ ಸದಸ್ಯರಾಗಿದ್ದರು. ಪಕ್ಷಕ್ಕೆ ಒಳನುಸುಳಿದ ಅವರನ್ನು ಯಾವಾಗ ಹೊರಹಾಕಲಾಗುತ್ತದೆ’ ಎಂದೂ ಪ್ರಶ್ನಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನುಸುಳುಕೋರರ ಬಗ್ಗೆ ಹೇಳಿಕೆ ನೀಡಿದ್ದರ ಬೆನ್ನಲ್ಲೇ ಅಖಿಲೇಶ್ ಅವರು ಈ ಮಾತುಗಳನ್ನಾಡಿದ್ದಾರೆ.

ಅಫ್ಗಾನಿಸ್ತಾನ ಸಚಿವ ಮುತ್ತಾಕಿ ತಾಜ್ ಮಹಲ್ ಭೇಟಿ ರದ್ದು

ಆಗ್ರಾ (ಪಿಟಿಐ): ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರ ಆಗ್ರಾ ಭೇಟಿಯನ್ನು ರದ್ದು ಮಾಡಲಾಗಿದೆ.

ಭೇಟಿ ರದ್ದಾಗಲು ಯಾವುದೇ ಕಾರಣವನ್ನು ತಿಳಿಸಿಲ್ಲ. ಮುತ್ತಾಕಿ ಅವರು, ವಿಶ್ವಪ್ರಸಿದ್ಧ ತಾಜ್ ಮಹಲ್ ನೋಡಲು ಆಗ್ರಾಕ್ಕೆ ಭಾನುವಾರ ಭೇಟಿ ನೀಡಬೇಕಿತ್ತು.

ಗುರುವಾರ ದೆಹಲಿಗೆ ಬಂದಿಳಿದ ಮುತ್ತಾಕಿ ಅವರು 6 ದಿನಗಳ ಭಾರತ ಪ್ರವಾಸದಲ್ಲಿದ್ದಾರೆ. ಇವರು ಭಾರತಕ್ಕೆ ಭೇಟಿ ನೀಡಿದ ತಾಲಿಬಾನ್‌ನ ಮೊದಲ ಹಿರಿಯ ಸಚಿವರಾಗಿದ್ದಾರೆ.

ಬಿಹಾರ: ಎನ್‌ಡಿಎ ಸೀಟು ಹಂಚಿಕೆ ಅಂತಿಮ

ಇಂಡಿಯಾ ಕೂಟ: ಹೆಚ್ಚು ಕ್ಷೇತ್ರಗಳಿಗೆ ಜಾರ್ಖಂಡ್ ಮುಕ್ತಿ ಮೋರ್ಚಾ ಪಟ್ಟು

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆ ಚುನಾವಣೆಯ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಎನ್‌ಡಿಎ ಭಾನುವಾರ ಅಂತಿಮಗೊಳಿಸಿದೆ. 243 ಸ್ಥಾನಗಳ ಪೈಕಿ ತಲಾ 101 ಸ್ಥಾನಗಳಲ್ಲಿ ಬಿಜೆಪಿ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೆಡಿಯು ಸ್ಪರ್ಧಿಸಲಿವೆ. ಇನ್ನುಳಿದ ಸ್ಥಾನಗಳನ್ನು ಇತರೆ ಸಣ್ಣ ಮಿತ್ರ ಪಕ್ಷಗಳಿಗೆ ಹಂಚಿಕೆ ಮಾಡಲಾಗಿದೆ.

ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಂಡಿರುವುದನ್ನು ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಕುಮಾರ್ ಝಾ, ಬಿಜೆಪಿ ಮುಖಂಡ ಸಾಮ್ರಾಟ್ ಚೌಧರಿ ಖಚಿತಪಡಿಸಿದ್ದಾರೆ. ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷವು (ರಾಮ್ ವಿಲಾಸ್) 29 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ.

ಕನಿಷ್ಠ 15 ಸ್ಥಾನಗಳಾದರೂ ಬೇಕು ಎಂದು ಪಟ್ಟು ಹಿಡಿದಿದ್ದ, ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಅವರ ಎಚ್‌ಎಎಂ ಪಕ್ಷಕ್ಕೆ 6 ಸ್ಥಾನ ನೀಡಲಾಗಿದೆ. ರಾಜ್ಯಸಭಾ ಸದಸ್ಯ ಉಪೇಂದ್ರ ಕುಶ್ವಾಹ ಅವರ ರಾಷ್ಟ್ರೀಯ ಲೋಕ ಮೋರ್ಚಾ ಪಕ್ಷವು 6 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ.

ನಾಲ್ವರು ಹಾಲಿ ಶಾಸಕರ ಕೈಬಿಟ್ಟ ಜೆಡಿಯು: ಜೆಡಿಯು ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿದ್ದು, ನಾಲ್ವರು ಹಾಲಿ ಶಾಸಕರನ್ನು ಕೈಬಿಡಲಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

‘ಆಯಾ ಕ್ಷೇತ್ರಗಳ ಮತದಾರರ ಅಭಿಪ್ರಾಯವನ್ನು ಸಂಗ್ರಹಿಸಿ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಗೊಂದಲ ಇಲ್ಲ’: ‘ಬಿಹಾರದಲ್ಲಿ ಸೀಟು ಹಂಚಿಕೆಯಲ್ಲಿ ಯಾವುದೇ ಗೊಂದಲ ಇಲ್ಲ. ಮಹಾಘಟಬಂಧನ್ ಒಟ್ಟಾಗಿ ಚುನಾವಣೆ ಎದುರಿಸಲಿದೆ’ ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಹೇಳಿದ್ದಾರೆ.

‘ಇಂಡಿಯಾ ಕೂಟವು ಅಕ್ಟೋಬರ್ 14ರ ಒಳಗೆ ಬಿಹಾರ ವಿಧಾನಸಭಾ ಚುನಾವಣೆಯ ಸೀಟು ಹಂಚಿಕೆ ವಿಚಾರವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪಕ್ಷವು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುತ್ತದೆ’ ಎಂದು ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಪ್ರಧಾನ ಕಾರ್ಯದರ್ಶಿ ಸುಪ್ರಿಯೊ ಭಟ್ಟಾಚಾರ್ಯ ಶನಿವಾರ ಹೇಳಿದ್ದರು. ಇದರ ಬೆನ್ನಲ್ಲೇ ಪವನ್ ಖೇರಾ ಅವರ ಹೇಳಿಕೆ ಹೊರಬಿದ್ದಿದೆ.

‘ಸೀಟು ಹಂಚಿಕೆಯಲ್ಲಿ ಹೆಚ್ಚಿನ ಸ್ಥಾನ ಸಿಗದಿದ್ದಲ್ಲಿ, ಪಕ್ಷವು ತನ್ನದೇ ಆದ ನಿರ್ಧಾರ ತೆಗೆದುಕೊಳ್ಳುತ್ತದೆ’ ಎಂದು ಜೆಎಂಎಂ ಎಚ್ಚರಿಸಿದೆ. 12 ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಉದ್ದೇಶವನ್ನು ಹೊಂದಿದೆ.

ಅಂಕಿ ಅಂಶಗಳು

- **101** ಬಿಜೆಪಿ ಮತ್ತು ಜೆಡಿಯು ಸ್ಪರ್ಧಿಸಲಿರುವ ತಲಾ ಕ್ಷೇತ್ರಗಳು
- **29** ಎಲ್‌ಜೆಪಿ (ರಾಮ್ ವಿಲಾಸ್)
- **6** ಎಚ್‌ಎಎಂ (ಜಿತನ್ ರಾಮ್ ಮಾಂಝಿ) ಪಕ್ಷ
- **6** ರಾಷ್ಟ್ರೀಯ ಲೋಕ ಮೋರ್ಚಾ

ಪಾನ ನಿಷೇಧ ವಾಪಸ್: ಜನ ಸುರಾಜ್ ಪಾರ್ಟಿ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಪಟ್ನಾ: ಬಿಹಾರದಲ್ಲಿ ತಮ್ಮ ಪಕ್ಷವನ್ನು ಅಧಿಕಾರಕ್ಕೆ ತಂದರೆ ಪಾನ (ಮದ್ಯ) ನಿಷೇಧ ವಾಪಸ್ ಪಡೆಯುವ ನಿರ್ಧಾರವನ್ನು ಮೊದಲು ಮಾಡುವುದಾಗಿ ಪ್ರಶಾಂತ್ ಕಿಶೋರ್ ನೇತೃತ್ವದ ನೂತನ ಪಕ್ಷ ಜನ ಸುರಾಜ್ ಪಾರ್ಟಿ ಘೋಷಣೆ ಮಾಡಿದೆ.

ಮಾಜಿ ಸಂಸದ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಉದಯ್ ಸಿಂಗ್ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ‘2016ರಲ್ಲಿ ನಿತೀಶ್ ಕುಮಾರ್ ಅವರು ಕೈಗೊಂಡ ಮದ್ಯ ನಿಷೇಧದ ತಪ್ಪು ನಿರ್ಧಾರದಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕವಾಗಿ ₹28,000 ಕೋಟಿ ನಷ್ಟವಾಗುತ್ತಿದೆ. ನಾವು ಮದ್ಯ ಮಾರಾಟದಿಂದ ಬರುವ ಆದಾಯವನ್ನು ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡಲು ಬಳಸುತ್ತೇವೆ’ ಎಂದರು.

ಪ್ರಶಾಂತ್ ವಿರುದ್ಧ ಎಫ್‌ಐಆರ್: ಈ ಮಧ್ಯೆ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ವಿರುದ್ಧ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಎಫ್‌ಐಆರ್ ದಾಖಲಾಗಿದೆ. ಅನುಮತಿಸಿದ್ದಕ್ಕಿಂತ ಹೆಚ್ಚು ಸುದ್ದಿಗೋಷ್ಠಿ ನಡೆಸಿದ್ದು, ರಾಘೋಪುರದಲ್ಲಿ ಚುನಾವಣಾ ನಿಯಮ ಪಾಲಿಸದ ಆರೋಪ ಹೊರಿಸಲಾಗಿದೆ.

ದೆಹಲಿಗೆ ಲಾಲು ದೌಡು

ಬಿಹಾರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಇಂಡಿಯಾ ಕೂಟದ ಸೀಟು ಹಂಚಿಕೆ ಗೊಂದಲ ಇನ್ನಷ್ಟು ದಿನ ಮುಂದುವರಿಯುವ ಲಕ್ಷಣಗಳು ಕಾಣುತ್ತಿವೆ. ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ತಮ್ಮ ಪುತ್ರ ಮತ್ತು ಉತ್ತರಾಧಿಕಾರಿ ತೇಜಸ್ವಿ ಯಾದವ್ ಮತ್ತು ಪತ್ನಿ, ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರೊಂದಿಗೆ ಭಾನುವಾರ ದೆಹಲಿಗೆ ಧಾವಿಸಿದ್ದಾರೆ.

‘ಉದ್ಯೋಗಕ್ಕಾಗಿ ಜಮೀನು ಹಗರಣ’ದ ವಿಚಾರಣೆ ಸೋಮವಾರ ಸುಪ್ರೀಂಕೋರ್ಟ್‌ನಲ್ಲಿ ನಡೆಯಲಿದೆ. ಇದರ ಜತೆಗೆ ಲಾಲು ಅವರು ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಹಿರಿಯ ಮುಖಂಡರನ್ನು ಭೇಟಿಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವ ಹಾಗಿಲ್ಲ’ ಎಂದು ಮೂಲಗಳು ತಿಳಿಸಿವೆ.

ಆರ್‌ಜೆಡಿ, ಕಾಂಗ್ರೆಸ್ ಮತ್ತು ಎಡ ಪಕ್ಷಗಳ ಮೈತ್ರಿಯಾದ ‘ಮಹಾಘಟಬಂಧನ್’ನಲ್ಲಿ ಸೀಟು ಹಂಚಿಕೆ ಮತ್ತು ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಲಾಲು ಪ್ರಸಾದ್ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಲು ಲಾಲು ಮತ್ತು ರಾಬ್ಡಿ ದೇವಿ ನಿರಾಕರಿಸಿದರು. ಆದರೆ, ತೇಜಸ್ವಿ ಯಾದವ್, ‘ಎಲ್ಲವೂ ಚೆನ್ನಾಗಿದೆ’ ಎಂದಷ್ಟೇ ಚುಟುಕಾಗಿ ಉತ್ತರಿಸಿದರು.

ಭದ್ರತಾ ಸಿಬ್ಬಂದಿಗೆ 1000 ಬೋಗಿ ಸಜ್ಜು

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆಯ ಭದ್ರತೆಗಾಗಿ ನಿಯೋಜನೆಗೊಳ್ಳಲಿರುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) 1 ಲಕ್ಷ ಸಿಬ್ಬಂದಿಯ ಓಡಾಟಕ್ಕಾಗಿ ಭಾರತೀಯ ರೈಲ್ವೆಯು 1000 ಬೋಗಿಗಳನ್ನು ಸಜ್ಜುಗೊಳಿಸಿರುವುದಾಗಿ ಹೇಳಿದೆ.

ನವೆಂಬರ್ 6 ಮತ್ತು 11ರಂದು ಚುನಾವಣೆ ನಡೆಯಲಿದ್ದು, ಭದ್ರತೆ ಒದಗಿಸಲು ಜಮ್ಮು–ಕಾಶ್ಮೀರ, ಈಶಾನ್ಯ ಭಾರತದಿಂದ ಅರಸೇನಾ ಪಡೆಗಳು ಬಿಹಾರಕ್ಕೆ ತೆರಳಲಿವೆ. ಹೀಗಾಗಿ 18 ಬೋಗಿಗಳನ್ನು ಹೊಂದಿರುವಂತಹ 70 ರಿಂದ 80 ರೈಲುಗಳನ್ನು ಸೇವೆಗೆ ನಿಯೋಜಿಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ: ಮೂವರ ಬಂಧನ

ಬಂಗಾಳ: ಕಾಂಗ್ರೆಸ್, ಬಿಜೆಪಿ ಪ್ರತಿಭಟನೆ, ಸಿಪಿಎಂ ಖಂಡನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬರ್ಧಮಾನ್ ಜಿಲ್ಲೆಯ ದುರ್ಗಾಪುರದ ಖಾಸಗಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಭಾನುವಾರ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿಯನ್ನೂ ವಶಕ್ಕೆ ಪಡೆಯಲಾಗಿದೆ. ಬಂಧಿತರ ವಿವರವನ್ನು ಪೊಲೀಸರು ಬಹಿರಂಗಪಡಿಸಿಲ್ಲ.

ದುರ್ಗಾಪುರದಲ್ಲಿರುವ ವೈದ್ಯಕೀಯ ಕಾಲೇಜಿನ ಕ್ಯಾಂಪಸ್ ಹೊರಗೆ, ಶುಕ್ರವಾರ ರಾತ್ರಿ ಎರಡನೇ ವರ್ಷದ ವೈದ್ಯ ವಿದ್ಯಾರ್ಥಿನಿ ತನ್ನ ಸ್ನೇಹಿತನೊಂದಿಗೆ ಊಟ ಮಾಡಲು ಹೋಗಿದ್ದಾಗ ಘಟನೆ ನಡೆದಿತ್ತು. ಸಂತ್ರಸ್ತೆ ಒಡಿಶಾದ ಜಲೇಶ್ವರದವರು.

ಸುರಕ್ಷಿತವಲ್ಲ: ‘ಪಶ್ಚಿಮ ಬಂಗಾಳವು ಅಪರಾಧಿಗಳ ಪಾಲಿಗೆ ಸುರಕ್ಷಿತವಾಗಿದೆಯೇ ಹೊರತು ಮಹಿಳೆಯರಿಗೆ ಯಾವುದೇ ಭದ್ರತೆ ಇಲ್ಲ’ ಎಂದು ಸಿಪಿಎಂ ಆರೋಪಿಸಿದೆ.

‘ವಸತಿ ನಿಲಯದಲ್ಲಿದ್ದುಕೊಂಡು ಅಧ್ಯಯನ ಮಾಡುವ ವಿದ್ಯಾರ್ಥಿಗಳು, ವಿಶೇಷವಾಗಿ ಹೊರ ರಾಜ್ಯದವರು ವಸತಿ ನಿಲಯದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ತಡರಾತ್ರಿ ಹೊರಗೆ ಹೋಗಬಾರದು’ ಎಂದು ಸಿಪಿಎಂ ಕೇಂದ್ರ ಸಮಿತಿಯ ಸದಸ್ಯ ಸುಜನ್ ಚಕ್ರವರ್ತಿ ಅವರು ಹೇಳಿದ್ದಾರೆ.

ಬಿಜೆಪಿ, ಕಾಂಗ್ರೆಸ್ ಪ್ರತಿಭಟನೆ: ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಖಂಡಿಸಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪಶ್ಚಿಮ ಬಂಗಾಳದ ವಿವಿಧೆಡೆ ಭಾನುವಾರ ಪ್ರತಿಭಟನೆ ನಡೆಸಿದರು. ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.

ಯಾರನ್ನೂ ಬಿಡುವುದಿಲ್ಲ:ಮಮತಾ

‘ಸಾಮೂಹಿಕ ಅತ್ಯಾಚಾರ ಪ್ರಕರಣದ ಯಾವೊಬ್ಬ ಆರೋಪಿಯನ್ನೂ ಬಿಡುವುದಿಲ್ಲ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಹೇಳಿದ್ದಾರೆ.

‘ಈಗಾಗಲೇ ಮೂವರನ್ನು ಬಂಧಿಸಲಾಗಿದೆ. ಇನ್ನುಳಿದವರ ಬಂಧನಕ್ಕೆ ಶೋಧ ನಡೆಯುತ್ತಿದೆ. ಯಾರನ್ನೂ ಬಿಡುವುದಿಲ್ಲ’ ಎಂದರು.

‘ವಿದ್ಯಾರ್ಥಿನಿ ಅಧ್ಯಯನ ಮಾಡುತ್ತಿದ್ದ ವೈದ್ಯಕೀಯ ಕಾಲೇಜು ಸಹ ಈ ಘಟನೆಗೆ ಹೊಣೆ. ಖಾಸಗಿ ಕಾಲೇಜುಗಳು ತಮ್ಮ ಕ್ಯಾಂಪಸ್ ಒಳಗೆ ಮತ್ತು ಕ್ಯಾಂಪಸ್ ಸುತ್ತಮುತ್ತ ವಿದ್ಯಾರ್ಥಿಗಳಿಗೆ ಒದಗಿಸಿರುವ ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ಬ್ಯಾನರ್ಜಿ ಅವರು ಹೇಳಿದರು.

ಜೀವರಕ್ಷಕ ಸೌಲಭ್ಯ: ಕೇಂದ್ರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಆಂಬುಲೆನ್ಸ್‌ಗಳಲ್ಲಿ ಎಲ್ಲ ಸಮಯದಲ್ಲೂ ಜೀವರಕ್ಷಕ ಸೌಲಭ್ಯಗಳನ್ನು ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ನಿಯಮಗಳ ಚೌಕಟ್ಟನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಿರುವ ಅರ್ಜಿಯ ಕುರಿತು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರ ಮತ್ತು ಇತರರಿಂದ ಪ್ರತಿಕ್ರಿಯೆ ಕೋರಿದೆ.

ವಾಸ್ತವತೆ ಮತ್ತು ಅಸ್ತಿತ್ವದಲ್ಲಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ (ಎಸ್‌ಒಪಿ) ನಡುವಿನ ಅಂತರವನ್ನು ಗುರುತಿಸಲು ಆಂಬುಲೆನ್ಸ್‌ಗಳ ಕಾರ್ಯಾಚರಣೆ, ನಿರ್ವಹಣೆ ಮತ್ತು ನಿಯಂತ್ರಣದ ಪ್ರಸ್ತುತ ವಾಸ್ತವಿಕ ಸ್ಥಿತಿ ಪರಿಶೀಲಿಸಲು ಸ್ವತಂತ್ರ ಸಮಿತಿ ರಚಿಸುವಂತೆ ನಿರ್ದೇಶನ ಕೋರಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು ನೋಟಿಸ್‌ಗೆ ನಾಲ್ಕು ವಾರಗಳಲ್ಲಿ ಪ್ರತಿಕ್ರಿಯಿಸುವಂತೆ ಅ.10ರಂದು ಆದೇಶಿಸಿದೆ.

ಕೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವನ್ನು ಪ್ರತಿವಾದಿಗಳನ್ನಾಗಿಸಲಾಗಿದೆ.

‘ಆಪರೇಷನ್‌ ಬ್ಲೂಸ್ಟಾರ್‌ಗೆ ಬೆಲೆ ತೆತ್ತ ಇಂದಿರಾ’

ಶಿಮ್ಲಾ/ನವದೆಹಲಿ (ಪಿಟಿಐ): ‘ಆಪರೇಷನ್ ಬ್ಲೂ ಸ್ಟಾರ್’ ಕಾರ್ಯಾಚರಣೆಯನ್ನು ಕೈಗೊಳ್ಳುವ ನಿರ್ಧಾರ ಮಾಡಿದ್ದು ತಪ್ಪು. ಇಂದಿರಾ ಗಾಂಧಿ ಅವರು ಇಂಥ ತಪ್ಪು ನಿರ್ಧಾರ ತೆಗೆದುಕೊಂಡದಕ್ಕೆ ಪ್ರಾಣ ಕಳೆದುಕೊಂಡು ಬೆಲೆ ತೆತ್ತರು’ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರು ಅಭಿಪ್ರಾಯಪಟ್ಟರು.

ಚಿದಂಬರಂ

ಹಿಮಾಚಲ ಪ್ರದೇಶದ ಕಸೌಲಿಯಲ್ಲಿ ನಡೆದ ‘ಕುಶ್ವಂತ್ ಸಿಂಗ್ ಸಾಹಿತ್ಯ ಹಬ್ಬ’ದಲ್ಲಿ ಪತ್ರಕರ್ತೆ ಹರಿಂದರ್ ಬವೇಜಾ ಅವರ ಜೀವನಚರಿತ್ರೆ ‘ದೇ ವಿಲ್ ಶೂಟ್ ಯು ಮೇಡಮ್: ಮೈ ಲೈಫ್ ಥ್ರೂ ಕಾನ್‌ಫ್ಲಿಕ್ಟ್’ ಪುಸ್ತಕದ ಕುರಿತು ಶನಿವಾರ ನಡೆದ ಸಂವಾದದಲ್ಲಿ ಚಿದಂಬರಂ ಮಾತನಾಡಿದರು.

ಬವೇಜಾ ಅವರು ಸಂವಾದವನ್ನು ನಿರ್ವಹಿಸಿದ್ದರು.

‘ಈ ತಪ್ಪು ನಿರ್ಧಾರವನ್ನು ಇಂದಿರಾ ಗಾಂಧಿ ಅವರು ಮಾತ್ರವೇ ತೆಗೆದುಕೊಂಡಿದ್ದಲ್ಲ. ಇದರಲ್ಲಿ ಸೇನೆ, ಗುಪ್ತಚರ ಇಲಾಖೆ, ಪೊಲೀಸರ ಪಾತ್ರವೂ ಇತ್ತು. ಆದ್ದರಿಂದ ಇಂದಿರಾ ಗಾಂಧಿ ಅವರನ್ನು ಮಾತ್ರವೇ ದೂಷಿಸುವಂತಿಲ್ಲ. ಸ್ವರ್ಣ ಮಂದಿರದ ಒಳಗಿದ್ದ ಭಯೋತ್ಪಾದಕರನ್ನು ಹೊರಗೆಳೆದು ತರಲು ಮತ್ತು ಅವರನ್ನು ಬಂಧಿಸಲು ಬೇರೆ ವಿಧಾನಗಳಿದ್ದವು’ ಎಂದರು.

‘ಬ್ಲೂ ಸ್ಟಾರ್ ಕಾರ್ಯಾಚರಣೆಯಾದ ಎರಡು ಮೂರು ವರ್ಷಗಳ ಬಳಿಕ ‘ಆಪರೇಷನ್ ಬ್ಲಾಕ್ ಥಂಡರ್’ ಅನ್ನು ಕೈಗೊಳ್ಳಲಾಯಿತು. ಈ ಕಾರ್ಯಾಚರಣೆಯಲ್ಲಿ ಸೇನೆಯನ್ನು ಹೊರಗಿಡಲಾಯಿತು. ಈ ಕಾರ್ಯಾಚರಣೆಯೇ ಸರಿಯಾದ ನಿರ್ಧಾರವಾಗಿತ್ತು’ ಎಂದರು.

ಬವೇಜಾ ಅವರು ಪ್ರತಿಕ್ರಿಯಿಸಿ, ‘ಪಂಜಾಬ್‌ನಲ್ಲಿ ಹಿಂಸೆಯ ಮತ್ತೊಂದು ಅಧ್ಯಾಯ ಆರಂಭವಾಗುವುದಕ್ಕೆ ಆಪರೇಷನ್ ಬ್ಲೂ ಸ್ಟಾರ್ ಕಾರಣ. ಇಂದಿರಾ ಅವರು ರಾಜಕಾರಣದಲ್ಲಿ ಧರ್ಮವನ್ನು ಲೇಪ ಮಾಡಿದರು. ಭಿಂದ್ರನ್‌ವಾಲೆಯನ್ನು ಬಳಸಿಕೊಂಡು ಅಕಾಲಿ ದಳದವರನ್ನು ನಿಯಂತ್ರಿಸಲು ಯತ್ನಿಸಿದ್ದರು. ಇದೊಂದು ಅತ್ಯಂತ ಕೆಟ್ಟ ನಿರ್ಧಾರವಾಗಿತ್ತು’ ಎಂದರು.

ಇದಕ್ಕೆ ಚಿದಂಬರಂ ಅವರು ಆಕ್ಷೇಪ ವ್ಯಕ್ತಪಡಿಸಿ, ‘ಭಿಂದ್ರನ್‌ವಾಲೆಯನ್ನು ಸೃಷ್ಟಿಸಿದ್ದು ಇಂದಿರಾ ಗಾಂಧಿ ಅವರಲ್ಲ. ಇಂಥ ಆರೋಪ ಮಾಡುವುದು ಸರಿ ಎಂದು ನನಗೆ ಅನ್ನಿಸುವುದಿಲ್ಲ’ ಎಂದು ಹೇಳಿದರು.

ಪಿ. ಚಿದಂಬರಂ ಹೇಳಿಕೆ: ಕಾಂಗ್ರೆಸ್ ಅಸಮಾಧಾನ

‘ಆಪರೇಷನ್ ಬ್ಲೂ ಸ್ಟಾರ್’ ಕುರಿತು ಚಿದಂಬರಂ ಅವರು ನೀಡಿರುವ ಹೇಳಿಕೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ತೀವ್ರವಾಗಿ ಅಸಮಾಧಾನಗೊಂಡಿದೆ’ ಎಂದು ಮೂಲಗಳು ಹೇಳಿವೆ.

‘ಗೃಹ ಸಚಿವರಾಗಿದ್ದವರು, ಪಕ್ಷದಿಂದ ಎಲ್ಲವನ್ನೂ ಪಡೆದುಕೊಂಡ ಇಂಥ ಹಿರಿಯ ನಾಯಕರು ಸಾರ್ವಜನಿಕವಾಗಿ ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ಪಕ್ಷಕ್ಕೆ ಮುಜುಗರವಾಗುವಂಥ ಹೇಳಿಕೆಗಳನ್ನು ನೀಡಬಾರದು. ಜೊತೆಗೆ ಇಂಥ ಹೇಳಿಕೆ ನೀಡುವುದು ಹವ್ಯಾಸವಾಗಬಾರದು’ ಎಂದು ಹೈಕಮಾಂಡ್ ತಾಕೀತು ಮಾಡಿದೆ ಎಂದು ಮೂಲಗಳು ತಿಳಿಸಿವೆ.

26/11 ಮುಂಬೈ ದಾಳಿಯ ಕುರಿತಾಗಿ ಚಿದಂಬರಂ ಅವರು ಇತ್ತೀಚೆಗೆ ಪಕ್ಷಕ್ಕೆ ಮುಜುಗರವಾಗುವಂಥ ಹೇಳಿಕೆ ನೀಡಿದ್ದರು. ಈ ವಿಚಾರವನ್ನು ಗಮನಿಸಿರುವ ಹೈಕಮಾಂಡ್, ‘ಹಿರಿಯ ನಾಯಕರು ಪದೇ ಪದೇ ಇಂಥ ಹೇಳಿಕೆ ನೀಡುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದೆ’ ಎಂದಿವೆ.

‘ಶಿಕ್ಷಣ ಕೆಲವರ ಸ್ವತ್ತು ಆಗಬಾರದು’

ನವದೆಹಲಿ (ಪಿಟಿಐ) ದೇಶದ ವೈವಿಧ್ಯತೆ ಮತ್ತು ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುವ ಶಿಕ್ಷಣ ವ್ಯವಸ್ಥೆ ಭಾರತಕ್ಕೆ ಬೇಕು ಮತ್ತು ಶಿಕ್ಷಣ ಎಂಬುದು ‘ಕೆಲವರಿಗಷ್ಟೇ ಲಭಿಸುವ ಸ್ವತ್ತು ಆಗಬಾರದು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.


ರಾಹುಲ್ ಗಾಂಧಿ

ದಕ್ಷಿಣ ಅಮೆರಿಕದ ಪೆರು ದೇಶದ ಪಾಂಟಿಫಿಕಲ್ ಕ್ಯಾಥೊಲಿಕ್ ವಿ.ವಿ ವಿದ್ಯಾರ್ಥಿಗಳೊಂದಿಗಿನ ಸಂವಾದದ ವೇಳೆ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ, ಪ್ರಜಾಪ್ರಭುತ್ವ ಮತ್ತು ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅವರು ಸಂವಾದ ನಡೆಸಿದರು.

‘ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದುವ ಪರ್ಯಾಯ ತಯಾರಿಕಾ ವ್ಯವಸ್ಥೆಯೊಂದನ್ನು ನಿರ್ಮಿಸಬೇಕಾಗಿದೆ. ಪೆರು ಅಥವಾ ಅಮೆರಿಕದೊಂದಿಗೆ ಪಾಲುದಾರಿಕೆಯು ಅಂತಹ ವ್ಯವಸ್ಥೆಯ ಸ್ಥಾಪನೆಗೆ ಹಾದಿಯನ್ನು ಒದಗಿಸಬಹುದು’ ಎಂದು ರಾಹುಲ್ ಹೇಳಿರುವುದನ್ನು ಉಲ್ಲೇಖಿಸಿ ಕಾಂಗ್ರೆಸ್ ತನ್ನ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದೆ.

ವಿದ್ಯಾರ್ಥಿಗಳೊಂದಿಗಿನ ಅವರ ಸಂಭಾಷಣೆಯ ವಿಡಿಯೊವನ್ನೂ ಹಂಚಿಕೊಂಡಿದೆ.

‘ದೇಶದ ಒಗ್ಗಟ್ಟು ಖಾತ್ರಿಪಡಿಸಿದ ಸಂವಿಧಾನ’

ರತ್ನಗಿರಿ (ಪಿಟಿಐ): ‘ನೆರೆಹೊರೆಯ ರಾಷ್ಟ್ರಗಳು ಅಶಾಂತಿ ಹಾಗೂ ಪ್ರಕ್ಷುಬ್ಧತೆಯನ್ನು ಎದುರಿಸುತ್ತಿರುವಾಗ, ದೇಶವು ಬಲಾಢ್ಯ ಮತ್ತು ಒಗ್ಗಟ್ಟಾಗಿರುವುದನ್ನು ಸಂವಿಧಾನ ಖಚಿತಪಡಿಸಿದೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು ಭಾನುವಾರ ಹೇಳಿದರು.

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಮಂಡಣಗಡ ತಾಲ್ಲೂಕಿನಲ್ಲಿ ನ್ಯಾಯಾಲಯದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಸಿಜೆಐ, ‘ನಾವು ಆಂತರಿಕ ತುರ್ತು ಪರಿಸ್ಥಿತಿಯನ್ನು ಎದುರಿಸಿದರೂ ಬಲಿಷ್ಠವಾಗಿದ್ದೇವೆ ಹಾಗೂ ಒಂದಾಗಿದ್ದೇವೆ’ ಎಂದರು.

‘ಯುದ್ಧ ಮತ್ತು ಶಾಂತಿಯಲ್ಲಿ ದೇಶವು ಒಗ್ಗಟ್ಟಿನಿಂದ ಹಾಗೂ ಅಭಿವೃದ್ಧಿ ಪಥದಲ್ಲೇ ಉಳಿದಿರುವುದಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ಕಾರಣ’ ಎಂದು ಹೇಳಿದರು.

‘ಕಳೆದ 22 ವರ್ಷಗಳಲ್ಲಿ ನಾನು ನ್ಯಾಯಾಧೀಶನಾಗಿ, ನ್ಯಾಯಮೂರ್ತಿಯಾಗಿ ನ್ಯಾಯದಾನ ವ್ಯವಸ್ಥೆಯ ವಿಕೇಂದ್ರೀಕರಣದ ಪರವಾಗಿ ನಿಂತಿದ್ದೇನೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಹಲವು ಮೂಲಸೌಕರ್ಯ ಯೋಜನೆಗಳು ಪೂರ್ಣಗೊಳ್ಳುವುದನ್ನು ಖಾತ್ರಿಪಡಿಸಿದ್ದೇನೆ’ ಎಂದರು.

‘ಕೊಲ್ಹಾಪುರ ಸರ್ಕ್ಯೂಟ್ ಬೆಂಚ್ (ಬಾಂಬೆ ಹೈಕೋರ್ಟ್) ಮತ್ತು ಮಂಡಣಗಡ ನ್ಯಾಯಾಲಯದ ಕಟ್ಟಡವು ಎರಡು ವರ್ಷದಲ್ಲಿ ಪೂರ್ಣಗೊಂಡಿದೆ. ನಾಸಿಕ್, ನಾಗ್ಪುರ, ಕೊಲ್ಹಾಪುರ, ದರ್ಯಾಪುರದಲ್ಲಿ ಈಚೆಗಷ್ಟೇ ನ್ಯಾಯಾಲಯಗಳ ನೂತನ ಸಂಕೀರ್ಣ ಕಾರ್ಯಾರಂಭ ಮಾಡಿವೆ. ಇವುಗಳ ಗುಣಮಟ್ಟದ ಬಗ್ಗೆ ತೃಪ್ತಿಯಿದೆ’ ಎಂದರು.

‘ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅವರ ಅಂಬಾವಡೆ ಗ್ರಾಮವಿರುವ ಪ್ರದೇಶಕ್ಕೆ ಬಂದಿರುವುದು ಸಂತಸ ತಂದಿದ್ದು, ಈ ನೂತನ ನ್ಯಾಯಾಲಯಗಳು ಅಂಬೇಡ್ಕರ್ ಅವರ ಕನಸಿನಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತ್ವರಿತವಾಗಿ ನ್ಯಾಯ ಒದಗಿಸಲಿವೆ’ ಎಂದು ಹೇಳಿದರು.

ವೆಸ್ಟ್ ಇಂಡೀಸ್ ಮರು ಹೋರಾಟ

ಕುಲದೀಪ್ ಯಾದವ್‌ಗೆ 5 ವಿಕೆಟ್ • ರೋಸ್ಟನ್ ಚೇಸ್ ಬಳಗಕ್ಕೆ ಫಾಲೊ ಆನ್ • ಕ್ಯಾಂಪ್‌ಬೆಲ್–ಹೋಪ್ ಜೊತೆಯಾಟ

• ಸಿದ್ಧಿ ಕಿರಣ್

ನವದೆಹಲಿ: ಸತತ ಎರಡನೇ ದಿನವೂ ನಾಯಕ ಶುಭಮನ್ ಗಿಲ್ ಮತ್ತು ತಂಡದ ಮ್ಯಾನೇಜ್‌ಮೆಂಟ್ ದಿಟ್ಟ ನಿರ್ಧಾರ ಕೈಗೊಂಡಿತು. ಈ ಹಿಂದೆ ಹಲವು ನಾಯಕರು ಇಂತಹ ತೀರ್ಮಾನ ಕೈಗೊಳ್ಳಲು ಹಿಂಜರಿದಿದ್ದರು. ಬಿಸಿಲ ಬೇಗೆ ಹೆಚ್ಚಾಗಿದ್ದ ಎರಡು ದಿನಗಳಲ್ಲಿ ಬೌಲರ್‌ಗಳು 81.5 ಓವರ್‌ಗಳನ್ನು ಬೌಲಿಂಗ್ ಮಾಡಿದ್ದರೂ ಭಾರತವು ವೆಸ್ಟ್ ಇಂಡೀಸ್ ಮೇಲೆ ಫಾಲೋ ಆನ್ ಹೇರಿತು. ಆದಷ್ಟು ಬೇಗನೆ ವಿಂಡೀಸ್ ತಂಡದ ಹೆಡೆಮುರಿ ಕಟ್ಟಿಬಿಡುವ ಉತ್ಸಾಹ ಆತಿಥೇಯರಲ್ಲಿತ್ತು.

ಶನಿವಾರ ಭಾರತ ತಂಡವು 5 ವಿಕೆಟ್‌ಗಳಿಗೆ 518 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಕುಲದೀಪ್ ಯಾದವ್ (82ಕ್ಕೆ5) ಅವರ ಕೈಚಳಕದ ಮುಂದೆ ಪ್ರವಾಸಿ ಬಳಗವು 248 ರನ್ ಗಳಿಸಿತು. 270 ರನ್‌ಗಳ ಹಿನ್ನಡೆ ಅನುಭವಿಸಿತು. ಉಭಯ ತಂಡಗಳು ಮುಖಾಮುಖಿಯಾದ ಕಳೆದ ಐದು ಟೆಸ್ಟ್ ಪಂದ್ಯಗಳೂ ಮೂರು ದಿನಗಳ ಒಳಗೇ ಮುಗಿದುಹೋಗಿದ್ದವು. ಆದ್ದರಿಂದ ಇಲ್ಲಿಯೂ ಅಂತಹದೇ ನಿರೀಕ್ಷೆ ಮೂಡಿತ್ತು.

ಆದರೆ ಪ್ರವಾಸಿ ಬ್ಯಾಟರ್‌ಗಳು ಈ ಹಂತದಿಂದ ಹೋರಾಟ ಆರಂಭಿಸಿದ್ದು ವಿಶೇಷ. ಅರುಣ್ ಜೇಟ್ಲಿ ಕ್ರೀಡಾಂಗಣದ ಸಪಾಟಾಗಿರುವ ಪಿಚ್‌ನಲ್ಲಿ ಚೆಂಡು ನಿಧಾನಗತಿಯಲ್ಲಿ ಚಲಿಸುತ್ತಿತ್ತು. ವಿಪರೀತ ಧಗೆಯೂ ಇತ್ತು. ಆದರೆ ಜಾನ್ ಕ್ಯಾಂಪ್‌ಬೆಲ್ (ಬ್ಯಾಟಿಂಗ್ 87; 145ಎ) ಮತ್ತು ಶಾಯ್ ಹೋಪ್ (ಅಜೇಯ 66; 103ಎ) ಅವರು ಮುರಿಯದ ಮೂರನೇ ವಿಕೆಟ್ ಜತೆಯಾಟದಲ್ಲಿ 138 ರನ್ ಸೇರಿಸಿದರು. ಅದರಿಂದಾಗಿ ದಿನದಾಟದ ಮುಕ್ತಾಯಕ್ಕೆ ವಿಂಡೀಸ್ ಬಳಗವು 2 ವಿಕೆಟ್‌ಗಳಿಗೆ 173 ರನ್ ಗಳಿಸಿತು. ಸರಣಿಯ ಕೊನೆ ಮತ್ತು ಎರಡನೇ ಟೆಸ್ಟ್ ಪಂದ್ಯವು ನಾಲ್ಕನೇ ದಿನಕ್ಕೆ ಸಾಗಿತು.

ಊಟದ ವಿರಾಮದ 50 ನಿಮಿಷಗಳ ನಂತರ ವೆಸ್ಟ್ ಇಂಡೀಸ್ ತಂಡದ ಎರಡನೇ ಇನಿಂಗ್ಸ್ ಆರಂಭವಾಯಿತು. ಒಂಬತ್ತನೇ ಓವರ್‌ನಲ್ಲಿ ಮೊಹಮ್ಮದ್ ಸಿರಾಜ್ ಎಸೆತವನ್ನು ಹುಕ್ ಮಾಡಿದ ತೇಜನಾರಾಯಣ್ ಚಂದ್ರಪಾಲ್ ಅವರಿಗೆ ಅದೃಷ್ಟ ಕೈಕೊಟ್ಟಿತು. ಮಿಡ್‌ವಿಕೆಟ್‌ನಲ್ಲಿದ್ದ ಗಿಲ್ ಆಕರ್ಷಕ ರೀತಿಯಲ್ಲಿ ಕ್ಯಾಚ್ ಪಡೆದರು. ಕೆಲವು ನಿಮಿಷಗಳ ನಂತರ ವಾಷಿಂಗ್ಟನ್ ಸುಂದರ್ ಎಸೆತವನ್ನು ಅಂದಾಜಿಸುವಲ್ಲಿ ಎಡವಿದ ಅಲಿಕ್ ಅಥನೇಜ್ ಅವರ ವಿಕೆಟ್ ಉರುಳಿತು. ಇದರಿಂದಾಗಿ ಚಹಾ ವಿರಾಮದ ವೇಳೆಗೆ ವಿಂಡೀಸ್ 35 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು.

ಅಷ್ಟೊತ್ತಿಗೆ ಕ್ಯಾಂಪ್‌ಬೆಲ್ ಅವರಿಗೆ ರಕ್ಷಣಾತ್ಮಕ ಆಟದಿಂದ ಹೆಚ್ಚು ಪ್ರಯೋಜನೆ ಇಲ್ಲ ಎಂಬ ಅರಿವು ಮೂಡಿತ್ತು. ಚಹಾ ನಂತರ ಬೀಸಾಟವಾಡುವ ನಿರ್ಧಾರದೊಂದಿಗೆ ಕಣಕ್ಕೆ ಮರಳಿದರು. ಟಿ20 ಮಾದರಿಯ ಬ್ಯಾಟಿಂಗ್ ಆರಂಭಿಸಿದ ಅವರು ಭಾರತದ ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ವಾಷಿಂಗ್ಟನ್ ಮತ್ತು ಕುಲದೀಪ್ ಅವರ ಎಸೆತಗಳನ್ನು ದಂಡಿಸಿದರು. ಫ್ರಂಟ್‌ಫುಟ್, ಸ್ವೀಪ್ ಹೊಡೆತಗಳನ್ನು ಭರಪೂರ ಪ್ರಯೋಗಿಸಿದರು. ಬ್ಯಾಕ್‌ಫುಟ್ ಕಟ್ ಮತ್ತು ಸ್ಲ್ಯಾಪ್‌ಗಳಿಗೂ ಕೊರತೆಯಿರಲಿಲ್ಲ.

ಕ್ಯಾಂಪ್‌ಬೆಲ್ ಅವರನ್ನು ನೋಡಿ ಪ್ರೇರಣೆಗೊಂಡಂತೆ ಕಂಡ ಹೋಪ್ ಕೂಡ ಬ್ಯಾಟ್ ಬೀಸಿದರು. ಯಾವುದೇ ಅವಕಾಶವನ್ನೂ ಅವರು ಬಿಡಲಿಲ್ಲ. ಈ ಹಂತದಲ್ಲಿ ವಿಂಡೀಸ್ ತಂಡವು ಪ್ರತಿ ಓವರ್‌ಗೆ ಸರಾಸರಿ ಆರು ರನ್ ಗಳಿಸಿತು. ಪಿಚ್‌ನಲ್ಲಿ ಸ್ಪಿನ್ನರ್‌ಗಳಿಗೆ ಯಾವುದೇ ನೆರವು ಸಿಗಲಿಲ್ಲ. ಇದರಿಂದಾಗಿ ನಾಯಕ ಗಿಲ್ ಅವರು ಅನಿವಾರ್ಯವಾಗಿ ಫೀಲ್ಡರ್‌ಗಳನ್ನು ವೃತ್ತದಿಂದ ಹೊರಗೆ ನಿಯೋಜಿಸಿದರು. ಆಗ ಬ್ಯಾಟರ್‌ಗಳು ದೊಡ್ಡ ಹೊಡೆತಗಳನ್ನಾಡುವುದನ್ನು ಬಿಟ್ಟು ಒಂದು ಮತ್ತು ಎರಡು ರನ್ ಪಡೆಯತೊಡಗಿದರು. ಈ ಪ್ರಯತ್ನಗಳಲ್ಲಿ ಕೆಲವು ಬೌಂಡರಿಗಳೂ ಅವರ ಖಾತೆ ಸೇರಿದವು. ಇಷ್ಟೆಲ್ಲದರ ನಡುವೆಯೂ ಭಾರತ ತಂಡವು ಇನ್ನೂ ಉತ್ತಮ ಸ್ಥಿತಿಯಲ್ಲಿಯೇ ಇದೆ. ವಿಂಡೀಸ್‌ಗೆ ಮೊದಲ ಇನಿಂಗ್ಸ್ ಬಾಕಿ ಚುಕ್ತಾಗೊಳಿಸಲು ಇನ್ನೂ 97 ರನ್‌ಗಳು ಬೇಕಿವೆ.

ಕುಲದೀಪ್ ಕೈಚಳಕ: ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಪ್ರಸ್ತುತ ಕ್ರಿಕೆಟ್‌ನಲ್ಲಿರುವ ಉತ್ತಮ ಸ್ಪಿನ್ನರ್‌ಗಳಲ್ಲಿ ಅಗ್ರಗಣ್ಯರು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರ ಜಾಗ ತುಂಬುವ ಭರವಸೆ ಮೂಡಿಸಿದರು.

ಕುಲದೀಪ್ ತಮ್ಮ ಮೊದಲ ಸ್ಪೆಲ್‌ನಲ್ಲಿ (10-0-27-3) ವೆಸ್ಟ್ ಇಂಡೀಸ್ ತಂಡದ ಮಧ್ಯಮ ಕ್ರಮಾಂಕಕ್ಕೆ ಬಲವಾದ ಪೆಟ್ಟು ಕೊಟ್ಟರು. ಇದರಿಂದಾಗಿ ಊಟದ ವಿರಾಮಕ್ಕೆ 8ಕ್ಕೆ217 ರನ್ ಗಳಿಸಿತು. ವಿರಾಮದ ನಂತರ ತಂಡದ ಖಾತೆಗೆ 31 ರನ್‌ಗಳು ಸೇರುವಷ್ಟರಲ್ಲಿ ಇನ್ನುಳಿದ ಎರಡು ವಿಕೆಟ್‌ಗಳೂ ಪತನವಾದವು. ಕೊನೆಯ ವಿಕೆಟ್ ಕೂಡ ಕುಲದೀಪ್ ಖಾತೆ ಸೇರಿತು.

ಕುಲದೀಪ್ ಯಾದವ್

26.5	ಓವರ್
4	ಮೇಡನ್
82	ರನ್
5	ವಿಕೆಟ್

ವೆಸ್ಟ್ ಇಂಡೀಸ್ ತಂಡದ ಕ್ಯಾಂಪ್‌ಬೆಲ್ ಮತ್ತು ಶಾಯ್ ಹೋಪ್ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 5ಕ್ಕೆ 518 ಡಿ. (134.2 ಓವರುಗಳಲ್ಲಿ)

ವೆಸ್ಟ್ ಇಂಡೀಸ್: 248 (81.5 ಓವರ್‌ಗಳಲ್ಲಿ)

ಹೋಪ್ ಬಿ ಕುಲದೀಪ್ 36 (57ಎ, 4X5)
ಇಮ್ಲಾಕ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 21 (67ಎ, 4X3)
ಜಸ್ಟಿನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 17 (20ಎ, 4X3)
ಪಿಯರೆ ಬಿ ಬೂಮ್ರಾ 23 (46ಎ, 4X3)
ವಾರಿಕನ್ ಬಿ ಸಿರಾಜ್ 1 (5ಎ)
ಫಿಲಿಪ್ ಔಟಾಗದೇ 24 (93ಎ, 4X2)
ಸೀಲ್ಸ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 13 (25ಎ, 4X3)
ಇತರೆ: 28 (ಬೈ 5, ಲೆಗ್‌ಬೈ 18, ನೋಬಾಲ್ 5)
ವಿಕೆಟ್ ಪತನ: 5–156 (ಶಾಯ್ ಹೋಪ್;49.3), 6–163 (ಟೆವಿನ್ ಇಮ್ಲಾಕ್; 51.6), 7–174 (ಜಸ್ಟಿನ್ ಗ್ರೀವ್ಸ್; 55.2), 8–175 (ವಾರಿಕನ್; 56.3), 9–221 (ಖಾರಿ ಪಿಯರೆ; 72.5), 10–248 (ಜೇಡನ್ ಸೀಲ್ಸ್;81.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 14–4–40–1, ಮೊಹಮ್ಮದ್ ಸಿರಾಜ್ 9–2–16–1, ರವೀಂದ್ರ ಜಡೇಜ 19–5–46–3, ಕುಲದೀಪ್ ಯಾದವ್ 26.5–4–82–5, ವಾಷಿಂಗ್ಟನ್ ಸುಂದರ್ 13–2–41–0

ಎರಡನೇ ಇನಿಂಗ್ಸ್ (ಫಾಲೋ ಆನ್) ವೆಸ್ಟ್ ಇಂಡೀಸ್: 2 ವಿಕೆಟ್‌ಗಳಿಗೆ 173 (49 ಓವರ್‌ಗಳಲ್ಲಿ)

ಕ್ಯಾಂಪ್‌ಬೆಲ್ ಬ್ಯಾಟಿಂಗ್ 87 (145ಎ, 4X9, 6X2)
ತೇಜನಾರಾಯಣ್ ಸಿ ಗಿಲ್ ಬಿ ಸಿರಾಜ್ 10 (30ಎ, 4X1)
ಅಥನೇಜ್ ಬಿ ವಾಷಿಂಗ್ಟನ್ 7 (17ಎ, 4X1)
ಹೋಪ್ ಬ್ಯಾಟಿಂಗ್ 66 (103ಎ, 4X8, 6X2)
ಇತರೆ: 3 (ಬೈ 2, ನೋಬಾಲ್ 1)
ವಿಕೆಟ್ ಪತನ: 1–17 (ತೇಜನಾರಾಯಣ್ ಚಂದ್ರಪಾಲ್; 8.3), 2 –35 (ಅಲಿಕ್ ಅಥನೇಜ್; 14.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 6–2–10–1, ರವೀಂದ್ರ ಜಡೇಜ 14–3–52–0, ವಾಷಿಂಗ್ಟನ್ ಸುಂದರ್ 13–3–44–1, ಕುಲದೀಪ್ ಯಾದವ್ 11–0–53–0, ಜಸ್‌ಪ್ರೀತ್ ಬೂಮ್ರಾ 4–2–9–0, ಯಶಸ್ವಿ ಜೈಸ್ವಾಲ್ 1–0–3–0

ಭಾರತಕ್ಕೆ ಆಘಾತ • ಸ್ಮೃತಿ, ಪ್ರತೀಕಾ ಶತಕದ ಜೊತೆಯಾಟ

ಆಸ್ಟ್ರೇಲಿಯಾಕ್ಕೆ ಅಲಿಸಾ ಗೆಲುವಿನ ಕಾಣಿಕೆ

ವಿಶಾಖಪಟ್ಟಣಂ(ಪಿಟಿಐ): ನಾಯಕಿ ಅಲಿಸಾ ಹೀಲಿ ಅವರ ಭರ್ಜರಿ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಜಯದ ಓಟ ಮುಂದುವರಿಸಿತು. ಭಾರತ ತಂಡದ ವಿರುದ್ಧ 3 ವಿಕೆಟ್‌ಗಳಿಂದ ಗೆದ್ದಿತು.

ಆಸ್ಟ್ರೇಲಿಯಾ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮಂದಾನ (80; 66ಎ) ಮತ್ತು ಪ್ರತೀಕಾ ರಾವಲ್ (75; 96ಎ) ಅವರ ಶತಕದ ಜೊತೆಯಾಟದ ಬಲದಿಂದ ಭಾರತವು 48.5 ಓವರ್‌ಗಳಲ್ಲಿ 330 ರನ್ ಗಳಿಸಿತು.

ಟೂರ್ನಿಯ ಈ ಮೊದಲಿನ ಪಂದ್ಯಗಳಲ್ಲಿ ಮಧ್ಯಮ ಹಾಗೂ ಕೆಳಕ್ರಮಾಂಕದ ಬ್ಯಾಟರ್‌ಗಳು ಉತ್ತಮವಾಗಿ ಆಡಿದ್ದರು. ಆರಂಭಿಕರು ವೈಫಲ್ಯ ಅನುಭವಿಸಿದ್ದರು. ಆದರೆ ಈ ಪಂದ್ಯದಲ್ಲಿ ಆರಂಭಿಕರು ಮಿಂಚಿದರು. ಉಳಿದವರು ಸಾಧಾರಣವಾಗಿ ಆಡಿದರು.

ಆದರೆ ದೊಡ್ಡ ಮೊತ್ತ ಗಳಿಸಿದ್ದ ಕೌರ್ ಪಡೆಯ ಆತ್ಮವಿಶ್ವಾಸಕ್ಕೇ ಅಲಿಸಾ ಹೀಲಿ (142; 107ಎಸೆತ, 4X21, 6X3) ಅವರು ಪೆಟ್ಟುಕೊಟ್ಟರು. ಅವರು ಫೋಬಿ ಲಿಚ್‌ಫೀಲ್ಡ್ (40; 39ಎ) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಎರಡನೇ ವಿಕೆಟ್ ಜತೆಯಾಟದಲ್ಲಿ ಎಲಿಸ್ ಪೆರಿ (ಔಟಾಗದೇ 47; 52ಎ) ಅವರೊಂದಿಗೆ 73 ರನ್ ಸೇರಿಸಿದರು. ಅಲಿಸಾ ಔಟಾದ ನಂತರ ಆ್ಯಷ್ಲೆ ಗಾರ್ಡನರ್ (45 ರನ್) ಮತ್ತು ಸೋಫಿ ಮಾಲಿನೆ (18; 19ಎ) ಅವರು ತಂಡಕ್ಕೆ ಆಸರೆಯಾದರು. ಇದರಿಂದಾಗಿ ಇನಿಂಗ್ಸ್‌ನಲ್ಲಿ ಇನ್ನೂ ಒಂದು ಓವರ್ ಬಾಕಿ ಇರುವಾಗಲೇ ಆಸ್ಟ್ರೇಲಿಯಾ ತಂಡವು 7 ವಿಕೆಟ್‌ಗಳಿಗೆ 331 ರನ್ ಗಳಿಸಿ ಜಯಿಸಿತು.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಸ್ಮೃತಿ– ಪ್ರತೀಕಾ ಜೊತೆಯಾಟ: ಭಾರತದ ಸ್ಮೃತಿ ಮತ್ತು ಪ್ರತೀಕಾ ಅವರು ಮೊದಲ ವಿಕೆಟ್ ಜತೆಯಾಟದಲ್ಲಿ 155 ರನ್ (24.3 ಓವರ್) ಪೇರಿಸಿದರು. ಎಡಗೈ ಬ್ಯಾಟರ್ ಸ್ಮೃತಿ ಅವರು ಏಳನೇ ಓವರ್‌ನವರೆಗೂ ತಾಳ್ಮೆಯಿಂದ ಆಡಿದರು. ಪಿಚ್ ಸತ್ವವನ್ನು ಅರಿತುಕೊಂಡ ನಂತರ ಬೀಸಾಟ ಆರಂಭಿಸಿದರು. ಸ್ಪಿನ್ನರ್ ಸೋಫಿ ಮಾಲಿನೆ ಅವರ ಮೊದಲ ಓವರ್‌ನಲ್ಲಿಯೇ ಸ್ಮೃತಿ 18 ರನ್ ಸೂರೆ ಮಾಡಿದರು. ಅದರಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಇತ್ತು.

ಸ್ಮೃತಿಗೆ ಉತ್ತಮ ಜೊತೆ ನೀಡಿದ ಪ್ರತೀಕಾ ಅವರು 69 ಎಸೆತಗಳಲ್ಲಿ ತಮ್ಮ ಅರ್ಧಶತಕ ಸಾಧಿಸಿದರು.

ಶತಕ ಗಳಿಸುವ ಹಾದಿಯಲ್ಲಿದ್ದ ಸ್ಮೃತಿ ಅವರ ವಿಕೆಟ್ ಪಡೆದ ಸೋಫಿ ಮಾಲಿನೆ ಮುಯ್ಯಿ ತೀರಿಸಿಕೊಂಡರು. ಫೋಬಿ ಲಿಚ್ ಫೀಲ್ಡ್ ಅಮೋಘ ಕ್ಯಾಚ್ ಪಡೆದರು. ಇದಾಗಿ ಐದು ಓವರ್‌ಗಳ ನಂತರ ಪ್ರತೀಕಾ ಅವರೂ ಅನಾಬೆಲ್ ಸದರ್ಲೆಂಡ್ ಬೌಲಿಂಗ್‌ನಲ್ಲಿ ಎಲಿಸ್ ಪೆರಿಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರು: ಭಾರತ: 48.5 ಓವರ್‌ಗಳಲ್ಲಿ 330 (ಪ್ರತೀಕಾ ರಾವಲ್ 75, ಸ್ಮೃತಿ ಮಂದಾನ 80, ಹರ್ಲೀನ್ ಡಿಯೊಲ್ 38, ಹರ್ಮನ್‌ಪ್ರೀತ್ ಕೌರ್ 22, ಜೆಮಿಮಾ ರಾಡ್ರಿಗಸ್ 33, ಸೋಫಿ ಮಾಲಿನೆ 75ಕ್ಕೆ3, ಅನಾಬೆಲ್ ಸದರ್ಲೆಂಡ್ 40ಕ್ಕೆ5) ಆಸ್ಟ್ರೇಲಿಯಾ: 49 ಓವರ್‌ಗಳಲ್ಲಿ 7ಕ್ಕೆ331 (ಅಲಿಸಾ ಹೀಲಿ 142, ಫೋಬಿ ಲಿಚ್‌ಫೀಲ್ಡ್ 40, ಎಲಿಸ್ ಪೆರಿ ಔಟಾಗದೇ 47, ಆ್ಯಷ್ಲೆ ಗಾರ್ಡನರ್ 45, ಶ್ರೀಚರಣಿ 41ಕ್ಕೆ3, ದೀಪ್ತಿ ಶರ್ಮಾ 52ಕ್ಕೆ2) ಫಲಿತಾಂಶ:ಆಸ್ಟ್ರೇಲಿಯಾ ತಂಡಕ್ಕೆ 3 ವಿಕೆಟ್ ಜಯ
ಪಂದ್ಯದ ಆಟಗಾರ್ತಿ: ಅಲಿಸಾ ಹೀಲಿ

ಆಸ್ಟ್ರೇಲಿಯಾದ ಅಲೀಸಾ ಹೀಲಿ (ಬಲ) ಹಾಗೂ ಫೋಬಿ ಲಿಚ್‌ಫೀಲ್ಡ್ ಜೊತೆಯಾಟ ಪಿಟಿಐ ಚಿತ್ರ

ಮಂದಾನ 5 ಸಾವಿರ ರನ್

ಸ್ಮೃತಿ ಮಂದಾನ ಅವರು ಏಕದಿನ ಕ್ರಿಕೆಟ್‌ನಲ್ಲಿ 5 ಸಾವಿರ ರನ್ ಗಳಿಸಿದರು. 29 ವರ್ಷದ ಸ್ಮೃತಿ ಅವರು ಅತ್ಯಂತ ವೇಗವಾಗಿ ಈ ಮೈಲಿಗಲ್ಲು ಮುಟ್ಟಿದ ಆಟಗಾರ್ತಿಯಾದರು. ಅವರು 112 ಪಂದ್ಯಗಳಲ್ಲಿ ಈ ಸಾಧನೆ ಮಾಡಿದರು.

ಸ್ಮೃತಿ ಮತ್ತು ಪ್ರತೀಕಾ ಅವರು ಆರನೇ ಬಾರಿ ಶತಕದ ಜೊತೆಯಾಟವಾಡಿದರು. ಕಳೆದ 21 ಇನಿಂಗ್ಸ್‌ಗಳಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಪೂರ್ಣಿಮಾ ರಾವತ್ ಮತ್ತು ಮಿಥಾಲಿ ರಾಜ್ ಅವರು ಈ ಹಿಂದೆ 34 ಇನಿಂಗ್ಸ್‌ಗಳಲ್ಲಿ ಏಳು ಶತಕದ ಜೊತೆಯಾಟಗಳನ್ನು ಆಡಿದ್ದರು. ಅವರ ದಾಖಲೆ ಸರಿಗಟ್ಟಲು ಸ್ಮೃತಿ ಮತ್ತು ಪ್ರತೀಕಾಗೆ ಇನ್ನೊಂದು ಜೊತೆಯಾಟದ ಅಗತ್ಯವಿದೆ.

331 ಮಹಿಳಾ ಏಕದಿನ ಪಂದ್ಯದಲ್ಲಿ ತಂಡವೊಂದರ ಯಶಸ್ವಿ ಗರಿಷ್ಠ ರನ್ ಚೇಸ್.
ಶ್ರೀಲಂಕಾ ಮಹಿಳಾ ತಂಡವು ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ 2024ರಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ತಂಡ ನೀಡಿದ್ದ 302 ರನ್ ಗುರಿ ಬೆನ್ನಟ್ಟಿ ಗೆದ್ದಿದ್ದು ಈವರೆಗಿನ ದಾಖಲೆಯಾಗಿತ್ತು.

142 ಅಲಿಸಾ ಹೀಲಿ ಅವರು ಐಸಿಸಿ ಮಹಿಳಾ ವಿಶ್ವಕಪ್ ಪಂದ್ಯವೊಂದರಲ್ಲಿ ನಾಯಕಿಯಾಗಿ ವೈಯಕ್ತಿಕ ಮೂರನೇ ಗರಿಷ್ಠ ರನ್ ದಾಖಲಿಸಿದರು. ಮೊದಲೆರಡು ಸ್ಥಾನಗಳಲ್ಲಿ ಆಸ್ಟ್ರೇಲಿಯಾದವರೇ ಆದ ಬೆಲಿಂದಾ ಕ್ಲಾರ್ಕ್ (227) ಹಾಗೂ ಮೆಗ್ ಲ್ಯಾನಿಂಗ್ (152) ಇದ್ದಾರೆ.

ವಶೆರೊಗೆ ಕಿರೀಟ

ಎಎಫ್‌ಪಿ ಚಿತ್ರ

ಮೊನಾಕೊದ ವ್ಯಾಲೆಂಟಿನ್ ವಶೆರೊ (ಬಲ) ಅವರು ಭಾನುವಾರ ಶಾಂಘೈ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಫೈನಲ್ ಕಣದಲ್ಲಿ ಅವರು ತಮ್ಮ ಸೋದರ ಸಂಬಂಧಿ ಆರ್ಥರ್ ರೈಂಡೆರ್‌ನೆಶ್ (ಫ್ರಾನ್ಸ್) ಅವರನ್ನು 4–6, 6–3, 6–3ರಿಂದ ಮಣಿಸಿದರು. ಪ್ರಶಸ್ತಿಯು 597,890 ಡಾಲರ್ (ಸುಮಾರು ₹5 ಕೋಟಿ) ಬಹುಮಾನ ಮೊತ್ತ ಹೊಂದಿದೆ

ಬುಲ್ಸ್‌ಗೆ ಮಣಿದ ವಾರಿಯರ್ಸ್

ನವದೆಹಲಿ (ಪಿಟಿಐ): ರೇಡರ್ ಅಲಿರೆಜಾ ಮಿರ್ಜೈಯನ್ ಅವರ 'ಸೂಪರ್ ಟೆನ್' ಸಾಹಸದ ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭಾನುವಾರ 43–32ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಅಲಿರೆಜಾ ಮಿರ್ಜೈಯನ್

ಇಲ್ಲಿನ ತ್ಯಾಗರಾಜ್ ಕಾಂಪ್ಲೆಕ್ಸ್‌ನಲ್ಲಿ ನಡೆದ ದಿನದ ಎರಡನೇ ಪಂದ್ಯದಲ್ಲಿ ಬೆಂಗಳೂರು ತಂಡವು ಆರಂಭದಿಂದಲೇ ಮೇಲುಗೈ ಸಾಧಿಸಿತು. ಮೊದಲಾರ್ಧದಲ್ಲಿ 22–15ರಿಂದ ಮುಂದಿದ್ದ ಬೆಂಗಳೂರು, ದ್ವಿತೀಯಾರ್ಧದಲ್ಲಿಯೂ ಪಾರಮ್ಯ ಮುಂದುವರಿಸಿತು. ಅಲಿರೆಜಾ ರೇಡಿಂಗ್‌ನಲ್ಲಿ 18 ಅಂಕ ಸೂರೆ ಮಾಡಿದರು. ಆಶಿಶ್ ಮಲಿಕ್ (7) ಹಾಗೂ ದೀಪಕ್ ಶಂಕರ್ (6) ಮಹತ್ವದ ಕಾಣಿಕೆ ನೀಡಿದರು.

ರೋಚಕವಾಗಿದ್ದ ದಿನದ ಮೊದಲನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು ಟೈಬ್ರೇಕರ್‌ನಲ್ಲಿ ದಬಂಗ್ ಡೆಲ್ಲಿ ತಂಡವನ್ನು ಮಣಿಸಿತು. ನಿಗದಿತ ಅವಧಿಯ ಪಂದ್ಯವು 38–38ರಿಂದ ಸಮಬಲಗೊಂಡಿತ್ತು. 'ಗೋಲ್ಡನ್ ರೇಡ್'ನಲ್ಲಿ ಪಲ್ಟನ್ ತಂಡವು 6–5ರಿಂದ ಮೇಲುಗೈ ಸಾಧಿಸಿತು.

ನಿಗದಿಯ ಅವಧಿಯ ಆಟದಲ್ಲಿ ಪಲ್ಟನ್ ತಂಡದ ಪರ ಪಂಕಜ್ ಮೋಹಿತೆ 7 ಅಂಕ ಹಾಗೂ ಅಸ್ಲಾಂ ಇನಾಮದಾರ್ 6 ಅಂಕ ಗಳಿಸಿದ್ದರು.

ದಬಂಗ್ ತಂಡದ ಪರ ಅಜಿಂಕ್ಯ ಪವಾರ್ 'ಸೂಪರ್ ಟೆನ್' ಸಾಧಿಸಿ, ಹೋರಾಟ ತೋರಿದ್ದರು.

ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ ಟೂರ್ನಿ

ಭಾರತದ ಗೆಲುವಿನ ಓಟ ಮುಂದುವರಿಕೆ

ಜೊಹರ್, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಸುಲ್ತಾನ್ ಆಫ್ ಜೋಹರ್ ಕಪ್ ಟೂರ್ನಿಯಲ್ಲಿ ಗೆಲುವಿನ ಓಟವನ್ನು ಮುಂದುವರಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 4–2ರಿಂದ ನ್ಯೂಜಿಲೆಂಡ್ ಎದುರು ಗೆದ್ದಿತು.

ಭಾರತದ ಅರ್ಷದೀಪ್ ಸಿಂಗ್ (2ನೇ ನಿಮಿಷ), ಪಿ.ಬಿ. ಸುನಿಲ್ (15ನಿ), ಅರಿಜೀತ್ ಸಿಂಗ್ ಹುಂಡಾಲ್ (25ನಿ)ಮತ್ತು ರೋಶನ್ ಕುಮಾರ್ (47ನಿ) ಅವರು ಗೋಲು ಗಳಿಸಿದರು. ಇದರಿಂದಾಗಿ ತಂಡವು ಗೆಲುವಿನತ್ತ ಸಾಗಿತು.

ಕಿವೀಸ್ ತಂಡದ ಗಸ್ ನೆಲ್ಸನ್ (41ನೇ ನಿ) ಮತ್ತು ಏಡನ್ ಮ್ಯಾಕ್ಸ್ (52ನಿ) ಗೋಲು ಗಳಿಸಿದರು.

ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ 3–2ರಿಂದ ಗ್ರೇಟ್ ಬ್ರಿಟನ್ ವಿರುದ್ಧ ಜಯಿಸಿತ್ತು.

ಈ ಪಂದ್ಯದಲ್ಲಿ ಭಾರತದ ಆಟಗಾರರು ಆರಂಭದಿಂದಲೇ ಆಕ್ರಮಣಶೀಲ ಆಟವಾಡಿದರು. ಎರಡನೇ ನಿಮಿಷದಲ್ಲಿಯೇ ಅರ್ಷದೀಪ್ ಅವರು ಆರಾಮವಾಗಿ ಗೋಲು ಗಳಿಸಿದರು. ನ್ಯೂಜಿಲೆಂಡ್ ತಂಡದ ರಕ್ಷಣಾ ವಿಭಾಗವು ಈ ಸಂದರ್ಭದಲ್ಲಿ ಚುರುಕುತನ ತೋರಲಿಲ್ಲ. ಅದರ ಲಾಭ ಪಡೆದ ಅರ್ಷದೀಪ್ ಚುರುಕಾಗಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಮೊದಲ ಕ್ವಾರ್ಟರ್‌ನ ಕೊನೆಯ ಕ್ಷಣದಲ್ಲಿ ಸುನಿಲ್ ಅವರು ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಹೊಡೆದರು. ಡ್ರ್ಯಾಗ್‌ಫ್ಲಿಕರ್ ಸುನೀಲ್ ಅವರು ನಾಯಕ ರೋಹಿತ್ ಪಾಸ್ ಕೊಟ್ಟ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದರು. ಇದಕ್ಕೂ ಮುನ್ನ ಮೂರು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಹೊಡೆಯಲು ಭಾರತದ ಆಟಗಾರರಿಗೆ ಸಾಧ್ಯವಾಗಿರಲಿಲ್ಲ.

ಭಾರತ ಜೂನಿಯರ್ ಪುರುಷರ ಹಾಕಿ ತಂಡದ ಅರ್ಷದೀಪ್ ಸಿಂಗ್

ರಾಜ್ಯ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಅಕ್ಟೋಬರ್ 13 ರಿಂದ 19ರವರೆಗೆ 15 ಮತ್ತು 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ನಡೆಯಲಿದೆ.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಯ (ಕೆಬಿಎ) ಸಹಯೋಗದಲ್ಲಿ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯು (ಡಿಡಿಬಿಎ) ಈ ಚಾಂಪಿಯನ್‌ಷಿಪ್ ಆಯೋಜಿಸಿದೆ. ಸಿಂಗಲ್ಸ್, ಡಬಲ್ಸ್ ಹಾಗೂ ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.

ಒಟ್ಟು ₹1.76 ಲಕ್ಷ ಬಹುಮಾನ ಮೊತ್ತದ ಚಾಂಪಿಯನ್‌ಷಿಪ್ ಇದಾಗಿದೆ.

15 ವರ್ಷದೊಳಗಿನವರ ಬಾಲಕರ ಸಿಂಗಲ್ಸ್‌ನಲ್ಲಿ 149, ಬಾಲಕಿಯರ ಸಿಂಗಲ್ಸ್‌ನಲ್ಲಿ 97 ಮಂದಿ ಹಾಗೂ 17 ವರ್ಷದೊಳಗಿನವರ ಬಾಲಕರ ಸಿಂಗಲ್ಸ್‌ನಲ್ಲಿ 206 ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ 118 ಮಂದಿ ಕಣಕ್ಕಿಳಿಯಲಿದ್ದಾರೆ.

ಹೈದರಾಬಾದ್ ರೇಸ್

ಸೆಲೆಸ್ಟಿಯಲ್ ಗೆಲ್ಲುವ ನಿರೀಕ್ಷೆ

ಸಿಕಂದರ್ ಎ ಆಜಂ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೆಲೆಸ್ಟಿಯಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1:20ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೆಕ್ಸಿಕನ್ ವೇವ್ 1, ಫ್ಯೆರ್ಯೂ 4, ಡಿಲಿಜೆನ್ಸ್ 2
2ನೇ ರೇಸ್: ಶ್ಯಾಡೊಫಾಕ್ಸ್ 1, ಮಿಕ್ಸ್ ದಿ ಮ್ಯಾಜಿಕ್ 2, ಬೋಲ್ಡ್ ಬ್ಯೂಟಿ 5
3ನೇ ರೇಸ್: ಡೋಂಟ್ ಬ್ಲಾಕ್ ಮೈ ವೇ 1, ಹೋಪಿಂಗ್ ಸ್ಟಾರ್ 2, ಪೀನಟ್ 3
4ನೇ ರೇಸ್: ಟೂಟ್ಸಿ ಡಾರ್ಲಿಂಗ್ 3, ನಾಟಿ ಸೆನೊರಿಟ 1, ಡಿವೈನ್ ಫೈತ್ 4
5ನೇ ರೇಸ್: ಟಾಪ್ ಇನ್ ಕ್ಲಾಸ್ 1, ಲೆದರ್ ಬ್ಯಾಕ್ 1, ಫೆಡರರ್ 4
6ನೇ ರೇಸ್: ಸೆಲೆಸ್ಟಿಯಲ್ 3, ಪರ್ಸೆಪ್ಷನ್ 11, ವಾಕಿಂಗ್ ಥಂಡರ್ 6
7ನೇ ರೇಸ್: ಸಿಟಿ ಕ್ರ್ಯೂಝ್ 2, ಸೀಕ್ರೆಟ್ ಆಪ್ಷನ್ 1, ಬ್ಯಾಟ್ಲ್ ಆನ್ 3

ಉತ್ತಮ ಬೆಟ್: ಮೆಕ್ಸಿಕನ್ ವೇವ್

1ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬ್ಯಾಸ್ಕೆಟ್‌ಬಾಲ್ ಓರಿಯನ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಂಗ್ ಓರಿಯನ್ಸ್ ತಂಡವು ಪ್ರೊ. ಎನ್.ಸಿ.ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭಾನುವಾರ 93–64ರಿಂದ ಸದರ್ನ್ ಬ್ಲ್ಯೂಸ್ ತಂಡದ ವಿರುದ್ಧ ಸುಲಭ ಜಯ ದಾಖಲಿಸಿತು.

ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡ ಓರಿಯನ್ಸ್ ಆಟಗಾರರು ನಿರಾಯಾಸವಾಗಿ ಗೆಲುವು ತಮ್ಮದಾಗಿಸಿಕೊಂಡರು. ಸುಜನ್ 26 ಅಂಕ ಗಳಿಸಿದರೆ, ಶಶಾಂಕ್ (17) ಹಾಗೂ ಅಭಿಷೇಕ್ (16) ಉತ್ತಮ ಬೆಂಬಲ ನೀಡಿದರು. ಸದರ್ನ್ ತಂಡದ ವೆಂಕಟ್ ಹಾಗೂ ರೋಹನ್ ತಲಾ 13 ಅಂಕ ಸಂಪಾದಿಸಿದರು.

ದಿನದ ಇತರ ಪಂದ್ಯಗಳಲ್ಲಿ ಡಿವೈಇಎಸ್ ಬೆಂಗಳೂರು ತಂಡವು 75–63ರಿಂದ ದಕ್ಷಿಣ ಕನ್ನಡ ಜಿಲ್ಲಾ ತಂಡದ ವಿರುದ್ಧ; ಬ್ಯಾಂಕ್ ಆಫ್ ಬರೋಡಾ ತಂಡವು 96–56ರಿಂದ ವಿವೇಕ್ಸ್ ತಂಡದ ವಿರುದ್ಧ; ಎಂಎನ್‌ಕೆ ರಾವ್ ತಂಡವು 80–70ರಿಂದ ಜೆವಿಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು. ಬೀಗಲ್ಸ್ ಜೊತೆಗಿನ ಹಣಾಹಣಿಯಲ್ಲಿ ಕೆಎಸ್‌ಪಿ ತಂಡವು ಪಂದ್ಯದಿಂದ ಹೊರನಡೆಯಿತು. ಎಂಎನ್‌ಕೆ ರಾವ್ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಪಂದ್ಯಗಳು ನಡೆದವು.

ಮಂಗಳೂರಿನಲ್ಲಿ 'ಸ್ವಿಮ್ ಗಾಲಾ' ರಾಜ್ಯ ಮಟ್ಟದ ಈಜು ಸ್ಪರ್ಧೆ

ಚಿಂತನ್ ಶೆಟ್ಟಿ, ಧೃತಿ ಫರ್ನಾಂಡಿಸ್ ಮಿಂಚು

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡುತ್ತಿರುವ ಲಕ್ಷ್ಯನ್ ಅಕಾಡೆಮಿಯ ಚಿಂತನ್ ಎಸ್. ಶೆಟ್ಟಿ ಮಂಗಳ ಈಜು ಕ್ಲಬ್ ಮತ್ತು ಪನಾಮ ಕಾರ್ಪೊರೇಷನ್ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಈಜು ಸ್ಪರ್ಧೆ 'ಸ್ವಿಮ್ ಗಾಲಾ'ದಲ್ಲಿ ಮಿಂಚಿದರು.

ಮಂಗಳ ಈಜುಕೊಳದಲ್ಲಿ ನಡೆದ ಸ್ಪರ್ಧೆಯ ಮೆಡಲಿಸ್ಟ್ ಪುರುಷರ 1ನೇ ವಿಭಾಗದ 50 ಮೀಟರ್ಸ್ ಬಟರ್‌ಫ್ಲೈಯಲ್ಲಿ ಅವರು ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ನಗರದ ವಿ ಒನ್ ಈಜು ಕೇಂದ್ರದ ರಿಯಾನಾ ಧೃತಿ ಫರ್ನಾಂಡಿಸ್ ಮೊದಲಿಗರಾದರು.

ಫಲಿತಾಂಶಗಳು: 50 ಮೀ ಬಟರ್‌ಫ್ಲೈ: ಮೆಡಲಿಸ್ಟ್ ಪುರುಷರ 1ನೇ ವಿಭಾಗ: ಚಿಂತನ್ ಎಸ್.ಶೆಟ್ಟಿ (ಲಕ್ಷ್ಯನ್ ಅಕಾಡೆಮಿ)–1. ಕಾಲ: 26.97 ಸೆಕೆಂಡ್, ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ವಿಒನ್ ಈಜುಕೇಂದ್ರ)–2, ಅನ್ವಿತ್ ರಾಜ್ (ಪುತ್ತೂರು ಈಜುಕೇಂದ್ರ)–3; ಮೆಡಲಿಸ್ಟ್ 2ನೇ ವಿಭಾಗ: ಯತಿನ್ ಎಂ.ಎನ್ (ಪಿಇಟಿ ಈಜು ಕೇಂದ್ರ, ಮಂಡ್ಯ)–1. ಕಾಲ: 34.69ಸೆ, ಅವನೀಶ್ ನಾಯಕ್ (ವಿ ಒನ್)–2, ಸ್ನಿತಿಕ್ ಎನ್ (ವಿ ಒನ್)–3; ಪುರುಷರ ಗುಂಪು–1: ಸಚಿನ್ ಚಿತ್ತರಂಜನ್ ಪೂಜಾರಿ (ಜೈ ಹಿಂದ್ ಈಜು ಕ್ಲಬ್)–1.ಕಾಲ: 31.13ಸೆ, ತರುಣ್ ಗೌಡ ವಿ (ವಿಜಯನಗರ ಈಜುಕೇಂದ್ರ, ಬೆಂಗಳೂರು)–2, ನಿರಂತ್ ಕುಮಾರ್ ಗೌಡ (ವಿಜಯನಗರ)–3; ಗುಂಪು–2: ಶಶಾಂಕ್ ಡಿ.ಎಸ್ (ವಿಒನ್)–1. ಕಾಲ: 33.53ಸೆ, ಕಿಂತನ್ ಸಿ (ಹಾಸನ ಈಜು ಕ್ಲಬ್)–2, ಆರುಷ್ ಕರ್ಕೇರ (ಜೈ ಹಿಂದ್)–3; ಗುಂಪು 5: ರತನ್ ಜಿಎಂ (ಎಂಎನ್‌ಸಿ ಅಕಾಡೆಮಿ)–1. ಕಾಲ: 21.13ಸೆ, ಮೋಹಕ್ ಗೌಡ (ಪಿಕೆ ಕೇಂದ್ರ ಹಾಸನ)–2, ಸಾತ್ವಿಕ್ ಮರೆಲ್ಲ (ವಿಬ್ಗಯೊರ್ ಬೆಂಗಳೂರು)–3; ಬ್ಯಾಕ್‌ಸ್ಟ್ರೋಕ್: 25 ಮೀ: ಗುಂಪು–1: ಗೃತಿಕ್ ಎಂ (ಎಂಡಿಎಸ್‌ಎ)–1. ಕಾಲ: 19.84 ಸೆ, ನಮಂತ್ ಗೌಡ (ಹಾಸನ)–2, ಶ್ರೀರಂಗ (ಮಲೆನಾಡು ಶಿವಮೊಗ್ಗ ಈಜು ಸಂಸ್ಥೆ)–3; ಬ್ಯಾಕ್ ಸ್ಟ್ರೋಕ್: 50 ಮೀ, ಗುಂಪು–1: ಗ್ಯಾನ್ ಡಿ (ಮಂಗಳ)–1. ಕಾಲ: 28.91 ಸೆ, ಅಮನ್ ರಾಜ್ (ಪುತ್ತೂರು)–2, ವಾಫಿ ಅಬ್ದುಲ್ ಹಕೀಂ (ಮಂಗಳ)–3; ಗುಂಪು 2: ಯತಿನ್ (ಪಿಇಟಿ)–1. ಕಾಲ: 36.50ಸೆ, ಸ್ನಿತಿಕ್ ಎನ್ (ವಿ ಒನ್)–2, ಅವನೀಶ್ (ವಿಒನ್)–3; ಬಾಲಕರ ಗುಂಪು 3: 50 ಮೀ: ಘನಶ್ಯಾಮ್ (ಡಿಕೆವಿ)–1. ಕಾಲ: 38.85ಸೆ, ಕವಿನ್ ಹೊನ್ನಳ್ಳಿ (ಶಿವಮೊಗ್ಗ)–2, ನೀಲಬ್ ಸುವರ್ಣ (ಜೈ ಹಿಂದ್)–3; ಫ್ರೀ ಸ್ಟೈಲ್: ಪುರುಷರ ಗುಂಪು–1, 100 ಮೀ: ಚರಿತ್ ಅಮೀನ್ (ಪುತ್ತೂರು)–1. ಕಾಲ: 1ನಿ3:31ಸೆ, ಸಾಕೇತ್ ಶೆಟ್ಟಿ (ಮಂಗಳ)–2, ಧ್ರುವ್ ಭಂಡಾರಿ (ಮಂಗಳ)–3; ಗುಂಪು 2: ಅಚ್ಯುತ್ ಶರ್ಮ (ಡಿಕೆವಿ)–1. ಕಾಲ: 1ನಿ7:47ಸೆ, ಚಿನ್ಮಯ್ (ವಿಜಯನಗರ)–2, ಕಿಂತನ್ (ಹಾಸನ)–3; ಬಟರ್‌ಫ್ಲೈ: 50 ಮೀ, ಗುಂಪು3: ಶಾನ್ (ಜೈ ಹಿಂದ್)–1. ಕಾಲ: 35.53ಸೆ, ಸಮೃದ್ಧ್ (ಪಿಇಟಿ)–2, ವಿಹಾನ್ (ಹಾಸನ)–3.

ಮೆಡಲಿಸ್ಟ್ ಮಹಿಳೆಯರ 1ನೇ ವಿಭಾಗ: 50 ಮೀ ಬಟರ್‌ಫ್ಲೈ: ರಿಯಾನಾ ಧೃತಿ ಫರ್ನಾಂಡಿಸ್ (ವಿಒನ್)–1. ಕಾಲ: 31.78 ಸೆ, ವರ್ಷಿಣಿ ರಾವ್ (ಮಂಗಳ ಈಜು ಕ್ಲಬ್)–2, ದ್ವಿಷಾ ಶೆಟ್ಟಿ (ವಿಒನ್)–3; ಮೆಡಲಿಸ್ಟ್ ಮಹಿಳೆಯರ 2ನೇ ವಿಭಾಗ: 50 ಮೀ ಬಟರ್‌ಫ್ಲೈ: ಆರಾಧ್ಯಾ ಆಚಾರ್ (ಮಂಗಳ)–1. ಕಾಲ: 34.66ಸೆ, ಚಾರ್ವಿ ಎಂ (ಮಂಗಳ)–2 ದಿಯಾ ನಾಯಕ್ (ವಿ ಒನ್)–3; ಮಹಿಳೆಯರ ಗುಂಪು–1: ಸಾನ್ವಿ (ವಿ ಒನ್)–1. ಕಾಲ: 40.94 ಸೆ, ಪೋಷಿಕಾ ಶೆಟ್ಟಿ (ವಿಒನ್)–2, ಶ್ರಾವ್ಯಾ ಭಟ್ (ಮಂಗಳ)–3; ಗುಂಪು 2: ರೀಮಾ ಎ.ಎಸ್ (ವಿ ಒನ್)–1. ಕಾಲ: 37.47 ಸೆ, ಸಾನ್ವಿ ಸಿ.ಎಚ್ (ಪುತ್ತೂರು)–2, ಯಶಿತಾ (ಜಿಎಸ್‌ಎ ಮೈಸೂರು)–3; ಗುಂಪು 5: ಅಹಾನಾ ಅಭಿಷೇಕ್ (ಜೈ ಹಿಂದ್)–1. ಕಾಲ: 19.59ಸೆ, ಸಾರಾ ಎಲಿಶಾ ಪಿಂಟೊ (ವಿಒನ್)–2, ತಕ್ಷಿ ಮೆಂಡನ್ (ಜೈ ಹಿಂದ್)–3; ಬ್ಯಾಕ್‌ಸ್ಟ್ರೋಕ್: 25 ಮೀ: ಗುಂಪು–1: ಐಸಿರಿ ಎ (ಪಿಇಟಿ ಮಂಡ್ಯ)–1.ಕಾಲ: 20.94ಸೆ, ಖುಷಿ ಕುಮಾರ್ (ವಿಒನ್)–2, ಖರೋಲ್ ಗೋಕಾವಿ (ಶ್ರೀ ಚೈತನ್ಯ ಹುಬ್ಬಳ್ಳಿ)–3; ಬ್ಯಾಕ್ ಸ್ಟ್ರೋಕ್: 50 ಮೀ, ಗುಂಪು–1: ಲಾಸ್ಯಾ ಕಿಶನ್ (ಪುತ್ತೂರು)–1.ಕಾಲ: 33.88ಸೆ, ಪೂರ್ವಿ ಎಂ (ಮಂಗಳ)–2, ವರ್ಷಿಣಿ ರಾವ್ (ಮಂಗಳ)–3; 2ನೇ ವಿಭಾಗ: ದೇವಿಕಾ (ವಿ ಒನ್)–1. ಕಾಲ: 37.40 ಸೆ, ಚಾರ್ವಿ (ಮಂಗಳ)–2, ದೇಸ್ನಾ ಬಂಗೇರ (ಜೈ ಹಿಂದ್)–3; ಗುಂಪು3, 50 ಮೀ: ಅಲಿತಾ ಡಿಸೋಜ (ವಿಒನ್)–1.ಕಾಲ: 40.06ಸೆ, ವೃದ್ಧಿ (ಡಿಕೆವಿ)–2, ನಿಶ್ಕಾ (ವಿಒನ್)–3.



ಮಹಿಳೆಯರ ಗುಂಪು 1ರ 100 ಮೀ ಫ್ರೀ ಸ್ಟೈಲ್‌ನಲ್ಲಿ ಚಿನ್ನ ಗೆದ್ದ ಮೈಸೂರು ಎಂಎಎಸ್‌ಪಿಯ ನಿಧಿ ಎಸ್ ಅವರನ್ನು ಒಲಿಂಪಿಯನ್ ಹಾಕಿಪಟು ಧನರಾಜ್ ಪಿಳ್ಳೆ ಅಭಿನಂದಿಸಿದರು

ಚಿಂತನ್ ಶೆಟ್ಟಿ

ರಾಜ್ಯ ತಂಡಕ್ಕೆ ಚಿನ್ನ

ಬೆಂಗಳೂರು: ಕರ್ನಾಟಕದ ಅಥ್ಲೀಟ್‌ಗಳು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 40ನೇ ಜೂನಿಯರ್ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಓಟ ಮುಂದವರಿಸಿದ್ದು, ಭಾನುವಾರ 20 ವರ್ಷದೊಳಗಿನವರ ಪುರುಷರ 4x100 ರಿಲೇ ಚಿನ್ನದ ಪದಕ ಗೆದ್ದುಕೊಂಡರು. ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು.

ಸಂದೇಶ್ ಕಂಬಳಿ, ಸರ್ವಜೀತ್, ಆಯುಷ್ ದೇವಾಡಿಗ ಹಾಗೂ ಪ್ರತೀಕ್ ಡಿ. ಅವರನ್ನೊಳಗೊಂಡ ಕರ್ನಾಟಕ ತಂಡವು 41.71 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಸ್ವರ್ಣದ ಪದಕ ತನ್ನದಾಗಿಸಿಕೊಂಡಿತು. ತಮಿಳುನಾಡು (41.73) ಹಾಗೂ ಪಂಜಾಬ್ (41.75) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದವು.

ಮಹಿಳೆಯರ ವಿಭಾಗದಲ್ಲಿ ನೀಲಮ್ಮ ಎಂ., ನೂಪುರ ಹೊಳ್ಳ, ರಂಜಿತ ಕೆ. ಹಾಗೂ ಶಮತ್ಮಿಕ ಜೋಯಿಸ್ ಅವರು (47.75ಸೆ.) ಬೆಳ್ಳಿ ಜಯಿಸಿದರು. 47.72ಸೆ.ಗಳಲ್ಲಿ ಗುರಿಮುಟ್ಟಿದ ಮಹಾರಾಷ್ಟ್ರ ಚಿನ್ನದ ಪದಕ ಗೆದ್ದರೆ, ಕೇರಳ (49.47ಸೆ.) ಕಂಚು ತನ್ನದಾಗಿಸಿಕೊಂಡಿತು.

16 ವರ್ಷದೊಳಗಿನ ಬಾಲಕಿಯರ 1000 ಮೀಟರ್ ಮೆಡ್ಲೆ ರಿಲೆಯಲ್ಲಿ ಮಹಾರಾಷ್ಟ್ರ (2ನಿ.17.36ಸೆ.) ಚಿನ್ನ ಗೆದ್ದರೆ, ಕರ್ನಾಟಕ (2.19.43ಸೆ.) ಬೆಳ್ಳಿ ಪದಕವನ್ನು ಹಾಗೂ ಕೇರಳ (2ನಿ.22.92ಸೆ.) ಕಂಚಿನ ಪದಕವನ್ನು ಜಯಿಸಿದವು.

18 ವರ್ಷದೊಳಗಿನ ಬಾಲಕರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ರಾಜ್ಯದ ಮನ್ವಿತ್ ಎನ್. (7.83 ಮೀ.) ಕಂಚಿನ ಪದಕ ಜಯಿಸಿದರು.